Sri G. C. PATIL (Kalghatgi).—I second the motion.

MADAM SPEAKER.—Motion moved :

"That Sri B. P. Kadam be elected as Deputy Speaker of the Legislative Assembly."

Now Sri S. M. Yahya to move his motion.

Sri S. M. YAHYA (Bhatkal).—I move :

"That Sri B. P. Kadam be elected as Deputy Speaker of the Legislative Assembly."

Sri R. V. KADAM (Nipani).—I second the motion.

MADAM SPEAKER.—Motion moved :

"That Sri B. P. Kadam be elected as Deputy Speaker of the Legislative Assembly."

Now all the motions are moved and they are all similar. I will put the motion to the vote of the House.

The question is :

"That Sri B. P. Kadam be elected as Deputy Speaker of the Legislative Assembly."

The motion was adopted.

MADAM SPEAKER.—Sri B. P. Kadam is elected as Deputy Speaker. I request Sri R. Gundu Rao and Sri R. S. Patil to conduct Sri B. P. Kadam to his seat.

(The Deputy Speaker was conducted to his seat.)

Revised Budget Estimates for 1972-73—General Discussion

(contd.)

† **Sri PRABHAKAR TELKAR** (Kalgi).—Madam Speaker, I must congratulate our Finance Minister-Sri M. Y. Ghorpade, for presenting a well-balanced budget which provides something to every person from all walks of life of our State. I must also congratulate him for clearing the overdraft of Rs. 71 crores which was inherited by our Government. Further, I must also congratulate him for getting Central assistance for Kalinadi Hydro-electric project. I want to bring to the notice of the Government that there is a feeling in some of the minds of our friends that much improvements and developments have been made in Hyderabad Karnatak area during the regime of Sri Veerendra Patil Ministry. But I want to respectfully submit that this is a wrong notion. If at all any improvement or development has been made it is only in some places which were near and dear to Sri Veerendra Patil but not the entire Hyderabad Karnatak area.

(SRI PRABHAKAR TELKAR)

Regarding the irrigation works, there is absolutely no irrigation work that has been taken up for the last 5–10 years. I may submit that when the Government has been taken up the Kalinadi Project, similarly they ought to have taken up the Upper Krishna Project and Bendikere project in Gulbarga District. I want to suggest to our Finance Minister that Shorapur, Shahpur and Jevergi Taluks are known as drought affected areas and in order to help these talukas, the Government has already drawn up a plan to construct Narayanpur Dam and if this plan is completed, it would irrigate about 1.90 lakh acres of land. Government has already spent about 13 crores of rupees on the canal work and this canal work is completed to the extent of 15 miles. If the Government were to spend some more amount, I hope, this canal work can be completed within a year or two. This would help to irrigate an area of about 1.90 lakhs of acres.

3-00 P.M.

Therefore I earnestly request the Government to take this work and complete it as soon as possible which requires only 17 crores more. Then there is another project–Bendikere Preject–which also does not require more amount. If this project is taken up, the Gulbarga District which is known as a drought striken area, will be irrigated.

I want to point out to the Government as well as the Finance Minister the source of taxes. There is no article or business which is left over without being taxed. I can suggest one more thing to be taxed and that is marriage. If we tax on every marriage and also every family which will have 4th child, we will get some good amount. The people are spending lakhs of rupees on marriages. There are people who will be having more than 4 children. If we tax every new couple and the family which will be having more than 4 childern, we may get sufficient amount of revenue and this amount could be utilised for the developmental works in the State. Therefore, these two points may be considered for getting more revenue to the State.

Regarding education, the Government have upgraded 250 High Schools into Colleges. This is a good thing. But some people have made education as a business. The President of the Hyderabad Karnataka Education Society is one of those persons who are doing this business. They will be getting huge amounts of money by way of donations. I want to bring to your kind notice in this connection that the President of this Education Society has been allotted in Bangalore 2 acres of land worth more than 2 lakhs for Rs. 84,000 only. There is an enquiry going on against this person and that enquiry is pending. If such persons are encouraged, I am afraid, the Government would be encouraging the private people to make money and the education will become costlier. Therefore, I request the Government to make note of it and take necessary action in this regard

otherwise in the college which is to be opened here in Bangalore the people will be taxed heavily for getting admission. The Government should also take action to proceed with the enquiry which was ordered for misappropriation and mismanagement of a Society by this person.

The Hyderabad Karnataka Area is very much backward in industries. I request the Government to make up its mind to open some big industries in this area, otherwise this area will be backward for ever. So far no big industry has come up in this area for the last several years. Therefore I request the Government to make note of this fact and see that some industries in Gulbarga District are started. With these few words, I thank the Chair and conclude my speech.

[MR. DEPUTY SPEAKER in the Chair]

ಶ್ರೀ ಶರಣಪ್ಪ (ದೇವದುರ್ಗ).—ಮಾನ್ಯ ಅಧ್ಯಕ್ಷರೇ, ಈ ದಿನ ಮೈಸೂರು ರಾಜ್ಯದ ಹಣಕಾಸಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ ಮಾಡುವಾಗ ಅನೇಕ ಬೇಡಿಕೆಗಳ ಬಗ್ಗೆ ನಾನು ಕೆಲವು ಸಲಹಾ ಸೂಚನೆಗಳನ್ನು ನಿಡಬೇಕೆಂದು ಬಯಸುತ್ತೇನೆ. ಈ ವರ್ಷದ ಬಡ್ಜೆಟ್ಟಿನ ಅಂದಾಜಿನ ಆಯವ್ಯಯದ ಮೇಲೆ ವಿಚಾರಮಾಡುತ್ತಿದ್ದೇನೆ. 1962 ನೇ ಇಸವಿಗಿಂತ ಡಬ್ಬಲ್ ಎಂದರೆ 1962 ರಲ್ಲಿ 135 ಕೋಟಿ ಅಂದಾಜು ಇದ್ದಂಥ ಒಂದು ಅಂದಾಜು ಪತ್ರ 10 ವರ್ಷಗಳಲ್ಲಿ ಎರಡು ಪಟ್ಟು ಹೆಚ್ಚಾಗಿದೆ ಎನ್ನುವ ಭಾವನೆ ನಮ್ಮಲ್ಲಿ ಬರುತ್ತದೆ. ಈ ಬಡ್ಜೆಟ್‌ನ್ನು ನಾವು ನೋಡಿದ್ದೇ ಆದರೆ, ಅದು ಒಂದು ಕರಡಿ ಕಂಡಂತೆ ಆಗುತ್ತದೆ. ಕರಡಿಗೆ ಕೂದಲು ಇರುವುದರಿಂದ ಅದು ಸೊರಗಿದೆಯೋ ಅಥವಾ ದಪ್ಪನಾಗಿದೆಯೋ ಎನ್ನುವ ವಿಚಾರ ನಮಗೆ ಗೊತ್ತಾಗುವುದಿಲ್ಲ. ಅದೇ ರೀತಿಯಾಗಿ ನಮ್ಮ ರಾಜ್ಯದ ಹಣಕಾಸಿನ ಒಂದು ಚಿತ್ರ ಇದೆ. ನಾವು ಎಷ್ಟರಮಟ್ಟಿಗೆ ಯಾವ ಕಾರ್ಯಗಳನ್ನು ಮಾಡಬೇಕು, ಯಾವ ಯಾವ ಬೇಡಿಕೆಗಳಲ್ಲಿ ಯೋಜನೆಗಳನ್ನು ಕಡಿಮೆ ಮಾಡಿ, ಸಾರ್ವಜನಿಕರಿಗೆ ಉಪಯೋಗ ಬರುವಂತಹ ಬೇಡಿಕೆಗಳನ್ನು ಜಾಸ್ತಿ ಮಾಡಬೇಕು ಮತ್ತು ಯಾವ ಬೇಡಿಕೆಗಳು ಅವಶ್ಯಕ ಎಂಬ ವಿಚಾರ ಮಾಡಬೇಕಾಗಿದೆ. ಇವತ್ತಿನದಿವಸ ಕೆಲವೊಂದು ವಿಚಾರಗಳನ್ನು ಹೇಳುತ್ತಾ ಮಾನ್ಯ ಅರ್ಥಮಂತ್ರಿಗಳು ಹೇಳಿದ ಕೆಲವೊಂದು ವಿಷಯಗಳನ್ನು ಸಮರ್ಥಿಸುತ್ತಾ ಕೆಲವೊಂದು ವಿಷಯಗಳಿಗೆ ನಾನು ನನ್ನ ವಿರೋಧವನ್ನು ವ್ಯಕ್ತಪಡಿಸುತ್ತೇನೆ.

ಈಗ ಈ ಒಂದು ಆಯವ್ಯಯ ಪಟ್ಟಿಯನ್ನು ನಾವು ನೋಡಿದ್ದೇ ಆದರೆ ಕೆಲವೊಂದು ಬೇಡಿಕೆಗಳಲ್ಲಿ ಸಾಮಾನ್ಯವಾಗಿ ಜನರಲ್ ಅಡ್ಮಿನಿಸ್ಟ್ರೇಷನ್, ಪೋಲೀಸ್ ಮತ್ತು ಮಿಸಲೇನಿಯಸ್ ಬೇಡಿಕೆಗಳನ್ನು ಕೂಡಿಸಿದ್ದೇ ಆದರೆ ಒಟ್ಟು ಮೊತ್ತ ಸುಮಾರು 35 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ ಎಂದು ತಿಳಿಸಿದ್ದಾರೆ. ಆದರೆ ಈ ಇಲಾಖೆಗಳ ಜೊತೆಗೆ ಫ್ಯಾಮಿಲಿ ಪ್ಲಾನಿಂಗ್ ಇಲಾಖೆಯನ್ನು ಸೇರಿಸಿದರೆ, ಅದು 50 ಕೋಟಿ ರೂಪಾಯಿಗಳಿಗೆ ಹೋಗಬಹುದು ಎಂದು ನನಗನ್ನಿಸುತ್ತದೆ. ಫ್ಯಾಮಿಲಿ ಪ್ಲಾನಿಂಗ್ ಸಾಮಾನ್ಯ ಜನತೆಗೆ ಉಪಯುಕ್ತವಾದುದು ಅಲ್ಲ ಮತ್ತು ಅಷ್ಟು ಹಿತಕರವಾದುದಲ್ಲ. ಜನರಲ್ ಅಡ್ಮಿನಿಸ್ಟ್ರೇಷನ್, ಪೋಲೀಸ್ ಮತ್ತು ಮಿಸಲೇನಿಯಸ್ ಹೆಡ್ಸ್‌ಗೆ ಮತ್ತು ಪ್ಯಾಮಿಲಿ ಪ್ಲಾನಿಂಗ್‌ಗೆ ಸುಮಾರು 50 ಕೋಟಿ ರೂಪಾಯಿ ಖರ್ಚು ಮಾಡುವುದಕ್ಕಿಂತ ಇನ್ನು ಅನೇಕ ಬೇಡಿಕೆಗಳು ಏನು ನಮ್ಮ ಮುಂದೆ ಇವೆ, ಅವುಗಳಿಗೆ ಸಾಕಷ್ಟು ಹಣ ಬಡ್ಜೆಟ್ಟಿನಲ್ಲಿ ಒದಗಿಸಿದ್ದೇ ಆದರೆ ದೇಶದಲ್ಲಿ ಅಭಿವೃದ್ಧಿ ಮತ್ತು ಸಾಮಾನ್ಯ ಜನತೆಯು ಅಭಿವೃದ್ಧಿ ಆಗುವುದರಲ್ಲಿ ಮತ್ತು ಲಾಭ ದೊರೆಯುವುದರಲ್ಲಿ ಅನುಕೂಲವಾಗುತ್ತಿತ್ತು ಎಂದು ನನಗನ್ನಿಸುತ್ತದೆ. ಈವೊತ್ತಿನ ದಿವಸ ನಾವು ಈ ಒಂದು ಯೋಜನೆಗಳನ್ನು ಪರಿಪೂರ್ಣ ಮಾಡಬೇಕಾದರೆ ಸಾಕಷ್ಟು ಹಣ ಒದಗಿಸಬೇಕಾಗುತ್ತದೆಂದು ಅನ್ನಿಸುತ್ತದೆ. ನೀರಾವರಿ ಲೋಕೋಪಯೋಗಿ, ಆರೋಗ್ಯ, ವಿದ್ಯಾಭ್ಯಾಸ ಮತ್ತು ಅಭಿವೃದ್ಧಿ ಖಾತೆಗಳು ವಿದ್ಯುಚ್ಛಕ್ತಿ ಮತ್ತು ವ್ಯವಸಾಯ, ಹಿಂದುಳಿದ ಜನತೆಗೆ ಅಭಿವೃದ್ಧಿ ಸೌಕರ್ಯ ಸೌಲಭ್ಯಗಳ ಬಗ್ಗೆ ವಿಚಾರ ಮಾಡಿದರೆ, ಈ ಬೇಡಿಕೆಗಳಿಗೆ ಆಯವ್ಯಯ ಪಟ್ಟಿಯಲ್ಲಿ ಹಣಕಾಸಿನ ವ್ಯವಸ್ಥೆ ಮಾಡಿರುವುದು ತೃಪ್ತಿಕರವಾಗಿಲ್ಲ ಎಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಈ ಸಾರ್ವಜನಿಕ ಅಭಿವೃದ್ಧಿ ಮತ್ತು ಪರಿಶಿಷ್ಟವರ್ಗದವರಿಗೆ ಸೌಲಭ್ಯ ಕೊಡುವುದು ಅವಶ್ಯಕ ಎಂದು ತಾವು ತಮ್ಮ ಬಡ್ಜೆಟ್ ಭಾಷಣದಲ್ಲಿ ಏನು ಹೇಳಿದ್ದೀರಿ ಅದನ್ನು ನೋಡಿದ್ದೇ ಆದರೆ ಕೆಲವೊಂದು ವಿಷಯಗಳಲ್ಲಿ ಏನು ಹಣವನ್ನು ಒದಗಿಸಿಕೊಟ್ಟಿದ್ದೀರಿ ಇದು ಸರಿಯಾದ ರೀತಿಯಲ್ಲಿಲ್ಲ ಎಂದು ನಾನು

(ಶ್ರೀ ಶರಣಪ್ಪ)

ಹೇಳಲು ಇಚ್ಛೆಪಡುತ್ತೇನೆ. ಈಗ ಈ ಒಂದು ದೃಷ್ಟಿಯಲ್ಲಿ ಸಾಮಾನ್ಯವಾಗಿ ನಮ್ಮ ದೇಶದ, ನಮ್ಮ ಭಾಗದಲ್ಲಿ ಸಾಕಷ್ಟು ಸಾರ್ವಜನಿಕರಿಗೆ ಹಿತವಾಗುವಂತೆ ಸಾಮಾನ್ಯ ಜನರಿಗೆ ಸಹಾಯ ದೊರಕ ಬೇಕಾದರೆ, ಕೆಲವೊಂದು ಅಂಶಗಳ ಬಗ್ಗೆ ಸರ್ಕಾರದ ಧೋರಣೆಯನ್ನು ಸ್ಪಷ್ಟೀಕರಿಸಿ ಇದರ ಬಗ್ಗೆ ಒಂದು ನಿಲುವನ್ನು ತಾಳಬೇಕು. ಜನರಲ್ ಆಗಿ ಒಂದು ಮಾತನ್ನು ಹೈದರಾಬಾದು ಕರ್ಣಾಟಕದ ಬಗ್ಗೆ ನಾನು ಇಲ್ಲಿ ಇಡುತ್ತೇನೆ. ಈಗ ಮಾನ್ಯ ಅರ್ಥಸಚಿವರು ಕೃಷ್ಣ ಮೇಲ್ದಂಡೆಯ ಬಗ್ಗೆ ಕೆಲಸ ಮುಗಿಸಬೇಕೆಂದು 100 ಕೋಟಿ ಮೇಲ್ಪಟ್ಟು ಹಣ ಬೇಕಾಗುತ್ತದೆ ಎಂದು ಹೇಳಿರುವುದು ಸಹಜ ವಾದುದು. ಈ ಒಂದು ಭಾಗದಲ್ಲಿ 1·2 ಲಕ್ಷ ಮೇಲ್ಪಟ್ಟು ಎಕರ ನೀರಾವರಿ ಆಗುವ ನಾರಾಯಣ ಪುರ ಮತ್ತು ಆಲಮಟ್ಟಿ ಡ್ಯಾಮುಗಳನ್ನು ನಿರ್ಮಾಣಮಾಡುವುದಕ್ಕೆ ಬಡ್ಜೆಟ್ಟಿನಲ್ಲಿ ಕೇವಲ 1·2 ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ಅದರಲ್ಲಿ 20 ಲಕ್ಷ ರೂಪಾಯಿಗಳು ಬರೀ ಸಿಬ್ಬಂದಿ ವೇತನಕ್ಕೆ ಹೋಗುತ್ತದೆ. ಇದೇ ರೀತಿಯಲ್ಲಿ ಮುಂದುವರಿದರೆ ಈ ಪ್ರಾಜೆಕ್ಟ್ ಮುಗಿಸಲಿಕ್ಕೆ 100 ವರ್ಷಗಳಾದರೂ ಬೇಕಾಗುತ್ತದೆ ಎಂದು ನನಗೆ ಅನಿಸುತ್ತದೆ. ಈ ಪ್ರಾಜೆಕ್ಟ್ ಪೂರ್ಣವಾಗುವು ದನ್ನು ನಾವೆಲ್ಲ ಸದಸ್ಯರು ನೋಡುತ್ತೇವೋ ಇಲ್ಲವೋ ? ಇನ್ನು ಮುಂದಿನ ಪೀಳಿಗೆ ಈ ಪ್ರಾಜೆ ಕ್ಟನ್ನು ನೋಡಬೇಕಾಗುತ್ತದೆ. ಈ ಭಾಗದ ಅಭಿವೃದ್ಧಿಗಾಗಿ ಈ ರೀತಿ ಹಿಂದಕ್ಕೆ ಹೆಜ್ಜೆ ಇಟ್ಟರೆ ಇಂತಹ ದೊಡ್ಡಪ್ರಾಜೆಕ್ಟ್ ಯಾವಾಗ ಆಗಬೇಕು ? ಆದುದರಿಂದ ಈ ಒಂದು ಪ್ರಾಜೆಕ್ಟ್ ಬಗ್ಗೆ ತಾವು ಏನು ಹಣವನ್ನು ಒದಗಿಸಿದ್ದೀರಿ ಅದನ್ನು ಜಾಸ್ತಿ ಮಾಡಬೇಕು ಎಂದು ನನ್ನ ಪ್ರಾರ್ಥನೆ.

ಕ್ಷಾಮ ನಿವಾರಣೆಗೋಸ್ಕರ ಬಡ್ಜೆಟ್ಟಿನಲ್ಲಿ ಐದು ಕೋಟಿ ಚಿಲ್ಲರೆ ರೊಕ್ಕವನ್ನು ಒದಗಿಸಿದ್ದೀರಿ. ಅದೇ ರೀತಿ ಸಂಪೂರ್ಣ ಗುಲ್ಬರ್ಗ ಡಿವಿಷನ್ನಿಗೆ 20 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ಅದು ಹೇಗಿದೆ ಎಂದರೆ ಹೊಟ್ಟೆ ದಪ್ಪ, ಕೈಕಾಲು ಸಣ್ಣ ಎನ್ನುವಹಾಗೆ ಆಗುತ್ತದೆ. ಆ ದೃಷ್ಟಿಯಿಂದ ಕೆಲವು ಭಾಗಗಳಿಗೆ ಅಲಕ್ಷ್ಯ ಮಾಡಿದ್ದೇ ಆದರೆ ಇಡೀ ದೇಶದ ಅಭಿವೃದ್ಧಿಗೇ ಹಾನಿಯಾಗುತ್ತದೆ. ದೇಶದ ಅಭಿವೃದ್ಧಿ ಸರ್ವತೋಮುಖವಾಗಿ ಆಗಬೇಕಾದರೆ ಮತ್ತು ದೇಶ ಮುಂದುವರಿಯಬೇಕಾದರೆ, ಎಲ್ಲಾ ಡಿವಿಷನ್‌ಗಳಿಗೂ ಪ್ರಧಾನ್ಯತೆ ಕೊಡಬೇಕು, ಅದರಲ್ಲೂ ಮುಖ್ಯವಾಗಿ ಬಿಜಾಪುರ ಗುಲ್ಬರ್ಗ ಮತ್ತು ಬೀದರ್, ರಾಯಚೂರು ಜಿಲ್ಲೆಗಳಿಗೆ ತಮ್ಮ ಯೋಜನೆಯಲ್ಲಿ ಪ್ರಾಧಾನ್ಯತೆ ಕೊಡಬೇಕೆಂದು ಪ್ರಾರ್ಥಿ ಸುತ್ತೇನೆ. ಈ ಜಿಲ್ಲೆಗಳು ಯಾವಾಗಲೂ ಡ್ರಾಟ್ ಅಫ್‌ಕ್ಟೆಡ್ ಏರಿಯಾ ಆಗಿದೆ ಅಲ್ಲಿ 100 ವರ್ಷ ಗಳಲ್ಲಿ 75 ವರ್ಷ ಬರಗಾಲ ಬಂದಿದೆ. ಅಂದಮೇಲೆ ಈ ಒಂದು ವಿಚಾರದಲ್ಲಿ ಈ ಭಾಗಗಳಿಗೆ ಹೆಚ್ಚು ಪ್ರಾಧಾನ್ಯತೆ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಿಷಯ, ನಮ್ಮ ದೇಶದ ಹಣಕಾಸಿನ ಪರಿಸ್ಥಿತಿ ಚಿಂತಾಜನಕವಾಗಿದೆ ಎಂದು ತಾವು ಹೇಳಿದ್ದೀರಿ ನಿಜ. ಇದುವರೆಗೆ ಸುಮಾರು ನಾಲ್ಕುನೂರು ಕೋಟಿ ರೂಪಾಯಿಗಳು ನಮ್ಮ ಸರ್ಕಾರಕ್ಕೆ ಬರತಕ್ಕ ಹಣ ಇರುವಾಗ, ಅದನ್ನು ವಸೂಲು ಮಾಡುವ ಬಗ್ಗೆ ಯಾತಕ್ಕೆ ಸರಿಯಾದ ಮೆಜರ್ಸ್ಸನ್ನು ತೆಗೆದುಕೊಳ್ಳಲಿಲ್ಲ ಎಂದು ಕೇಳುತ್ತೇನೆ. ತಂದೆ ಮಕ್ಕಳ ಕಾಲದಿಂದ ಬಂದಂಥ ಲ್ಯಾಂಡ್ ರೆವಿನ್ಯೂ ರೇಟ್ ಈಗಲೂ ಇದೆ. ಅಂದರೆ 50 ವರ್ಷಗಳ ಕೆಳಗೆ ಇದ್ದಂಥ ಲ್ಯಾಂಡ್ ರೆವಿನ್ಯೂ, ಎಕರೆಗೆ ನಾಲ್ಕು ಆಣೆ, ಎಂಟು ಆಣೆ ಒಂದು ರೂಪಾಯಿ ಇದೆ. ಇದನ್ನು ಸರ್ಕಾರ ಶೀಘ್ರವಾಗಿ ವಿಚಾರಮಾಡಿ ರಿವಿಷನ್ ಮಾಡಿದ್ದೇ ಆದರೆ, ಅದರಿಂದ ಕೋಟ್ಯಾವಧಿ ರೂಪಾಯಿ ಉತ್ಪನ್ನ ಬರುತ್ತದೆ. ಅದರಿಂದ ಯಾರಿಗೂ ಅಷ್ಟು ಬಾಧಕ ಆಗುವುದಿಲ್ಲ ಮತ್ತು ಮಹತ್ತರವಾದ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಲ್ಯಾಂಡ್ ರೆವಿನ್ಯೂ ಜಾಸ್ತಿ ಮಾಡಬೇಕೆಂದು ತಮ್ಮ ಅಭಿ ಪ್ರಾಯವೇ ? ಮುಂಚೆ ಏನು ಹೇಳಿದ್ದೀರಿ ?

ಶ್ರೀ ಶರಣಪ್ಪ.—ಮಾಫಿ ಮಾಡಿ ಅಂತ ಹೇಳಲಿಲ್ಲ, ಇನ್‌ಕ್ರೀಸ್‌ಮಾಡಿ ಎಂದು ಹೇಳಿದೆ.

ಶ್ರೀ ಎಂ. ವೈ. ಘೋರ್ಪಡೆ.—ಎಷ್ಟು ಇನ್‌ಕ್ರೀಸ್ ಮಾಡಬೇಕು ?

ಶ್ರೀ ಶರಣಪ್ಪ.—ರಿವಿಷನ್ ಆಗಬೇಕು ಎನ್ನುವ ದೃಷ್ಟಿಯಿಂದ ಹೇಳಿದೆ. ಇಷ್ಟು ಅಂತ ಹೇಗೆ ಹೇಳಲಿಕ್ಕೆ ಆಗುತ್ತದೆ ? ಇದು ಬಹಳ ಹಳೆಯ ಕಾಲದ್ದು, ಆದ್ದರಿಂದ ಸ್ವಲ್ಪ ಹೆಚ್ಚು ಮಾಡಿದರೆ ಅದರಿಂದ ದೇಶಕ್ಕೆ ಸಾಕಷ್ಟು ಲಾಭವಾಗುತ್ತದೆ ಮತ್ತು ಪ್ರಗತಿಪರ ಯೋಜನೆಗಳಿಗೆ ಸಹಾಯ ವಾಗುತ್ತದೆ ಎಂದು ನನ್ನ ಅಭಿಪ್ರಾಯ. ಇನ್ನು ನಾನು ಮಾತನಾಡಬೇಕಾದ ಅನೇಕ ವಿಚಾರಗಳು ಇವೆ, ಆದರೆ ಸಮಯ ಇಲ್ಲದ ಕಾರಣ, ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಆಭಾರಿಯಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ, 1972-73ನೇ ಸಾಲಿನ ಆಯವ್ಯಯ ಪತ್ರವನ್ನು ಸ್ವಾಗತ ಮಾಡುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಮಾನ್ಯ ಆರ್ಥಿಕ ಮಂತ್ರಿಗಳು ತಂದಿರತಕ್ಕ ಈ ಪತ್ರವನ್ನು ನೋಡಿ ಸದ್ಯಕ್ಕೆ ಸಂತೋಷಪಡಬಹುದಾದರೂ 1973 ಮತ್ತು 1974ನೇ ವರ್ಷದಲ್ಲಿ ಈ ರಾಜ್ಯದ ಜನತೆಗೆ ಒಂದು ಎಚ್ಚರಿಕೆಯನ್ನು ಅವರು ಕೊಟ್ಟಿದ್ದಾರೆ. ಮುಂದಿನ ಎರಡು ವರ್ಷಗಳು ಆರ್ಥಿಕವಾಗಿ ಕಷ್ಟವಾಗಿ ರುತ್ತದೆ ಎನ್ನುವ ಪದವನ್ನು ಅವರ ಭಾಷಣದಲ್ಲಿ ಅಳವಡಿಸಿದ್ದಾರೆ. ಇದರಿಂದಾಗಿ ಆರ್ಥಿಕ ಕಷ್ಟ ವಿರುತ್ತದೆ ಎನ್ನುವುದನ್ನು ಒಪ್ಪಿಕೊಳ್ಳುವುದಾದರೂ ಕೂಡ ಕೇಂದ್ರ ಸರ್ಕಾರ ಹಾಗೂ ತೆರಿಗೆಗಳು ಅಥವಾ ಬೇರೆ ರೂಪದಲ್ಲಿ ನಮ್ಮದೇ ಆದಂಥ ಒಂದು ಪ್ರಯತ್ನದ ಮುಖಾಂತರ ಪರಿಹಾರ ಮಾಡ ತಕ್ಕ ವಿಷಯಗಳನ್ನು ಮಾತ್ರ ಅದು ಸೂಚನೆ ಮಾಡುತ್ತದೆ. ಅದರಿಂದಾಗಿ 1973 ಮತ್ತು 1974ನೇ ವರ್ಷಗಳು ಸಂತೋಷಕರವಾದ ವರ್ಷಗಳಾಗಿರುವುದಕ್ಕೆ ಸಾಧ್ಯವಿಲ್ಲವೆಂದು ಯಾರಾದರೂ ತಿಳಿದು ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳಿಗೆ ಆಯವ್ಯಯ ಪತ್ರವನ್ನು ಮಂಡಿಸುವುದಕ್ಕೆ ಸಾಕಷ್ಟು ಅವಕಾಶ ಇಲ್ಲದೆ, ಈ ಒಂದು ವಿಷಯವನ್ನು ಅಳವಡಿಸಿರ ಬೇಕು. ಆದರೆ ಮುಂದಿನ ವರ್ಷದ ಆಯವ್ಯಯ ಪತ್ರವನ್ನು ಮಂಡಿಸುವುದಕ್ಕೆ ಸಾಕಷ್ಟು ಕಾಲಾವ ಕಾಶವಿರುವುದರಿಂದ, ಸಾಲ ಮತ್ತು ತೆರಿಗೆಗಳ ಮುಖಾಂತರ ಈ ರಾಜ್ಯದ ಜನತೆಯನ್ನು ನಾವು ಇನ್ನೂ ಹೆಚ್ಚಿನ ತೊಂದರೆಗೆ ಒಳಪಡಿಸುವುದಕ್ಕಿಂತ, ಯಾವ ಯಾವ ಬಾಬಿನಲ್ಲಿ ಉಳಿತಾಯ ಮಾಡುವು ದಕ್ಕೆ ಸಾಧ್ಯವಿದೆ ಎನ್ನುವುದನ್ನು ತಿಳಿದುಕೊಂಡು, ಉಳಿತಾಯ ಮಾಡಿದ್ದೇ ಆದರೆ ಈ ರಾಜ್ಯದ ಜನತೆಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ.

ಕಾರ್ಮಿಕರ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ಜನರಿಗೆ ಉದ್ಯೋಗ ಒದಗಿಸುವುದ ಕ್ಕಾಗಿ ಎರಡು ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಇದನ್ನು 19 ಜಿಲ್ಲೆಗಳಿಗೆ ಹಂಚಿದರೆ, ಪ್ರತಿ ಜಿಲ್ಲೆಗೆ ಬರುವ ಹಣ ಬಹಳ ಕಡಿಮೆ ಎಂದು ಹೇಳಬಹುದು. ಕಾರ್ಮಿಕರ ಹಿತಾಸಕ್ತಿ ಬಗ್ಗೆ ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಹೇಳಿದ್ದರೂ ಕೂಡ ಇಲ್ಲಿ ಇಷ್ಟು ಕಡಿಮೆ ಹಣ ಒದಗಿಸಿರುವುದನ್ನು ನೋಡಿದರೆ ಇದು ನಮ್ಮ ಕಾರ್ಮಿಕರ ದುರಾದೃಷ್ಟವೆಂದು ಹೇಳಬಹುದು. ಕಳೆದ 25 ವರ್ಷಗ ಳಿಂದಲೂ ಕೂಡ ಸರ್ಕಾರಕ್ಕೆ ಕಾರ್ಮಿಕರ ಬಗ್ಗೆ ನಿರ್ಲಕ್ಷವೆಂದು ಹೇಳಬಹುದು. ಈ ಜನಾಂಗವೇ ನಮ್ಮನ್ನು ಆರಿಸಿ ಇಲ್ಲಿಗೆ ಕಳಿಸಿರುವುದರಿಂದ, ಅವರ ಅಭಿವೃದ್ಧಿ ಬಗ್ಗೆ ಸರ್ಕಾರದ ಕಡೆ ನೋಡುತ್ತಿ ದ್ದಾರೆ. ಈಗ ಯಾರು ಜಮೀನಿನಲ್ಲಿ ದುಡಿಯುತ್ತಿದ್ದಾರೋ ಅವರನ್ನೇ ಅದರ ಒಡೆಯರನ್ನಾಗಿ ಮಾಡಬೇಕೆಂದು ಸರ್ಕಾರ ಹೊರಟಿರುವಾಗ, ಯಾರು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದಾರೋ ಅಂತಹವರ ಬಗ್ಗೆ ಸರ್ಕಾರ ಯೋಚನೆ ಮಾಡಲಿಲ್ಲ. ಕಾರ್ಮಿಕರು ಮಾಡತಕ್ಕಂಥ ದುಡಿತದಲ್ಲಿ ಅವರಿಗೂ ಹಕ್ಕು ಇರಬೇಕೆಂದು ಎಲ್ಲಿಯವರೆಗೆ ನಾವು ಯೋಚನೆ ಮಾಡುವುದಿಲ್ಲವೋ, ಅಲ್ಲಿಯವರೆಗೆ ಹೆಚ್ಚಿನ ಉತ್ಪತ್ತಿಯನ್ನು ನಾವು ರಾಷ್ಟ್ರದಲ್ಲಿ ಎದುರು ನೋಡುವುದು ಕಷ್ಟವಾಗುತ್ತದೆ. ತನ್ನ ದುಡಿತದಲ್ಲಿ ತನಗೆ ಲಾಭ ಬರುತ್ತದೆ ಎನ್ನುವ ಅಭಿಪ್ರಾಯ ಎಲ್ಲಿಯವರೆಗೆ ಕಾರ್ಮಿಕರಲ್ಲಿ ಮೂಡುವು ದಿಲ್ಲವೋ, ಅಲ್ಲಿಯವರೆಗೆ ನಮ್ಮ ರಾಷ್ಟ್ರ ಹೆಚ್ಚಿನ ಉತ್ಪತ್ತಿಯನ್ನಾಗಲೀ ಹೆಚ್ಚಿನ ಲಾಭವನ್ನಾಗಲೀ ನೋಡುವುದಕ್ಕೆ ಸಾಧ್ಯವಾಗುವುದಿಲ್ಲ.

ಬೆಂಗಳೂರಿನ ಕೊಳಚೆ ಪ್ರದೇಶಗಳ ಬಗ್ಗೆ ಹೇಳುವುದಾದರೆ, ಬೆಂಗಳೂರು ನಗರದಲ್ಲಿ ಮೊದಲ 44 ಕೊಳಚೆ ಪ್ರದೇಶಗಳು ಇದ್ದಿದ್ದು ಈಗ 144ಕ್ಕೆ ಹೆಚ್ಚಿದೆ. ಕಳೆದ 25 ವರ್ಷಗಳಿಂದ ಈ ಕೊಳಚೆ ಪ್ರದೇಶಗಳ ಬಗ್ಗೆ ಚಿಂತನೆ ಮಾಡತಕ್ಕ ಒಬ್ಬರಾದರೂ ಇದ್ದರು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ರಾಜ್ಯದ ಒಟ್ಟು ವರಮಾನದಲ್ಲಿ ಮೂರನೇ ಒಂದು ಭಾಗದಷ್ಟು ವರಮಾನ ಬರುವ ಬೆಂಗಳೂರು ನಗರದ ಬಗ್ಗೆ ಸರ್ಕಾರಕ್ಕೆ ಅನೇಕ ದೃಷ್ಟಿಯಿಂದ ನಿರ್ಲಕ್ಷವಾಗಿದೆ. ಈ ಕೊಳಚೆ ಪ್ರದೇಶಗಳ ಅಭಿವೃದ್ಧಿಗೋಸ್ಕರ ಒಂದೂವರೆ ಕೋಟಿ ರೂಪಾಯಿಗಳ ಯೋಜನೆ ಇದೆಯೆಂದು ಮಾನ್ಯ ಮಂತ್ರಿ ಗಳು ತಿಳಿಸಿದ್ದಾರೆ. ಈ ಹಣ ನಿಜವಾಗಿಯೂ ಖರ್ಚಾಗಬೇಕೇ ಹೊರತು ಕೇವಲ ಕನ್ನಡಿಯಲ್ಲಿನ ಗಂಟಾಗಬಾರದೆಂದು ಹೇಳುತ್ತೇನೆ. ಬೆಂಗಳೂರಿನ ಅನೇಕ ಕಡೆಗಳಲ್ಲಿ ತೀರ ಬಡವರು ವಾಸವಾಗಿ ದ್ದಾರೆ. ಇವರು ವಾಸ ಮಾಡತಕ್ಕಂಥ ಜಾಗಗಳನ್ನು ಬಹುಶಃ ಮಾನ್ಯ ಮಂತ್ರಿಗಳು ನೋಡಿಲ್ಲ. ನೋಡಿದ್ದರೆ ಅನುಕೂಲವಾಗುತ್ತಿತ್ತು. ಈ ಪ್ರದೇಶಗಳಿಗೆ ಭೇಟಿ ಕೊಡಬೇಕೆಂದು ಅನೇಕ ಸಲ ಮಂತ್ರಿಗಳನ್ನು ಕರೆದರೂ ಸಹ, ಬರುತ್ತೇವೆಂದು ಮೊದಲು ಹೇಳಿ, ಅನಂತರ ಬಾರದಿರುವ ನಿದರ್ಶನಗಳು ಉಂಟು. ಈ ವಿಷಯವನ್ನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಈ ಜನರು ವಾಸಮಾಡತಕ್ಕಂಥ ಜಾಗಗಳನ್ನು ಮಾನ್ಯ ಮಂತ್ರಿಗಳು ನೋಡದಿದ್ದರೆ, ಆ ಜಾಗಗಳ ಅಭಿವೃದ್ಧಿ ಬಗ್ಗೆ ಯೋಜನೆ ತಯಾರು ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ನಾವುಗಳು ಕರೆದಾಗ ಅಲ್ಲಿಗೆ ಮಾನ್ಯ ಮಂತ್ರಿಗಳು ಬರಬೇಕೆಂದು ಹೇಳುತ್ತಿದ್ದೇನೆ. ಯಾರೇ ಆಗಲಿ,

(ಶ್ರೀ ಕೆ. ಶ್ರೀರಾಮುಲು)

ಬೆಂಗಳೂರು ಬಗ್ಗೆ ನಿರ್ಲಕ್ಷದಿಂದ ನೋಡಿದ್ದೇ ಆದರೆ ಅದರ ಪರಿಣಾಮ ಒಳ್ಳೆಯದಾಗುವುದಿಲ್ಲವೆಂದು ಹೇಳುತ್ತೇನೆ.

ಸರ್ಕಾರಿ ನೌಕರರಿಗೆ 7 ರಿಂದ 8 ರೂಪಾಯಿಗಳವರೆಗೆ ಸಂಬಳವನ್ನು ಜಾಸ್ತಿ ಮಾಡಿದ್ದಾರೆ. ಈ ರೀತಿ ಜಾಸ್ತಿ ಮಾಡುವುದರಿಂದ ನೌಕರರಿಗೆ ಸಂತೋಷವಾಗುವುದಿಲ್ಲ. ಅವರ ಕೆಲಸಕ್ಕೆ ತಕ್ಕಂತೆ ವರಮಾನ ಬರುವ ರೀತಿಯಲ್ಲಿ ಮತ್ತು ಅವರಿಗೆ ತೊಂದರೆಯಾಗದ ರೀತಿಯಲ್ಲಿ ಸಂಬಳವನ್ನು ಕೊಡುವುದು ಒಳ್ಳೆಯದೆಂದು ಹೇಳುತ್ತೇನೆ. ಈ ರೀತಿ ಮಾಡದೆ ವರ್ಷಕ್ಕೆ 60 ಅಥವಾ 70 ರೂಪಾಯಿಗಳವರೆಗೆ ಜಾಸ್ತಿ ಮಾಡಿದರೆ ಅವರಿಗೆ ಸಂತೋಷವಾಗುವುದಿಲ್ಲವೆಂದು ಹೇಳುತ್ತೇನೆ.

ರಾಜ್ಯದಲ್ಲಿ ಮನೆಗಳನ್ನು ಕಟ್ಟಿಸುವುದಕ್ಕಾಗಿ ಒಂದು ಕೋಟಿ 76 ಲಕ್ಷ ರೂಪಾಯಿಗಳನ್ನು ಮಾನ್ಯ ಮಂತ್ರಿಗಳು ಒದಗಿಸಿದ್ದಾರೆ. ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಕಾರ್ಮಿಕರಿಗೆ, ಬಡವರಿಗೆ, ಮತ್ತು ಸರ್ಕಾರೀ ನೌಕರರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿರುವುದರಿಂದ, ಅದನ್ನು ಅನುಷ್ಠಾನದಲ್ಲಿ ತರುವ ಬದಲು ಕೇವಲ ಸೈಟ್‌ಗಳನ್ನು ಒದಗಿಸುತ್ತೇವೆಂದು ಹೇಳಿರುವುದು ಸರಿಯಲ್ಲ. ಈ ಎಲ್ಲ ವಿಷಯಗಳನ್ನು ಮಾನ್ಯ ಮಂತ್ರಿಗಳು ದೀರ್ಘವಾಗಿ ವಿಚಾರ ಮಾಡಿ, ಮುಂದೆ ಆಯಾ ಇಲಾಖೆಗಳ ಡಿಮ್ಯಾಂಡ್ಸ್ ಚರ್ಚೆಗೆ ಬಂದಾಗ, ನಾವು ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಹೇಳಿರುವಂತೆ ಅನುಷ್ಠಾನದಲ್ಲಿ ತರುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಜನರು ಬಹಳ ವರ್ಷಗಳವರೆಗೆ ನಮ್ಮನ್ನು ನಂಬುವುದಿಲ್ಲ. ಈ ವಿಷಯವನ್ನು ನಮ್ಮ ನಾಯಕರೇ ಹೇಳುತ್ತಿದ್ದಾರೆ. ಆದ್ದರಿಂದ ನಾವು ಹೇಳಿದ್ದನ್ನು ಮಾಡದಿದ್ದರೆ, ನಾವು ಮಾಡಲಿಲ್ಲ ಎನ್ನುವ ಅಪವಾದ ಬರುತ್ತದೆ. ಮತ್ತು ನಾನಾ ರೀತಿಯ ತೊಂದರೆಗಳು ಬರುವುದಕ್ಕೆ ಕಾರಣವಾಗುತ್ತದೆ. ಅದಕ್ಕೆ ಅವಕಾಶ ಕೊಡಬಾರದೆಂದು ಕೇಳಿಕೊಂಡು, ಸರ್ಕಾರದವರಿಗೆ ಬೆಂಗಳೂರಿನ ಬಗ್ಗೆ ಇರುವ ನಿರ್ಲಕ್ಷ ಹೋಗಬೇಕೆಂದು ಮತ್ತೊಮ್ಮೆ ತಿಳಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಸನ್ಮಾನ್ಯ ಸಭಾಪತಿಗಳೇ, ಈ ಸದನದ ಮುಂದೆ 1972—73ನೇ ಇಸವಿಯ ಆಯವ್ಯಯ ಪಟ್ಟಿಯನ್ನು ರಾಜ್ಯದ ಅರ್ಥ ಸಚಿವರು ಮಂಡಿಸಿದ್ದಾರೆ. ಈ ಆಯವ್ಯಯ ಪಟ್ಟಿಯನ್ನು ಖಂಡತುಂಡವಾಗಿ ವಿರೋಧಿಸುತ್ತಾ ಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸಲು ಇಚ್ಛಿಸುತ್ತೇನೆ. ಮಾನ್ಯ ಅರ್ಥ ಸಚಿವರು ಅವರು ಮಾಡಿರತಕ್ಕಂಥ ಭಾಷಣದಲ್ಲಿ ಒಂದು ವಿಷಯ ಹೇಳಿದ್ದಾರೆ, ಏನೆಂದರೆ :

> '' ಗೊತ್ತುಗುರಿ ಇಲ್ಲದ ಅನಿಶ್ಚಿತ ಸ್ಥಿತಿಯನ್ನು ಕೊನೆಗಾಣಿಸಿ ರಾಜ್ಯಕ್ಕೆ ಅತ್ಯಗತ್ಯವಾದ ಅಭಿವೃದ್ಧಿ ಕಾರ್ಯಗಳನ್ನು ನಡೆಸಿಕೊಂಡು ಬಂದು, ಸಾಮಾಜಿಕ ನ್ಯಾಯವನ್ನು ಸಾಕಷ್ಟು ಅಭಿವೃದ್ಧಿಗೊಳಿಸಲು ಅನುಕೂಲವಾಗುವಂತೆ ಆರ್ಥಿಕ ವ್ಯವಸ್ಥೆಯನ್ನು ಅಣಿಗೊಳಿಸುವ ಕೆಲಸಕ್ಕೆ ನಾವು ಬದ್ಧರಾಗಿದ್ದೇವೆ '' ಎಂಬುದಾಗಿ.

3-30 P.M.

ಪ್ರಪ್ರಥಮವಾಗಿ ಈ ಪದಗಳನ್ನು ಕಾರ್ಯಗತ ಮಾಡತಕ್ಕಂಥ ಸಾಮರ್ಥ್ಯ ಸರ್ಕಾರಕ್ಕೆ ಭಗವಂತನು ದಯಪಾಲಿಸಿದ್ದರೆ ಈ ಪ್ರಶ್ನೆ ಪ್ರಪ್ರಥಮವಾಗಿ ಉದ್ಭವವಾಗುತ್ತದೆ. ಹಿಂದೆ ಹೇಳಿದ ಮಾತಿನಂತೆ ತಮ್ಮ ಪದಗಳು ಸತ್ಯ ಸಾಮರ್ಥ್ಯದ ರಾಜ್ಯಾಡಳಿತದ ಎರಡು ಕಣ್ಣುಗಳಾಗಿರಲಿ. ಮಾನ್ಯ ಮುಖ್ಯಮಂತ್ರಿಗಳು ಅಧಿಕಾರ ವಹಿಸಿಕೊಂಡ ಪ್ರಪ್ರಥಮ ದಿವಸವೇ ಈ ರಾಜ್ಯಕ್ಕೆ ಎರಡು ಮಾತುಗಳನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಮೊದಲನೆಯದಾಗಿ ಮೇಲ್ಮನೆಯಿಂದ ಯಾರನ್ನೂ ಮಂತ್ರಿಯಾಗಿ ಆಯ್ಕೆ ಮಾಡುವುದಿಲ್ಲ ಎಂದು. ಎರಡನೆಯದಾಗಿ ಈ ಮಂತ್ರಿಮಂಡಲದ ಸಂಖ್ಯೆ ಎಷ್ಟು ಎಂದು ಪ್ರಶ್ನೆ ಇಡುವಾಗ ಈ ಸಂಖ್ಯೆಯನ್ನು '' ಆಡಳಿತ ಆಯೋಗ '' ಈಗಾಗಲೇ ನಿರ್ಧರಿಸಿದೆ ಅದಕ್ಕನುಗುಣವಾಗಿ ನೇಮಿಸುತ್ತೇನೆ ಎಂದು ಹೇಳಿದ್ದಾರೆ. ಈ ಎರಡು ಮಾತುಗಳನ್ನೂ ಕೂಡ ರಾಜ್ಯದ ಮೊದಲನೇ ಪ್ರಜೆಯಾದಂಥ ವ್ಯಕ್ತಿ ಕಾರ್ಯಗತ ಮಾಡಿದ್ದಾನೆಯೇ ಎಂದು ಕೇಳುತ್ತೇನೆ. ಇದು ಈ ರಾಜ್ಯದ ಜನತೆಯ ಪ್ರಶ್ನೆಯಾಗಿದೆ. ರಾಜ್ಯದ ಮುಖ್ಯ ಮಂತ್ರಿಯಾದಂಥ ವ್ಯಕ್ತಿಯ ಬಾಯಲ್ಲಿ ಬರತಕ್ಕಂಥ ಮಾತು ರಾಮಬಾಣ ಆಗಿರಬೇಕೇವಿನಃ ಶಿಪಾಯಿ ಹಾಗೆ '' ಉಸ್ ತೀಸ್ '' ಆದರೆ ಮಂತ್ರಿಮಂಡಲದ ಮೇಲೆ ಯಾರಿಗೆ ನಂಬಿಕೆ ಬರುತ್ತದೆ ? ಆ ವ್ಯಕ್ತಿ ರಾಜ್ಯದ ಮೊದಲನೇ ಪ್ರಜೆಯಾಗುವುದಕ್ಕೆ ಶಕ್ತಿ ಇದೆಯೇ ಎಂದು ಶಂಕೆ ಬರುತ್ತದೆ.

ಪ್ರಾಯಶಃ ತಮ್ಮ ಪಕ್ಷದಲ್ಲಿ ಇರತಕ್ಕಂಥ ಕೆಲವರು ಮುಖ್ಯ ಮಂತ್ರಿಗಳನ್ನು 'ಬುದ್ಧಿ' ಎಂದು ಕರೆಯುತ್ತಾರೆ. ಅದೇರೀತಿ ನಾನು ಕೂಡ ಬಾಕಿಯುವರು ಎಷ್ಟು ಗೌರವ ಇಟ್ಟುಕೊಂಡಿರುತ್ತಾರೋ ಅಷ್ಟೇ ಗೌರವವನ್ನು ಇಟ್ಟುಕೊಂಡಿದ್ದೇನೆ. ಮುಖ್ಯ ಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದು ಸತ್ಯವಾಗಿ ಹೇಳಿ, ಸತ್ಯವಾಗಿ ರಾಜ್ಯಾಡಳಿತವನ್ನು ನಡೆಸುತ್ತಿದ್ದೀರಾ ? ನಿಮ್ಮ ಅಂತರಾತ್ಮನ ಸಾಕ್ಷಿಯಾಗಿ ಹೇಳಿ. ಸತ್ಯ, ನೀತಿಗಳಿಂದ ನೀವು ಅಧಿಕಾರ ವಹಿಸಿಕೊಂಡು ಕೇವಲ ಕೆಲವೇ ದಿವಸದಲ್ಲಿ ಪೋಲೀಸಿನವರ ತನಿಖೆಯಿಂದ ಬಂದಂಥ ಪಟ್ಟಿಯನ್ನು ಸೂಚಿಸಿ ಕೆಲವು ಪಬ್ಲಿಕ್ ವರ್ಕ್ಸ್ ಅಧಿಕಾರಿಗಳನ್ನು ನೆಪಮಾತ್ರಕ್ಕೆ ಸಸ್ಪೆನ್ಷನ್ ನಲ್ಲಿಟ್ಟು ದೇಶದಲ್ಲಿ ನೀವು ಸತ್ಯವಂತರು ಎಂದು ಸಾರುವುದಕ್ಕೆ ಹೊರಟಿದ್ದೀರಿ. ಕ್ಯಾಬಿನೆಟ್ ಸಚಿವರು ಆತ್ಮಸಾಕ್ಷಿಯಾಗಿ, ಭಗವಂತನ ಸಾಕ್ಷಿಯಾಗಿ ಹೇಳಲಿ. ತಮ್ಮ ಇಲಾಖೆಯಲ್ಲಿಯೂ ಅಂಥಾ ಒಂದು ಪರಿಸ್ಥಿತಿ ಕಂಡಿಲ್ಲವೇ ? ಇದೇರೀತಿ ಬಾಕಿ ಇಲಾಖೆಯಲ್ಲೂ ಬೇಕಾದಷ್ಟು ಇರುವುದನ್ನು ಉದಾಹರಣೆ ಕೊಡಬಲ್ಲೆ. ಹೆಚ್ಚು ಕಾಲಾವಕಾಶ ಇಲ್ಲದೇ ಇರುವುದರಿಂದ ಒಂದೇ ಒಂದು ಉದಾಹರಣೆ ಹೇಳುತ್ತೇನೆ. ಅನೇಕ ಮಂತ್ರಿಗಳು ತಮ್ಮ ತಮ್ಮ ಇಲಾಖೆಯಲ್ಲಿ ವರ್ಗಾವರ್ಗಿ ಮಾಡಿದ್ದಾರೆ. ಅದು ಯಾವ ರೀತಿಯಾಗಿದೆ ಎಂದರೆ ಒಂದು ಗಾದೆ ಇದೇ "ಬರಗೆಟ್ಟವನು ಬರಗಾಲಕ್ಕೆ ಬಂದ" ಎಂಬಂತೆ ಬರಗೆಟ್ಟವರು ಮಂತ್ರಿಗಳಾಗಿದ್ದಾರೆ. ಆ ಬರಗೆಟ್ಟವನು ಏನು ಮಾಡುತ್ತಾನೆ ಎಂದರೆ ಪಾಯಸ, ಹಿಟ್ಟು ಎಲ್ಲವನ್ನೂ ಸೇರಿಸಿಕೊಂಡು ಘಟಘಟನೆ ಕುಡಿಯುತ್ತಾನೆ. ಅಧಿಕಾರಿಗಳನ್ನು 2 ವರ್ಷಕ್ಕೊಮ್ಮೆ ವರ್ಗ ಮಾಡಬೇಕು ಎಂದು ಇದೆ. ಆ ನಡುವೇನೇ 2—3 ತಿಂಗಳಿಗೆಲ್ಲಾ ವರ್ಗ ಮಾಡಿರುತ್ತಾರೆ. ಕೆಲವರು 5 ವರ್ಷವಾದರೂ ಒಂದೇ ಊರಿನಲ್ಲೇ ಇರುತ್ತಾರೆ. ಅವರನ್ನು ಅಲ್ಲೇ ಇಟ್ಟಿದ್ದಾರೆ. ಇದಕ್ಕೆ ಒಂದು ನಿದರ್ಶನ ಕೊಡುತ್ತೇನೆ. 3 ತಿಂಗಳಿನಲ್ಲಿ ಒಬ್ಬ ಅಧಿಕಾರಿ ಕೋಲಾರಕ್ಕೆ ವರ್ಗವಾಗಿದ್ದವನನ್ನು ಬೆಂಗಳೂರಿಗೆ ತಿರುಗಿ ಕರೆಸಿಕೊಂಡಿದ್ದಾರೆ. ಮಾನ್ಯ ಮಂತ್ರಿಗಳೊಬ್ಬರು ಒಬ್ಬ ಸಣ್ಣ ನೌಕರನ ವಿಷಯದಲ್ಲಿ ಅಲ್ಲೇ ಇಡಿ ಎಂದು ನಿರ್ದೇಶನ ಹೊರಡಿಸಿದ್ದಾರೆ. ಆ ಸಣ್ಣ ನೌಕರ ಏನು ಹೇಳುತ್ತಾನೆ ಎಂದರೆ ಈ ಇಲಾಖಾ ಮುಖ್ಯಾಧಿಕಾರಿ ನನ್ನನ್ನು ಏನು ಮಾಡುತ್ತಾರೆ, ಪುಡಾರಿಗಳು ನನ್ನ ಕೈಯ್ಯಲ್ಲಿ ಇರುವವರೆಗೆ ನನ್ನನ್ನು ಏನು ಮಾಡುತ್ತಾರೆ, ಎಂದು ಹೇಳುತ್ತಾನೆ. ಯಾವ ಯಾವ ಅಧಿಕಾರಿಗಳು ಯಾವ ಯಾವ ಕೆಲಸಗಳನ್ನು ಮಾಡುತ್ತಾರೆ ಎನ್ನುವ ಪಟ್ಟಿಯನ್ನು ತಯಾರಿಸಿದ್ದೇನೆ. ಅವಕಾಶ ಇದ್ದರೆ ಇದನ್ನೆಲ್ಲಾ ಹೇಳುವುದಕ್ಕೆ ಚೆನ್ನಾಗಿತ್ತು. ಕೆಲವರನ್ನು 15 ದಿವಸದಲ್ಲಿ ವರ್ಗ ಮಾಡಿರುವುದನ್ನು ತೋರಿಸುತ್ತೇನೆ.

ಇನ್ನೊಂದು ವಿಷಯ ಹೇಳುತ್ತೇನೆ. ಸಚಿವರು ಪ್ರವಾಸ ಹೋಗುತ್ತಾರೆ. ಅವರು ಹಾಗೆ ಹೋಗುವ ಸಂದರ್ಭದಲ್ಲಿ ಆ ಕ್ಷೇತ್ರದ ಯಾವ ಸದಸ್ಯರು ಇದ್ದಾರೆ ಅವರಿಗೆ ತಿಳುವಳಿಕೆ ಕೊಡುವುದಿಲ್ಲ. ಇದಕ್ಕೆ ಒಂದು ನಿದರ್ಶನ ಹೇಳುತ್ತೇನೆ. ರಾಮನಗರಕ್ಕೆ ಸಾರಿಗೆ ಸಚಿವರು ಬಂದಿದ್ದರು. ನನಗೆ ಏತಕ್ಕೆ ತಿಳಿಸಲಿಲ್ಲ, ಏತಕ್ಕೆ ಬಂದಿದ್ದೀರಿ ಎಂದು ಕೇಳಿದೆ. ಅದಕ್ಕೆ ಅವರು ಇನ್ನು ಮೇಲೆ ಆರೀತಿ ಮಾಡುವುದಿಲ್ಲ, ನಾನು ಮಾಡಿದ್ದು ಅಪರಾಧವಾಯಿತು, ಹಾಗೇನಾದರೂ ಬಂದರೆ ಮುಂದೆ ತಿಳಿಸುತ್ತೇನೆ ಎಂದು ಹೇಳಿದರು. ಈ ರೀತಿ ಹೇಳಿದ ಮೇಲೆ ಆ ವಿಷಯವನ್ನು ಅಲ್ಲಿಗೇ ಬಿಟ್ಟೆ. ಮತ್ತು ಮೊನ್ನೆ ರೇಷ್ಮೆ ಇಲಾಖಾ ರಾಜ್ಯ ಸಚಿವರು ನಮ್ಮ ಊರಿಗೆ ಬಂದಿದ್ದರು. ಅವರು ಬಂದಿದ್ದುದು ಗೊತ್ತಾದಮೇಲೆ ಏನು ಸ್ವಾಮಿ, ಗುಟ್ಟಾಗಿ ಬಂದಿದ್ದೀರಿ, ನಮಗೆ ಏನೂ ತಿಳಿಸಬೇಕಾದ್ದಿಲ್ಲವೇ, ಇದು ನಿಮ್ಮ ನೀತಿಯೇ ಎಂದು ಕೇಳಿದೆ. ಅದಕ್ಕೆ ಅವರು 'ಹೆ, ಹೆ' ಎಂದು ಬಿಟ್ಟು ಇದನ್ನು ತಿಳಿಸುವುದು ಅನುಚಿತ ಎಂದು ಹೇಳಿದರು. ನಾನು ವಿಶದವಾಗಿ ಪ್ರಸ್ತಾಪ ಮಾಡುವುದಿಲ್ಲ. ನನಗೂ ಆತ್ಮ ಇದೆ, ಅವರಿಗೂ ಆತ್ಮ ಇದೆ, ನಾನೂ ಮನುಷ್ಯ, ಅವರೂ ಮನುಷ್ಯರೇ, ಆದರೆ ಅವರಿಗೆ ಮಾನವೀಯತೆ ಇಲ್ಲವೇ ? ಮಂತ್ರಿಗಳಾದ ತಕ್ಷಣ ನಮ್ಮ ಪಕ್ಷದವರನ್ನು ಕಂಡರೆ ರಾಕ್ಷಸ ಸ್ವಭಾವದ ವರ್ತನೆಯನ್ನು ತೋರಿಸಬಾರದು. ಮೈಸೂರು ರಾಜ್ಯದಲ್ಲಿ ಪ್ರಜಾಪ್ರಭುತ್ವ ಇದೆ. ಆರೀತಿ ಪ್ರಜಾಪ್ರಭುತ್ವ ಇದ್ದಮೇಲೆ ವಿರೋಧಪಕ್ಷದವರು ಇರಬಾರದೇನು ? ನಿಮ್ಮನ್ನು ಟೀಕೆ ಮಾಡುವ ಉದ್ದೇಶ ಏನು ? ಟೀಕೆ ಮಾಡಬೇಕು. ಟೀಕೆ ಮಾಡದೇ ಇದ್ದರೆ ನೀವು ಮಾಡುವ ಕೆಲಸಕ್ಕೆ ಭಗವಂತನೇ ಸಾಕ್ಷಿಯಾಗಿರುತ್ತಾನೆ. ಆತ್ಮಸಾಕ್ಷಿಯಾಗಿ ಹೇಳಿ ನೀವು ಟೀಕೆಗೆ ಒಳಗಾಗಬಾರದೇ ? ಇಲ್ಲಿ ಅನೇಕ ಹಿರಿಯ ಸಚಿವರು ಇದ್ದಾರೆ. ಅವರಲ್ಲಿ ನಾನು ಅನ್ಯೋನ್ಯವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ರಾಜ್ಯದಲ್ಲಿ ಗುರುತರವಾದ ಜವಾಬ್ದಾರಿ ಕೆಲವೇ ಜನರ ಕೈಯಲ್ಲಿ ಇದೆ. ಕೆಲವರು ಮಾತ್ರ ನಾಮಕಾವಸ್ತೆ ಸಚಿವರಾಗಿದ್ದಾರೆ. ತಾ|| 30-5-1972ರ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಈರೀತಿ ಒಂದು ಪ್ರಕರಣ ಬಂದಿದೆ :—

> "ಮಂತ್ರಿಗಳ ರೀತಿ ನೀತಿ ನಡತೆ ಮತ್ತು ಆಚಾರ ವಿಚಾರಗಳಬಗ್ಗೆ ಸಾರ್ವಜನಿಕರಲ್ಲಿ ಒಳ್ಳೆಯ ಅಭಿಪ್ರಾಯ ಇರಬೇಕಾದಷ್ಟು ಪ್ರಮಾಣದಲ್ಲಿ ಇಲ್ಲದಿರುವುದನ್ನು ಕಂಡು ಉನ್ನತ ವಲಯಗಳಲ್ಲಿ ತುಂಬಾ ಕಳವಳ"

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಇದರಿಂದ ನನಗೆ ಒಂದು ಶಂಕೆ ಬರುತ್ತದೆ. ಏತಕ್ಕೆ ಇಂತಹ ಮಂತ್ರಿಗಳನ್ನು ಮಂತ್ರಿಮಂಡಲದಲ್ಲಿ ಮುಖ್ಯಮಂತ್ರಿಗಳು ಇಟ್ಟಿದ್ದಾರೆ ಎಂದು ನಾನು ಈ ರಾಜ್ಯದ ಪರವಾಗಿ ಪ್ರಶ್ನೆ ಮಾಡುತ್ತೇನೆ. ಮಂತ್ರಿಗಳ ನೀತಿ, ನಡತೆ ಮತ್ತು ಸದಾಚಾರಗಳ ಬಗ್ಗೆ ಶಂಕೆ ಇದ್ದಿರುವುದರಿಂದ, ಮುಖ್ಯ ಮಂತ್ರಿಗಳಿಗೂ ಮತ್ತು ಅಂಥಾ ಮಂತ್ರಿಗಳಿಗೂ ಏನಾದರೂ ಗುಟ್ಟಾದ ಆಂತರಿಕ ವ್ಯವಹಾರ ಇದೆಯೇ? ಅದಕ್ಕೇನಾದರೂ ಅವರನ್ನು ಮುಂದುವರೆಸುತ್ತಿದ್ದಾರೆಯೇ! ಆರೀತಿ ಮುಂದು ವರೆಸುವುದಾದರೆ ಮುಖ್ಯಮಂತ್ರಿಗಳೇ ಕಾರಣಕರ್ತರು ಎಂದು ಹೇಳಬೇಕಾಗುತ್ತದೆ.

ಇನ್ನು ಮಾನ್ಯ ಅರ್ಥಸಚಿವರು ರಾಜ್ಯದ ಅಯವ್ಯಯವನ್ನು ಮಂಡಿಸುವಾಗ ಎಲ್ಲಾ ಇಲಾಖೆಯಲ್ಲಿ ಆಗತಕ್ಕಂಥ ಲೋಪದೋಷಗಳನ್ನು ಆಳವಾಗಿ ಆಲೋಚನೆ ಮಾಡಿ ಇಡಬೇಕಾಗಿತ್ತು. ಆರೀತಿ ಮಾಡಿದ್ದರೆ, ಆ ಲೀಕೇಜ್‌ಗಳನ್ನು ತಡೆಗಟ್ಟಿದ್ದರೆ ಎಷ್ಟೋ ಕೋಟಿ ರೂಪಾಯಿಗಳು ಉಳಿಯುತ್ತಿತ್ತು ಎಂದು ನನ್ನಅಭಿಪ್ರಾಯ. ಏತಕ್ಕೆಂದರೆ ಎಷ್ಟೋ ಇಲಾಖೆಯಲ್ಲಿ ಹಣ ಸೋರಿ ಹೋಗುತ್ತಿದೆ. ಅರ್ಥ ಸಚಿವರಾದ ಶ್ರೀ ಘೋರ್ಪಡೆಯವರು ವಿವೇಕಿಗಳೂ ನೀತಿವಂತರೂ, ಅರ್ಥತಜ್ಞರೂ ಆಗಿರುವುದರಿಂದ ಇದನ್ನು ಪುನರ್‌ಪರಿಶೀಲನೆ ಮಾಡಿ ತಮ್ಮ ಅಭಿಪ್ರಾಯವನ್ನು ಈ ಸಭೆಯ ಮುಂದೆ ತಿಳಿಸುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ರಾಜ್ಯ ಸರ್ಕಾರದ ಮಂತ್ರಿಮಂಡಲದವರು ಅನೇಕ ಘೋಷಣೆಗಳನ್ನು ಮಾಡಿದ್ದಾರೆ. ಅದು ಯಾವುದೆಂದರೆ ಬಡತನ ಹೋಗಲಾಡಿಸುವುದು, ನಿರುದ್ಯೋಗ ಸಮಸ್ಯೆ ನಿವಾರಣೆ ಮುಂತಾದವುಗಳು. ವಿದ್ಯಾವಂತ ನಿರುದ್ಯೋಗಿಗಳಿಗೆ ಏನು ಮಾಡಲಾಗುತ್ತಿದೆ ಎಂದು ನೀವು ಹೇಳಿರುವುದು ಜೇನುತುಪ್ಪ ಒರೆಸಿದಂತೆ ಆಗಿದೆ.

ಇನ್ನೊಂದು ವಿಚಾರ ಹೂಡುವುದಕ್ಕೆ ಹೊರಟ್ಟಿದ್ದೀರಿ. ನನಗೆ ಬಹಳ ಶಂಕೆಯಾಗುತ್ತದೆ ಕಾರಣವಾದರೂ ಇಷ್ಟೆ. ರಾಜ್ಯದಲ್ಲಿ ನಾನು ವಕ್ಕಲಿಗರ ಮಗ. ಎಲ್ಲಾ ಸರ್ವ ಸಕಲ ಚರಾ ಚರ ಪ್ರಾಣಿಗಳಿಗೆ ಪ್ರಾಣ ಕೊಡತಕ್ಕಂಥಾವನು ರೈತ. ಅಂಥಾ ರೈತನಮೇಲೆ ಈಗ ಸರ್ಕಾರದವರು ಹಾಕಿರುವ ನೀರಿನ ಸುಂಕ ಬೀಳುತ್ತದೆ. ನಾನು ರೈತನ ಮಗನಾಗಿ ರೈತನ ಕಷ್ಟ ಸುಖಗಳು ಏನು ಎಂದು ತಿಳಿದುಕೊಂಡಿದ್ದೇನೆ. ಸರ್ಕಾರಕ್ಕೆ ಇದನ್ನು ತಿಳಿದುಕೊಳ್ಳುವಂಥ ಅರ್ಹತೆ ಇದೆಯೇ? ಸಕಲ ಚರಾ ಚರ ಪ್ರಾಣಿಗಳಿಗೆ ಪ್ರಾಣ ಕೊಡತಕ್ಕಂಥ ರೈತನಿಗೆ ನೀವು ಮಾಡಿರುವುದಾದರೂ ಏನು? ಅವರು ಯಾವ ಸಂಘ ಸಂಸ್ಥೆ ಮಾಡಿ ಸರ್ಕಾರದ ಮೇಲೆ ಹೋರಾಟ ಮಾಡುವುದಕ್ಕೆ ಹೊರಟಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಆತ್ಮಸಾಕ್ಷಿಯಾಗಿ ಹೇಳಲಿ. ನೀವು ಹೇಳಿದ್ದಕ್ಕೆಲ್ಲಾ ಹೆದರಿ ಕೊಂಡು, ನಿಮಗೆ ಕಾಲ ಕಾಲಕ್ಕೆ ಸಹಕಾರ ಕೊಟ್ಟು, ನಿಮ್ಮ ಅನುಕೂಲಕ್ಕೆ ತಕ್ಕಂತೆ ತಲೆಬಾಗಿ, ದೈನ್ಯದಿಂದ ನೀವು ಹೇಳಿದ್ದನ್ನೆಲ್ಲಾ ಆಚರಣೆಗೆ ತರತಕ್ಕಂಥ ತೆರಿಗೆ ಹಾಕುವುದಕ್ಕೆ ರೈತರಮೇಲೆ ಶುರು ಮಾಡಿದ್ದೀರಿ. ಅದು ಯಾವುದು ಎಂದರೆ ನೀರಿನ ಸುಂಕ.

ನೀರಿನ ಸುಂಕದ ವಿಷಯದಲ್ಲಿ ಹೇಳುವುದಾದರೆ ಆತ್ಮಸಾಕ್ಷಿಯಾಗಿ ಹೇಳಲಿ. ಸರ್ಕಾರದವರು ಕಟ್ಟಿಸಿರುವ ಕೆರೆಗಳಲ್ಲಿ ತುಂಬಾ ನೀರು ನಿಲ್ಲುತ್ತದೆಯೇ? ಎಷ್ಟೋ ಕೆರೆಗಳಲ್ಲಿ ಹೂಳು ತುಂಬಿಕೊಂಡು ಕೆರೆಗಳಲ್ಲಿ ಹೆಚ್ಚು ನೀರು ನಿಲ್ಲುವುದಿಲ್ಲ. ಎಷ್ಟೋ ಕೆರೆಗಳಿಗೆ ತೂಬು ಇರುವುದಿಲ್ಲ. ಆ ತೂಬುಗಳಿಂದ ಗದ್ದೆಗಳಿಗೆ ನೀರು ಹೋಗಲು ಕಾಲುವೆಗಳೂ ಇಲ್ಲ. ಅದನ್ನೆಲ್ಲಾ ಸರ್ಕಾರ ದವರು ಸರಿಪಡಿಸಲು ಯಾವ ಪ್ರಯತ್ನವನ್ನೂ ಮಾಡಿಲ್ಲ. ದೂರದ ಗದ್ದೆಗಳಿಗೆ ನೀರು ಹೋಗುವುದಿಲ್ಲ. ನಮ್ಮ ಮಳವಳ್ಳಿ ರೈತರ ಕಷ್ಟ ಎಷ್ಟರಮಟ್ಟಿಗೆ ಇದೆ, ಅವರಿಗೆ ಎಷ್ಟರಮಟ್ಟಿನ ನೀರಿನ ಸೌಲಭ್ಯ ದೊರೆಯುತ್ತದೆ ಎಂಬುದು ಮಾನ್ಯ ಮಂತ್ರಿಗಳಾಗಿರತಕ್ಕ ಶ್ರೀ ಎಸ್. ಎಂ. ಕೃಷ್ಣ ಅವರಿಗೂ ಗೊತ್ತಿದೆ. ಅವರು ಒಳ್ಳೆಯ ಮೆಹನತ್ತು ಉಳ್ಳವರು. ಅವರೂ ಸರ್ಕಾರ ದಲ್ಲಿದ್ದಾರೆ. ಈ ಒಂದು ನೀರಿನತೆರಿಗೆಯನ್ನು ಜಾಸ್ತಿ ಮಾಡುವ ವಿಷಯದಲ್ಲಿ ಅವರೂ ಭಾಗಿಗಳಾಗಿ ದ್ದಾರೆ. ಅವರು ಹೇಗೆ ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾರೆಯೋ ಗೊತ್ತಿಲ್ಲ. ಈಗಿನ ಮಂತ್ರಿಮಂಡಲ ದಲ್ಲಿ ಅನುಭವಿಗಳು ಮತ್ತು ಕೈಯಿ, ಬಾಯಿ ಕಚ್ಚೆ ಈ ಮೂರು ಶುದ್ಧವಾಗಿರತಕ್ಕ ಮಂತ್ರಿಗಳು ಈ ಮಂತ್ರಿಮಂಡಲದಲ್ಲಿ ಕೆಲವರು ಇದ್ದಾರೆ. ಈ ವಿಚಾರದಲ್ಲಿ ಸಾಧಾರಣವಾಗಿರುವವರು ಕೆಲವರಿದ್ದಾರೆ. ಮಾನ್ಯ ಮಂತ್ರಿಗಳು ವಿರೋಧಪಕ್ಷದ ಮಾನ್ಯಸದಸ್ಯರೊಡನೆ ಮಾನವೀಯತೆಯ ದೃಷ್ಟಿಯಿಂದ ನಡೆದುಕೊಳ್ಳಬೇಕು. ರಾಜಕಾರಣಿಗಳ ಪ್ರಭಾವದಿಂದ ಅನ್ಯಾಯಗಳನ್ನು ಮಾಡಬಾರದು. ಗೌರವಸ್ಥರ ಬಗ್ಗೆ ಆಡಳಿತವರ್ಗದವರು ಸರಿಯಾದ ರೀತಿಯಲ್ಲಿ ನಡೆದುಕೊಳ್ಳ ಬೇಕು. ದಕ್ಷತೆಯಿಂದ ದೇಶದ ಆಡಳಿತವನ್ನು ನಡೆಸಬೇಕು. ಮತ್ತು ಧರ್ಮದಿಂದ ರಾಜ್ಯಭಾರ ನಡೆಸಬೇಕು. ಅದಕ್ಕೆ ನಾವೆಲ್ಲರೂ ಬೆಂಬಲ ಕೊಡುತ್ತೇವೆ. ದೇಶದ ಹೊಣೆಯನ್ನು ಹೊತ್ತಿರತಕ್ಕ

ತಾವು ರೈತರು, ಕಾರ್ಮಿಕರು ಎಲ್ಲರನ್ನೂ ದೃಷ್ಟಿಯಲ್ಲಿ ಇಟ್ಟುಕೊಂಡು ಕೆಲಸಮಾಡಬೇಕು. ಕೆಲವು ಮಂತ್ರಿಗಳು ತಪ್ಪು ಉತ್ತರಗಳನ್ನು ಕೊಡುತ್ತಿದ್ದಾರೆ. ಅದು ಸರಿಯಲ್ಲ. ಕಾರ್ಪೊರೇಷನ್ ಸಭೆಯಲ್ಲಿ ಬೇಗಂ ಮಹಲನ್ನು ಕೊಂಡುಕೊಳ್ಳಬಾರದು ಎಂದು ನಿರ್ಣಯವಾಗಿದೆ ಎಂದು ಒಂದು ಕಡೆ ಹೇಳುತ್ತಾರೆ. ಅದನ್ನು ಕೊಂಡುಕೊಳ್ಳಬೇಕು ಎಂದು ನಿರ್ಣಯವಾಗಿದೆ ಎಂದು ಒಂದು ಕಡೆ ಹೇಳುತ್ತಾರೆ. ಇಂಥಾ ವಿಚಾರದಲ್ಲಿ ಹಿಂದೂ ಮುಂದೂ ನೋಡದೆ ಲಂಗು ಲಗಾಮು ಇಲ್ಲದೆ ಓಡುತ್ತಾರೆ. ಇದು ಸರಿಯಲ್ಲ. ಈಗ ಇದನ್ನು ಕೈಬಿಡುವಂತೆ ಯೋಚನೆ ಮಾಡುತ್ತಿದ್ದಾರೆ ಎಂದು ತಿಳಿದುಬಂದಿದೆ. ನೀವು ಯಾವುದೇ ಕೆಲಸವನ್ನು ಮಾಡುವಾಗ ಸರಿಯಾದ ರೀತಿಯಲ್ಲಿ ಧರ್ಮದಿಂದ ಮಾಡಿ ಆಗ ನಾವು ಎಲ್ಲಾ ವಿಷಯಗಳಿಗೂ ನಿಮ್ಮ ಜೊತೆಯಲ್ಲಿರುತ್ತೇವೆ. ಸರ್ಕಾರದವರು ಸತ್ಯ ಸಾಮರ್ಥ್ಯದಿಂದ ಕೆಲಸಮಾಡಬೇಕು. ಮಂತ್ರಿಗಳಾದವರು ಆಡತಕ್ಕಂಥಾ ಮಾತು ರಾಮಬಾಣ ವಾಗಿರಬೇಕು. ನಮ್ಮ ಉಪಾಧ್ಯಕ್ಷರು ಬಹಳ ಮೆಹನತ್ತಿನಿಂದ ಕೂಡಿರುವ ವ್ಯಕ್ತಿಗಳು. ಅವರ ಪರಿಚಯ ನನಗೆ ಅಷ್ಟಾಗಿ ಇಲ್ಲ. ಅನೇಕ ಜನ ಆಡಳಿತ ಕಾಂಗ್ರೆಸಿನವರ ಪರಿಚಯ ನನಗೆ ಇಲ್ಲ. ಅವರಲ್ಲಿ ಅನೇಕ ಜನರಿಗೆ ಕಾಂಗ್ರೆಸ್ ತತ್ವವೇ ಗೊತ್ತಿಲ್ಲ. ಎಲ್ಲೋ ಕೆಲವರು ಇದ್ದಾರೆ. ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿರತಕ್ಕವರು, ತ್ಯಾಗ ಬಲಿದಾನ ಮಾಡಿರತಕ್ಕವರು ಚರಿತ್ರಾರ್ಹ ವಾದ ವ್ಯಕ್ತಿಗಳು ಯಾರು ಇದ್ದಾರೆ ಅವರಿಗೆ ಇವೊತ್ತು ರಾಜಕೀಯದಲ್ಲಿ ಸ್ಥಾನವಿಲ್ಲ. ನಾನು ಮಂತ್ರಿಮಂಡಲದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಧರ್ಮ, ನೀತಿಯಿಂದ ರಾಜ್ಯಭಾರ ಮಾಡಿ ಎಂದು. ಮೈಸೂರು ರಾಜ್ಯದಲ್ಲಿ ರೈತರನ್ನು ಉದಾಶೀನ ಮನೋಭಾವದಿಂದ ನೋಡಬೇಡಿ ಎಂದು ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟು ಇಷ್ಟು ವಿಷಯಗಳನ್ನು ಹೇಳುವುದಕ್ಕೆ ಅವಕಾಶಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಜಿ. ಕೊಡ್ಗಿ (ಬೈಂದೂರ್).—ಸನ್ಮಾನ್ಯ ಸಭಾಧ್ಯಕ್ಷರೇ, 1972–73 ನೇ ಸಾಲಿನ ಮುಂಗಡ ಪತ್ರವನ್ನು ಈ ಸಭೆಯ ಮುಂದೆ ಮಂಡಿಸಿರತಕ್ಕ ಮಾನ್ಯ ಹಣಕಾಸಿನ ಮಂತ್ರಿಗಳಾದ ಶ್ರೀಮಾನ್ ಘೋರ್ಪಡೆಯವರನ್ನು ನಾನು ಅಭಿನಂದಿಸುತ್ತಾ ಈ ಮುಂಗಡ ಪತ್ರಕ್ಕೆ ನನ್ನ ಬೆಂಬಲ ವನ್ನು ಸೂಚಿಸಲು ಕೆಲವೊಂದು ಸೂಚನೆಗಳನ್ನು ಕೊಡಲು ನಾನು ಇಚ್ಛೆಪಡುತ್ತೇನೆ. ಮೊಟ್ಟ ಮೊದಲನೆಯದಾಗಿ ಕೃಷಿ ವಿಚಾರ. ನಾನೂ ಒಬ್ಬ ಕೃಷಿಕನಾಗಿರುವುದರಿಂದ ಕೃಷಿವಿಚಾರವಲ್ಲಿ ಎರಡು ಮಾತುಗಳನ್ನು ಆಡಿದರೆ ತಪ್ಪಾಗಲಾರದು. ಈ ಬಾಬಿಗೆ 91 ಕೋಟಿ ರೂಪಾಯಿಗಳನ್ನು ಒದಗಿಸಿ ದ್ದಾರೆ. ಈ ಬಾಬಿನಲ್ಲಿ ಕೃಷಿ, ಪಶುಸಂಗೋಪನೆ, ಮೀನುಗಾರಿಕೆ ಎಲ್ಲಾ ವೆಚ್ಚಗಳೂ ಸೇರಿವೆ ಎಂದು ತಿಳಿದುಬಂದಿವೆ. ನಮ್ಮ ದೇಶದಲ್ಲಿ ಶೇಕಡ 70ಕ್ಕಿಂತಲೂ ಹೆಚ್ಚು ಕೃಷಿಕರೇ ಇರುವಂತಹ ಈ ಬೇಡಿಕೆಗೆ ಇನ್ನೂ ಹೆಚ್ಚು ಮಹತ್ವವನ್ನು ಕೊಟ್ಟು ಇದಕ್ಕೆ ಇನ್ನೂ ಹೆಚ್ಚು ಹಣವನ್ನು ಒದಗಿಸುವುದು ತೀರಾ ಅವಶ್ಯಕ. ಕೃಷಿಕರ ಆರ್ಥಿಕ ಸುಧಾರಣೆ ಮಾಡುವುದಕ್ಕೋಸ್ಕರ ಅನೇಕ ತಜ್ಞರು ಕೊಟ್ಟಿರ ತಕ್ಕ ಸಲಹೆಗಳನ್ನು ಅಳವಡಿಸಬೇಕಾದದ್ದು ಹೆಚ್ಚಿನ ಅಗತ್ಯ ಇದೆ. ಈ ದೃಷ್ಟಿಯಿಂದ ಈ ಬೇಡಿಕೆಗೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸುವುದು ಸೂಕ್ತ ಎಂದು ನಾನು ಭಾವಿಸುತ್ತೇನೆ.

ಹೆಚ್ಚುವರಿ ಭೂಮಿ ಏನಿದೆ ಅದನ್ನು ಮಾಲೀಕರಿಂದ ಸರ್ಕಾರದವರು ವಶಪಡಿಸಿಕೊಂಡು ಅದನ್ನು ಭೂಮಿ ಇಲ್ಲದವರಿಗೆ ಸರ್ಕಾರದವರು ಹಂಚಬೇಕಾಗುತ್ತದೆ. ಭೂಮಿಯನ್ನು ಅಭಿವೃದ್ಧಿ ಮಾಡಿ ಹೆಚ್ಚು ಬೆಳೆಯನ್ನು ಬೆಳೆಯುವುದಕ್ಕೆ ಕೃಷಿಕನಿಗೆ ಸರ್ಕಾರದವರು ಯೋಗ್ಯ ಸವಲತ್ತುಗಳನ್ನು ಒದಗಿಸಬೇಕಾದ್ದು ಸರ್ಕಾರದ ಆದ್ಯಕರ್ತವ್ಯ. ನಾವು ಕೇವಲ 2-3 ಎಕರೆ ಜಮೀನನ್ನು ರೈತರಿಗೆ ಹಂಚಿ ಅವರಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡದೇ ಹೋದರೆ, ರೈತರಿಗೆ ಬೇಕಾದಂತಹ ಗೊಬ್ಬರ, ಬೀಜ, ವ್ಯವಸಾಯದ ಸಲಕರಣೆಗಳನ್ನು ಇತ್ಯಾದಿಗಳನ್ನು ಕೊಡದೇ ಹೋದರೆ ಕೃಷಿ ಅಭಿವೃದ್ಧಿ ಆಗಲಾರದು. ಕೃಷಿಯನ್ನು ಅಭಿವೃದ್ಧಿ ಮಾಡಿ ರೈತನ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಈ ಬೇಡಿಕೆಗೆ ತೊಡಗಿಸಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಈಗ ಸರ್ಕಾರದವರು ಈ ಬಾಬಿಗೆ ಒದಗಿಸಿರತಕ್ಕ ಹಣವನ್ನು ಲೆಕ್ಕಹಾಕಿದರೆ 5-6 ರೂಪಾಯಿಗಳು ಮಾತ್ರ ಆಗುತ್ತದೆ. ಈ ದೃಷ್ಟಿಯಿಂದ ಇದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸುವುದು ಸೂಕ್ತ ಎಂದು ನನ್ನ ಭಾವನೆ. ನಮ್ಮ ಜಿಲ್ಲೆಯ ವಿಚಾರವನ್ನು ನನ್ನ ಮಾನ್ಯ ಮಿತ್ರರಾದ ಶ್ರೀ ಕಕ್ಕಿಲಾಯ ಅವರು ಹೇಳಿದ್ದಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಕಾಲದಲ್ಲಿ ಮಳೆ ಬಾರದೇ ಹೋದದ್ದರಿಂದ ನೂರಕ್ಕೆ 50 ಭಾಗ ಹಾಕಿದಂತಹ ಬೆಳೆ ಸಂಪೂರ್ಣವಾಗಿ ನಾಶವಾಗಿಹೋಗಿದೆ. ಆದ್ದರಿಂದ ಅಲ್ಲಿನ ರೈತರಿಗೆ ಹೆಚ್ಚಿನ ಸಹಾಯ ವನ್ನು ಒದಗಿಸಬೇಕಾಗುತ್ತದೆ. ಆದ್ದರಿಂದ ಆದಷ್ಟು ಶೀಘ್ರವಾಗಿ ಅಲ್ಲಿನ ರೈತರಿಗೆ ಬೀಜ, ಗೊಬ್ಬರ, ಇತ್ಯಾದಿ ಸೌಲಭ್ಯಗಳನ್ನು ಒದಗಿಸಲು ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

(ಶ್ರೀ ಎ. ಜಿ. ಕೊಡ್ಗಿ)

ಉದ್ದಿಮೆಯ ವಿಚಾರವಾಗಿ ಹೇಳುವುದಾದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯು ಉದ್ದಿಮೆಯಲ್ಲಿ ಬಹಳ ಹಿಂದುಳಿದ ಪ್ರದೇಶವಾಗಿದೆ. ಅಲ್ಲಿ ಸಾಕಷ್ಟು ಕಬ್ಬಿಣದ ಅದುರು ದೊರೆಯುವ ವಿಷಯ ಎಲ್ಲರಿಗೂ ಗೊತ್ತಿದೆ. ಈಗ ಕೊಡಚಾದ್ರಿಯಲ್ಲಿ ಕಬ್ಬಿಣದ ಅದುರು ದೊರೆಯುತ್ತದೆ. ಕೊಡಚಾದ್ರಿಯಿಂದ ಗಂಗೊಳ್ಳಿಗೆ ರೋಪ್‌ವೇ ಹಾಕಬೇಕೆಂದು ಯೋಚನೆ ಇತ್ತು, ಅದು ಏನಾಗಿದೆಯೋ ಗೊತ್ತಾಗಲಿಲ್ಲ. ಈ ಬಗ್ಗೆ ಸರ್ಕಾರದವರು ಸೂಕ್ತ ಕ್ರಮತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ನನ್ನ ಕ್ಷೇತ್ರವಾದ ಬೈಂದೂರಿನ ಹತ್ತಿರ ಬಾಕ್ಸೈಟ್ ಅದುರು ಸಿಕ್ಕುತ್ತದೆ. ಆದ್ದರಿಂದ ಅಲ್ಲಿ ಒಂದು ಪೆಲೆಟೈಜೇಷನ್ ಫ್ಯಾಕ್ಟರಿಯನ್ನು ಸ್ಥಾಪಿಸುವುದಕ್ಕೆ ಸಾಧ್ಯವಿದೆ. ಅದನ್ನು ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಆ ರೀತಿ ಮಾಡುವುದಾದರೆ ಅಲ್ಲಿ ಹೆಚ್ಚಿನ ಉದ್ಯೋಗಾವಕಾಶವನ್ನು ಕಲ್ಪಿಸುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ಹೇಳುತ್ತೇನೆ.

ಹಾಗೆ ಹೇರಳವಾದ ಅರಣ್ಯ ಸಂಪತ್ತು ಕೂಡ ನಮ್ಮ ಜಿಲ್ಲೆಯಲ್ಲಿ ಇದೆ. ಅದರ ದುರುಪಯೋಗ ಬಹಳವಾಗಿ ಇವೊತ್ತಿನ ದಿವಸ ಆಗುತ್ತಾ ಇದೆ. ಅದರ ಸದುಪಯೋಗ ಸರಿಯಾಗಿ ಆಗಬೇಕಾಗಿದೆ. ಹಾಗೆ ಸದುಪಯೋಗವಾಗಬೇಕಾದರೆ ನಮ್ಮ ಜಿಲ್ಲೆಯಲ್ಲಿಯೇ ಒಂದು ಪ್ಲೈವುಡ್ ಕಾರ್ಖಾನೆಯನ್ನು ಮಾಡಿದರೆ ಅದರಿಂದ ಅಲ್ಲಿರತಕ್ಕ ಅರಣ್ಯ ಸಂಪತ್ತನ್ನೂ ಸದುಪಯೋಗಪಡಿಸಿಕೊಳ್ಳಬಹುದು; ಮತ್ತು ಇದರಿಂದ ಅಲ್ಲಿರತಕ್ಕ ನಿರುದ್ಯೋಗಿ ಜನರಿಗೆ ಉದ್ಯೋಗವನ್ನು ಒದಗಿಸಲೂ ಒಂದು ಅವಕಾಶವಾಗುತ್ತದೆ. ಏಕೆಂದರೆ ಕಾರ್ಖಾನೆಗಳನ್ನು ತೆಗೆದುಕೊಂಡರೆ ನಮ್ಮ ಜಿಲ್ಲೆಯು ಅತೀ ಹಿಂದುಳಿದ ಜಿಲ್ಲೆಯಾಗಿರುತ್ತದೆ. ಆದ್ದರಿಂದ ಇದನ್ನು ಅಲ್ಲಿ ಮಾಡಿದರೆ ಕೆಲವು ಬಡ ಜನರಿಗೆ ಇರುವ ಸಮಸ್ಯೆಯನ್ನು ಕೂಡ ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಿದ ಹಾಗೆ ಆಗುತ್ತದೆ. ಆ ಒಂದು ದೃಷ್ಟಿಯಿಂದ ನಮ್ಮ ಜಿಲ್ಲೆಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಹಾಗೆಯೇ ಮರವಂತೆ ಎಂಬ ಊರು ನಮ್ಮ ಜಿಲ್ಲೆಯಲ್ಲಿ ಒಂದು ಅತ್ಯುತ್ತಮವಾದ ಪ್ರವಾಸಿ ಕೇಂದ್ರವಾಗಿದೆ. ಅದು ಈಗಾಗಲೇ ಸಾಕಷ್ಟು ಜನಪ್ರಿಯವಾಗಿದೆ. ಸರ್ಕಾರದವರು ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರೂ ಈವರೆಗೆ ಯಾವ ಒಂದು ಕಾರ್ಯಕ್ರಮವನ್ನೂ ಅದರ ಬಗ್ಗೆ ತೆಗೆದುಕೊಂಡಿಲ್ಲ. ಬಹುಶಃ ಅದನ್ನು ನಮ್ಮ ರಾಜ್ಯಪಾಲರವರು ಸಹ ನೋಡಿ ಅದರ ಬಗ್ಗೆ ಕಾರ್ಯ ಪ್ರವೃತ್ತರಾಗಬೇಕೆಂದು ಹೇಳಿದ್ದಾರೆ. ಆದರೆ ಈವರೆಗೂ ಯಾವ ಕಾರ್ಯಕ್ರಮವನ್ನೂ ಅದರ ಬಗ್ಗೆ ತೆಗೆದುಕೊಂಡಿಲ್ಲವಾದ್ದರಿಂದ ಸರ್ಕಾರದವರು ಶೀಘ್ರವಾದ ಕ್ರಮವನ್ನು ಇದರ ಬಗ್ಗೆ ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ಇನ್ನು ಲೋಕೋಪಯೋಗಿ ಇಲಾಖೆಯ ವಿಚಾರವಾಗಿ ಮಾನ್ಯ ಚನ್ನಬಸಪ್ಪನವರು ಬಹಳ ಒಳ್ಳೆಯ ಭಾಷಣವನ್ನು ನಮ್ಮ ಜಿಲ್ಲೆಯಲ್ಲಿ ಮಾಡಿದ್ದಾರೆ. ತಮ್ಮ ಭಾಷಣದಲ್ಲಿ ಪ್ರತೀ ತಾಲೂಕಿನಲ್ಲಿ 50 ಮೈಲು ರಸ್ತೆಗಳನ್ನು ತೆಗೆದುಕೊಂಡು ಮಾಡುತ್ತೇವೆಂದು ಹೇಳಿದ್ದಾರೆ. ಮತ್ತು ಹಳ್ಳಿಗಾಡುಗಳಲ್ಲಿ ಸಾರಿಗೆ ಸಂಪರ್ಕಗಳನ್ನು ಕಲ್ಪಿಸುವ ಕಾರ್ಯವನ್ನು ಹೆಚ್ಚು ಹೆಚ್ಚಾಗಿ ತೆಗೆದುಕೊಂಡು ಅಲ್ಲಿರತಕ್ಕ ಜನರಿಗೆ ಅನುಕೂಲ ಮಾಡಿಕೊಡುತ್ತೇವೆಂದೂ ಹೇಳಿದ್ದಾರೆ. ಆದರೆ ಬಜೆಟಿನಲ್ಲಿ ನೋಡಿದಾಗ ಕೇವಲ 4ವರೆ ಕೋಟಿ ರೂಪಾಯಿ ಮಾತ್ರ ನಮ್ಮ ರಾಜ್ಯದ ರಸ್ತೆ ಸಾರಿಗೆಗಳಿಗೆ ಮುಂದಿನ ವರ್ಷ ಖರ್ಚು ಮಾಡುತ್ತೇವೆಂದು ಹೇಳುತ್ತಿದ್ದಾರೆ. ನಮ್ಮ ಒಂದು ಜಿಲ್ಲೆಗೇ ಈ ಕೆಲಸಕಾರ್ಯಗಳಿಗೆ ಸಾಧಾರಣ ಮೂರು-ನಾಲ್ಕು ಕೋಟಿ ರೂಪಾಯಿಯ ಅವಶ್ಯಕತೆ ಇರುವುದರಿಂದ ಇದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಲೋಕೋಪಯೋಗಿ ಇಲಾಖೆ ಒದಗಿಸಬೇಕಾಗುತ್ತದೆ. ಅದರ ಬಗ್ಗೆ ಮಾನ್ಯ ಮಂತ್ರಿಯವರು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಇವತ್ತಿಗೂ ಮಲೆನಾಡು ಪ್ರದೇಶಗಳಲ್ಲಿ ಸರಿಯಾದ ಸಾರಿಗೆ ಸಂಪರ್ಕ ಇಲ್ಲದೆ ಅಲ್ಲಿನ ಜನರು ಬಹಳ ತೊಂದರೆ ಪಡುತ್ತಿದ್ದಾರೆ. ಅದಲ್ಲದೆ ನನ್ನ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಬಂದು 25 ವರ್ಷವಾದರೂ ಇನ್ನೂ ಕೆಲವು ದ್ವೀಪಗಳು ಇವೆ. ಅಲ್ಲಿರತಕ್ಕ ಜನರಿಗೆ ಯಾವ ರೀತಿಯ ಸಾರಿಗೆ ಸಂಪರ್ಕವೂ ಇಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ಉದಾಹರಣೆಗೆ ಉಪ್ಪಿನಕುದ್ರು ಎಂಬ ಜಾಗಕ್ಕೆ ಕಳೆದ 4-5 ವರ್ಷಗಳಿಂದಲೂ ಒಂದು ಸೇತುವೆ ಮಾಡಬೇಕೆಂದು ಒತ್ತಾಯ ಇದ್ದರೂ ಇನ್ನೂ ಅದನ್ನು ತೆಗೆದುಕೊಂಡಿಲ್ಲ. ಅದಕ್ಕೆ ಆಗುವ ಖರ್ಚು ಆದರೂ ಒಂದು ಮೂರು ನಾಲ್ಕು ಲಕ್ಷ ರೂಪಾಯಿಗಳಾಗಬಹುದು. ಆದ್ದರಿಂದ ಸರ್ಕಾರದವರು ಈಗಲಾದರೂ ಅದರ ಬಗ್ಗೆ ಕ್ರಮ ತಗದುಕೊಳ್ಳಬೇಕೆಂದು ಸೂಚನೆ ಮಾಡುತ್ತೇನೆ. ಆದ್ದರಿಂದ ಇನ್ನಾದರೂ ಪೇಟೆ ಪಟ್ಟಣಗಳಿಗೆ ಕಾಂಕ್ರಿಟ್ ರಸ್ತೆಗಳನ್ನು ಇನ್ನೂ ಹೆಚ್ಚು ರಚಿಸುವುದರ ಬದಲು ರಾಜ್ಯದಲ್ಲಿರುವ ಹಳ್ಳಿಗಳಿಗೆ ಮತ್ತು ಮಲೆನಾಡು ಪ್ರದೇಶಗಳಿಗೆ ಹೆಚ್ಚಿನ ಸಾರಿಗೆ ಸಂಪರ್ಕಗಳನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೂ ನೀರಾವರಿ ವಿಚಾರದಲ್ಲಿ ಹೇಳುವುದಾದರೆ, ಇವತ್ತು ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ಅವಶ್ಯಕತೆ ಇದೆ. ಆದರೆ ದೊಡ್ಡ ನೀರಾವರಿ ಯೋಜನೆಗಳನ್ನು ಮಾತ್ರ ಮಾಡುವುದರಿಂದ ಸಣ್ಣ ನೀರಾವರಿ ಯೋಜನೆಗಳಿಗೆ ಅಷ್ಟು ಪ್ರಾಶಸ್ತ್ಯವನ್ನು ಕೊಡುತ್ತಾ ಇಲ್ಲ. ನಮ್ಮ ಜಿಲ್ಲೆಯಲ್ಲಿ ಇಂತಹ ದೊಡ್ಡ ನೀರಾವರಿ ಯೋಜನೆಗಳು ಪ್ರಯೋಜನವಿಲ್ಲ. ಅಲ್ಲಿ ಬೇಕಾಗಿರತಕ್ಕದ್ದು ಸಣ್ಣ ನೀರಾವರಿ ಯೋಜನೆಗಳು. ಆದರೆ ಸಣ್ಣ ನೀರಾವರಿಯ ಸೌಕರ್ಯ ಯಾವುದೂ ಅಲ್ಲಿ ಇಲ್ಲ. ಇವತ್ತು ಇಡೀ ನಮ್ಮ ರಾಜ್ಯದಲ್ಲಿ ಬೆಂಗಳೂರು ನಗರವನ್ನು ಬಿಟ್ಟರೆ ಎರಡನೆಯ ಜಿಲ್ಲೆ ಅಂದರೆ ದಕ್ಷಿಣ ಕನ್ನಡ ಜಿಲ್ಲೆ. ನಮ್ಮ ಜಿಲ್ಲೆಯು ರಾಜ್ಯದಲ್ಲಿ ಅತೀ ಹೆಚ್ಚಿನ ತೆರಿಗೆ ಕೊಡುವಂತಹ ಜಿಲ್ಲೆಯಾಗಿದೆ. ಆದ್ದರಿಂದ ಈ ಜಿಲ್ಲೆಗೆ ಸಾಕಷ್ಟು ಬೇಕಾದ ಅವಕಾಶಗಳನ್ನು ಕಲ್ಪಿಸಿ ಕೊಡಬೇಕಾಗಿರುವುದರಿಂದ ಯೋಗ್ಯವಾದ ಸಣ್ಣ ನೀರಾವರಿ ಯೋಜನೆಗಳನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದೇ ಸಂದರ್ಭದಲ್ಲಿ ಹಾರಾಡಿ ಮತ್ತು ಬೀಜೂರು ಯೋಜನೆಗಳಿಗೆ ಸಾಕಷ್ಟು ಹಣವನ್ನು ವೆಚ್ಚ ಮಾಡಿದ್ದಾರೆ. ಮದ್ರಾಸ್ ಸರ್ಕಾರ ಇರುವಾಗ ಈ ಹಾರಾಡಿ ರಿಸರ್ವಾಯರ್ ಸ್ಕೀಂ ಇನ್‌ವೆಸ್ಟಿಗೇಶನ್ ಆಗಿದ್ದರೂ ಇನ್ನೂ ಹಾಗೆಯೇ ಉಳಿದಿದೆ. ಅದೇ ರೀತಿ ಬೀಜೂರು ಸ್ಕೀಂಗೂ ಹಣ ಖರ್ಚು ಮಾಡಿದ್ದರೂ ಇನ್ನೂ ಯಾವ ಹಂತಕ್ಕೂ ಬರಲಿಲ್ಲ. ಪ್ರತೀ ವರ್ಷ ಕೇಳಿದಾಗ ಅಂಡರ್ ಇನ್‌ವೆಸ್ಟಿಗೇಷನ್ ಇದೆ ಎಂದು ಹೇಳುತ್ತಿದ್ದಾರೆ ಹೊರತು ಯಾವ ರೀತಿಯ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಆದ್ದರಿಂದ ಇವೆರಡು ಸ್ಕೀಮುಗಳನ್ನೂ ಆದಷ್ಟು ಜಾಗ್ರತೆ ಮಂಜೂರು ಮಾಡಿ ನಮ್ಮ ಜಿಲ್ಲೆಗೆ ಈ ನೀರಾವರಿಯಿಂದ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವರಾಹಿ ಹೈಡ್ರೊ ಎಲೆಕ್ಟ್ರಿಕ್ ಪ್ರೊಜೆಕ್ಟ್‌ನ್ನು ತೆಗೆದುಕೊಳ್ಳುತ್ತೇವೆಂದು ಮಾನ್ಯ ಮಂತ್ರಿಯವರು ಹೇಳಿದ್ದರು. ಆದರೆ ಅದನ್ನು ಯಾವಾಗ ತೆಗೆದುಕೊಳುತ್ತಾರೆ ಎಂಬುದನ್ನು ಹೇಳಿಲ್ಲ. ಬಹುಶಃ ಈ ಯೋಜನೆ ಸರಿಯಾಗಿ ಪರಿಶೀಲಿಸಿದರೆ, ಕಾಳೀ ನದಿ ಯೋಜನೆಗಿಂತಲೂ ಕಡಿಮೆ ವೆಚ್ಚದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಿ ಕೊಡುವಂತಹ ಯೋಜನೆಯಾಗಿರುತ್ತದೆ. ಆದ್ದರಿಂದ ಈ ಯೋಜನೆಯನ್ನು ರಾಜ್ಯಸರ್ಕಾರದವರಿಗೆ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲವಾದರೆ ಕೇಂದ್ರ ಸರ್ಕಾರದ ನೆರವಿನಿಂದಾದರೂ ತೆಗೆದುಕೊಂಡರೆ ನಮ್ಮ ರಾಜ್ಯದಲ್ಲಿ ಇನ್ನೂ ಹೆಚ್ಚಿನ ವಿದ್ಯುಚ್ಛಕ್ತಿ ಸಂಪನ್ಮೂಲಗಳನ್ನು ತರಲು ಸಾಧ್ಯವಾಗುತ್ತದೆ.

ಇನ್ನು ಮೀನುಗಾರಿಕೆಗೆ ನಮ್ಮ ಬಜೆಟ್ಟಿನಲ್ಲಿ ಒಟ್ಟಿಗೆ 66 ಲಕ್ಷ ಚಿಲರೆ ರೂಪಾಯಿಯನ್ನು ಮಾತ್ರ ಒದಗಿಸಿದ್ದಾರೆಂದು ಕಾಣುತ್ತದೆ. ನಾನಾದರೂ ಹೇಳುತ್ತೇನೆ ಇದು ಬಹಳ ಕಡಿಮೆಯಾಗಿದೆ. ನಮ್ಮ ಜಿಲ್ಲೆಯಲ್ಲಿ ಮೀನುಗಾರಿಕೆ ಮಂತ್ರಿಯವರನ್ನು ಕರಕೊಂಡು ಹೋಗಿ ಕೆಲವು ಕ್ಷೇತ್ರಗಳ ಪರಿಚಯ ಮಾಡಿಸಿಕೊಟ್ಟಿದ್ದೇನೆ. ಹಲವಾರು ಪ್ರದೇಶಗಳಲ್ಲಿ ಈ ಮೀನುಗಾರರಿಗೆ ಮುಖ್ಯವಾಗಿ ಸಾಗಾಣಿಕೆಗೆ ಬೇಕಾಗಿರತಕ್ಕ ಸಣ್ಣಪುಟ್ಟ ರಸ್ತೆಗಳನ್ನು ಮಾಡಿ ಕೊಡಬೇಕಾಗಿದೆ. ಕೆಲವು ರಸ್ತೆಗಳು ಅರ್ಧಂಭರ್ಧವಾಗಿವೆ. ಅಂಥವುಗಳನ್ನು ಪೂರ್ತಿಗೊಳಿಸಬೇಕಾಗಿದೆ. ಆದ್ದರಿಂದ ಇಂಥ ಬಡ ಮೀನುಗಾರರಿಗೆ ಅನುಕೂಲವಾಗುವ ಈ ರಸ್ತೆ ಕೆಲಸಗಳನ್ನು ಮಾಡಬೇಕಾಗಿದೆ. ಅಲ್ಲದೆ ಈ ಮೀನುಗಾರರಿಗೆ ತಮ್ಮ ಮೀನು ಶೇಖರಣೆ ಮತ್ತು ತಯಾರಿ ಮಾಡುವುದಕ್ಕೋಸ್ಕರ ಬೇಕಾದಂತಹ ಜಾಗಗಳನ್ನು ಸಹ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ವಿದ್ಯಾಭ್ಯಾಸಕ್ಕೆ 60 ಕೋಟಿ ರೂಪಾಯಿ ಇಟ್ಟಿದ್ದಾರೆಂದು ಕಾಣುತ್ತದೆ. ಆದರೆ ಇರತಕ್ಕ 220 ಜೂನಿಯರ್ ಕಾಲೇಜುಗಳಿಗೆ ಗ್ರ್ಯಾಂಟ್ ಕೊಡುವುದಕ್ಕೆ ಎಲ್ಲಿಂದ ತರುತ್ತೀರೆಂದು ಗೊತ್ತಾಗಿಲ್ಲ. ಅವುಗಳಿಗೆ ಎಲ್ಲದಕ್ಕೂ ಗ್ರ್ಯಾಂಟನ್ನು ಕೊಡುತ್ತೀರಾ ಅಥವಾ ಇಲ್ಲವೋ ಎಂಬುದನ್ನು ತಿಳಿಸಿಲ್ಲ. ಏಕೆಂದರೆ ಈಗಾಗಲೇ ಜೂನಿಯರ್ ಕಾಲೇಜುಗಳಲ್ಲಿ ಅಡ್ಮಿಷನ್ಸ್ ಪ್ರಾರಂಭವಾಗಿವೆ. ಸಂದರ್ಭ ಹೀಗಿರುವಾಗ ಕೆಲವು ಕಾಲೇಜುಗಳಿಗೆ ಗ್ರ್ಯಾಂಟ್ ಕೊಡದಿದ್ದರೆ ಅವುಗಳನ್ನು ಮುಚ್ಚಬೇಕಾದ ಪರಿಸ್ಥಿತಿ ಬರುವುದರಿಂದ ಅವರಿಗೆ ಗ್ರ್ಯಾಂಟ್ ಇಂತಿಷ್ಟು ಕೊಡುತ್ತೇವೆಂಬುದರ ಬಗ್ಗೆ ಖಂಡಿತವಾಗಿ ಹೇಳಬೇಕು. ಇಲ್ಲದಿದ್ದರೆ ಬಹಳ ಕಾಲೇಜುಗಳನ್ನು ಮುಚ್ಚಬೇಕಾದ ಪ್ರಸಂಗ ಬರುತ್ತದೆ. ಹಾಗೆಯೇ ತಾಲೂಕು ಬೋರ್ಡು ಹೈಸ್ಕೂಲುಗಳಲ್ಲಿ 292 ಹೈಸ್ಕೂಲುಗಳನ್ನು ಸರ್ಕಾರದವರು ವಶಕ್ಕೆ ತೆಗೆದುಕೊಂಡಿದ್ದಾರೆ. ಇನ್ನು ಕೇವಲ 55 ಹೈಸ್ಕೂಲುಗಳು ಬಾಕಿ ಇವೆ. ಅವುಗಳನ್ನು ಕೂಡ ಸಂಪೂರ್ಣವಾಗಿ ಸರ್ಕಾರದ ವಶಕ್ಕೆ ತೆಗೆದುಕೊಂಡರೆ ಅಲ್ಲಿಯ ಆಡಳಿತ ಸರಿಯಾಗಿ ನಡೆಸುವುದಕ್ಕೆ ಸಾಧ್ಯ ಇಲ್ಲದಿದ್ದರೆ ತಾಲ್ಲೂಕು ಬೋರ್ಡಿನ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಅವರು ಜೂನಿಯರ್ ಕಾಲೇಜಾಗಲಿ, ಅಥವಾ ಹೈಸ್ಕೂಲಾಗಲಿ ನಡೆಸುವುದು ಬಹಳ ಕಷ್ಟವಾಗಿದೆ. ಅದೇ ರೀತಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೂ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಬೇಕಾಗಿದೆ. ಏಕೆಂದರೆ ಇಂದು ಜೂನಿಯರ್ ಕಾಲೇಜುಗಳಿಗೆ ಮಾತ್ರ ಮಹತ್ವ ಕೊಟ್ಟರೆ

(ಶ್ರೀ ಎ. ಜಿ. ಕೊಡ್ಗಿ)

ಸಾಲದು. ಮೊದಲು ಉಗಮ ಸ್ಥಾನವಾಗಿರುವ ಪ್ರಾಥಮಿಕ ವಿದ್ಯಾಭ್ಯಾಸಕ್ಕೂ ಸರ್ಕಾರದವರು ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟರೆ ಮಾತ್ರ ಮುಂದೆ ಬರುವಂತಹ ಯುವಕರು ಒಳ್ಳೆಯ ನಾಗರೀಕರಾಗಿ ಬಾಳಲು ಸಾಧ್ಯವಾಗುತ್ತದೆ. ಆದ್ದರಿಂದ ಪ್ರಾಥಮಿಕ ವಿದ್ಯಾಭ್ಯಾಸಕ್ಕೂ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದು ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಂಡು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4–00 P.M.

†ಶ್ರೀ ಬಾಪುಗೌಡ ರಾಯಪ್ಪ (ಶಹಪೂರ್).—ಮಾನ್ಯ ಸಭಾಪತಿಗಳೇ, ನಮ್ಮ ಮಾನ್ಯ ಹಣಕಾಸಿನ ಸಚಿವರು 1972–73ನೇ ಹಣಕಾಸಿನ ಪಟ್ಟಿಯನ್ನು ಈ ಸದನಕ್ಕೆ ಸಲ್ಲಿಸಿದ್ದಾರೆ. ಮಾನ್ಯ ಶ್ರೀ ಘೋರ್ಪಡೆಯವರು ಬಹಳ ಚತುರರು. ಹಣಕಾಸಿನ ವಿಷಯದಲ್ಲಿ ಸಾಕಷ್ಟು ಅನುಭವವುಳ್ಳವರು ಮತ್ತು ಹೆಚ್ಚಿಗೆ ಲೆಕ್ಕಪತ್ರಗಳ ವಿಷಯದಲ್ಲಿ ಅವರು ವಾಸ್ತವಾಂಶದಮೇಲೆ ಹೆಚ್ಚಿನ ವಿಶ್ವಾಸವುಳ್ಳವರು ಇಂತಹ ಬಡ್ಜೆಟ್ಟನ್ನು ಸಲ್ಲಿಸುವ ಕಾಲಕ್ಕೆ ನಾವು ಸ್ವಲ್ಪಮಟ್ಟಿಗೆ ಸಾರ್ವತ್ರಿಕ ಚುನಾವಣೆಯ ಹಿನ್ನೆಲೆಯಲ್ಲಿ ಹಣಕಾಸಿನ ಪಟ್ಟಿಯನ್ನು ವಿಚಾರಮಾಡಿದಾಗ್ಗೆ ನಮಗೆ ಏನು ಕಂಡುಬರುತ್ತದೆ ಅಂದರೆ ಅವರು ಅತ್ಯಂತ ಪ್ರಗತಿಶೀಲವಾಗಿ ಈ ಬಡ್ಜೆಟ್ಟನ್ನು ಇಲ್ಲಿ ಮಂಡಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದರೆ ಮಾನ್ಯ ಶ್ರೀ ಘೋರ್ಪಡೆಯವರು ನಾನು ಕಂಡಾಗ್ಗೆ ಪಬ್ಲಿಕ್ ಅಂಡರ್ ಟೇಕಿಂಗ್ಸ್ ವರ್ಕ್ಸ್ ಕಮಿಟಿಯ ಅಧ್ಯಕ್ಷರಾಗಿದ್ದರು. ಅವರಿಗೆ ಅಂಕಿ ಅಂಶಗಳ ಬಗ್ಗೆ ಹೆಚ್ಚಿನ ಜ್ಞಾನ ಉಂಟು. ಅವರ ಮನಸ್ಸಿನಲ್ಲಿರತಕ್ಕ ಆಶೆ ಆಕಾಂಕ್ಷೆಗಳನ್ನು ಎಷ್ಟರಮಟ್ಟಿಗೆ ಪೂರ್ಣಮಾಡಬೇಕೋ ಗೊತ್ತಿಲ್ಲ, ಈ ದೇಶದ ಪರಿಸ್ಥಿತಿಗನುಗುಣವಾಗಿ ಹೇಳುವಾಗ ಇದು ಅಷ್ಟು ನನಗೆ ತೃಪ್ತಿಕರವಾಗಿಲ್ಲವೆಂದು ಹೇಳುತ್ತಿದ್ದಾರೆ. ಅಂದಮೇಲೆ ಮಾನ್ಯ ಶ್ರೀ ಘೋರ್ಪಡೆಯವರು ಸಾರ್ವತ್ರಿಕ ಚುನಾವಣೆಯ ಹಿನ್ನೆಲೆಯಲ್ಲಿ ಯಾವ್ಯಾವ ವಾಗ್ದಾನಗಳನ್ನು ಜನತೆಗೆ ಕೊಟ್ಟಿದ್ದರೋ ಅವನ್ನೆಲ್ಲಾ ಪೂರೈಸಲು ಬಹಳ ಹೆಚ್ಚಿನ ಪ್ರಯತ್ನಗಳನ್ನು ಮಾಡಿದ್ದಾರೆ. ಸಾರ್ವತ್ರಿಕವಾಗಿ ಅನೇಕ ಘೋಷಣೆಗಳನ್ನು ಏನು ಮಾಡಿದ್ದರೋ ಅದನ್ನೂ ಸಹ ಮರೆತಿಲ್ಲ. ಇಂದಿನ ದಿವಸ ಆಡಳಿತ ಪಕ್ಷದವರು ಅಧಿಕಾರದಲ್ಲಿ ಏನು ಬಂದಿದ್ದಾರೋ ಅವರು ಬಹಳ ಹೆಚ್ಚಿನ ಪ್ರಮಾಣದಲ್ಲಿ ಕ್ರಾಂತಿಕಾರಕವಾದ ಘೋಷಣೆಗಳನ್ನು ಹಿಂದೆ ಮಾಡಿದ್ದರೂ ಅವನ್ನೆಲ್ಲಾ ಕಾರ್ಯರೂಪಕ್ಕೆ ತರುವಂತೆ ಪ್ರಯತ್ನಪಡುತ್ತಿದ್ದಾರೆ. ಬಡವರಿಗೆ ಬಡತನವನ್ನು ಹೋಗಲಾಡಿಸಲು ಅನೇಕ ಪ್ರಯತ್ನಗಳನ್ನು ಮಾಡುತ್ತಲಿದ್ದಾರೆ. ಮನೆ ಇಲ್ಲದವರಿಗೆ ಮನೆಗಳನ್ನು ಕೊಡುವುದು, ಹೊಲ ಇಲ್ಲದವರಿಗೆ ಹೊಲ ಕೊಡುವುದು, ಇಂತಹ ಒಂದು ಆಶೆ ಆಕಾಂಕ್ಷೆ ಈ ಬಡ್ಜೆಟ್ ಭಾಷಣದಲ್ಲಿ ಎದ್ದು ಕಾಣುತ್ತಿದೆ. ಆದ್ದರಿಂದ ಇವತ್ತು ಪ್ರತಿಯೊಬ್ಬ ರೈತನೂ ಕೂಡ ಬಡತನದಿಂದ ಸಂಪೂರ್ಣವಾಗಿ ಶೋಷಿಸಲ್ಪಡುವುದಕ್ಕೆ ಸರ್ಕಾರದವರು ಏನೇನು ಸೌಲಭ್ಯಗಳನ್ನು ಕೊಡುತ್ತಾರೋ ಅದನ್ನು ತೆಗೆದುಕೊಳ್ಳಬೇಕು. ಇದು ಇವತ್ತಿನ ರೈತರಲ್ಲಿ ಹಾಗೂ ಸಾಮಾನ್ಯಜನರಲ್ಲಿ ಒಳಗೊಂಡಿದೆ. ಈಗ ಬಡವರಿಗೆ ಮನೆಗಳನ್ನು ಕೊಡುವ ಸಲುವಾಗಿ ಈಗಾಗಲೇ ಸರ್ಕಾರದ ವತಿಯಿಂದ ಸರ್ಕಾರದ ಆಜ್ಞೆ ಎಲ್ಲಾ ಗ್ರಾಮಗಳಿಗೂ ತಲುಪಿರುವುದರಿಂದ ಅಲ್ಲಿನ ಪ್ರತಿಯೊಬ್ಬ ತಹಸೀಲ್ದಾರ್ ಮತ್ತು ಬಿ.ಡಿ.ಒ.ಗಳು ಯಾರ್ಯಾರಿಗೆ ಮನೆ, ಹೊಲ ಇಲ್ಲವೋ ಅಂತಹವರೆಲ್ಲರ ಪಟ್ಟಿಯನ್ನು ತಯಾರುಮಾಡುತ್ತಿದ್ದಾರೆ. ಯಾರಿಗೆ ಹೊಲಗಳಿಲ್ಲ ಅಂತಹವರ ಪಟ್ಟಿಯೂ ಸಹ ಸಿದ್ಧವಾಗುತ್ತಿದೆ. ಇಂತಹ ಒಂದು ಕಾರ್ಯವನ್ನು ಮಾಡುವಾಗ ತುಂಬಾ ಎಚ್ಚರ ವಹಿಸಿ ಈ ಕೆಲಸ ಮಾಡಬೇಕಾಗುತ್ತದೆ. ಇದು ಬಹಳ ಉತ್ತಮವಾದ ಕೆಲಸ. ಅದರೆ ಮನೆಗಳು, ಹೊಲಗಳು ಎಲ್ಲೆಲ್ಲಿ ಇವೆಯೆಂಬುದನ್ನು ಕಂಡುಹಿಡಿಯುವುದಕ್ಕೆ ಸರ್ಕಾರದ ವತಿಯಿಂದ ಸರಿಯಾದಂಥ ವ್ಯವಸ್ಥೆ ಮಾಡಬೇಕಾದ್ದು ಮುಖ್ಯ ಏಕೆಂದರೆ, ಅನೇಕ ಬಡವರಿಗೆ, ರೈತರಿಗೆ, ಇವು ವಿತರಣೆಯಾಗುವುದಿಲ್ಲ. ಬಡತನವೆಂಬುದು ರೈತನಲ್ಲಿ ಕಾರ್ಮಿಕವರ್ಗದವರಲ್ಲಿ ಇತ್ತೀಚೆಗೆ ಎದ್ದು ಕಾಣುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ನಾನು ತಿಳಿದಮಟ್ಟಿಗೆ ಹೇಳುವುದಾದರೆ, ಇವತ್ತು ಗುಲ್ಬರ್ಗ್ ಜಿಲ್ಲೆಯ ವಿಷಯವಾಗಿ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿರತಕ್ಕ ಅಧಿಕಾರಿಗಳನ್ನು ಕೇಳದೆಯೇ ಕೆಲವರು ಈ ವಿಚಾರದಲ್ಲಿ ಪಟ್ಟಿಯನ್ನು ತಯಾರುಮಾಡುತ್ತಿದ್ದಾರೆ. ಆ ಪಟ್ಟಿಯ ಪ್ರಕಾರ ಎಷ್ಟುಮನೆಗಳು ಮತ್ತು ಸೈಟುಗಳು ರೈತರಿಗೆ ಕೊಡುತ್ತೀರಿ ಎಂಬುದಾಗಿ ಕೇಳಿದಾಗ ಸರ್ವೇಸಾಧಾರಣವಾಗಿ ಸುಮಾರು 10 ಸಾವಿರ ಸೈಟುಗಳನ್ನಾದರೂ ನಮ್ಮ ಕ್ಷೇತ್ರಕ್ಕೆ ಕೊಡಬೇಕಾಗಿ ಬರುತ್ತದೆಂದು ಹೇಳಿದ್ದಾರೆ. ಅಂದಮೇಲೆ ನಮ್ಮ ಗುಲ್ಬರ್ಗಾ ಜಿಲ್ಲೆಗೆ ಸುಮಾರು ಒಂದು ಲಕ್ಷ ಸೈಟುಗಳಾದರೂ ಬೇಕು. ಪಟ್ಟಿ ತಯಾರಾಗುತ್ತಿರುವುದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಆ ಪಟ್ಟಿಯನ್ನು ಸರ್ಕಾರದ

ಅಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸುವವರಾಗಿದ್ದಾರೆ. ಅದರೂ ಕೂಡ ನನ್ನ ಕ್ಷೇತ್ರಕ್ಕೆ ಹೆಚ್ಚಿನ ಸೈಟುಗಳು, ಮನೆಗಳು ಬೇಕಾಗಿವೆ. ಸಾಮಾನ್ಯವಾಗಿ ಒಂದು ಮನೆಗೆ ಸರಾಸರಿ ಅಂದರೆ 3 ಸಾವಿರ ರೂಪಾಯಿಗಳಾದರೂ ಬೇಕು. ಅಂದಮೇಲೆ ಒಂದು ಸಾವಿರ ಮನೆಗೆ ಕಮ್ಮಿ ಅಂದರೆ ಮೂರು ಕೋಟಿ ರೂಪಾಯಿಗಳಾದರೂ ಬೇಕು. ಒಂದು ಮನೆಗೆ 3 ಸಾವಿರ ರೂಪಾಯಿಗಳ ಪ್ರಕಾರ 10 ಸಾವಿರ ಮನೆಗೆ 30 ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಈ 30 ಲಕ್ಷ ಪ್ರಮಾಣವನ್ನು ತಾವು ಸ್ಟೇಟ್ ಲೆವಲ್‌ನಲ್ಲಿ ವಿಚಾರಮಾಡಿದರೆ ಸರಾಸರಿ 50 ಕೋಟಿ ರೂಪಾಯಿಗಳು ಮನೆಗೋಸ್ಕರವೇ ಒದಗಿಸಿಕೊಡಬೇಕಾಗುತ್ತದೆ. ಆದ್ದರಿಂದ ಇವತ್ತು ರೈತರಿಗೆ ಏನು ಆಶೆ ಇದೆಯೋ ಆ ಪ್ರಕಾರ ಪಟ್ಟಿಯೇನೋ ತಯಾರಾಗುತ್ತಿದೆ. ಇದನ್ನು ವಿಶ್ಲೇಷಣೆ ಮಾಡಬೇಕು. ಇದು ಸಾರ್ವಜನಿಕರ ಚುನಾವಣೆಯಲ್ಲಿ ಕೊಟ್ಟಿರತಕ್ಕ ವಾಗ್ದಾನ. ತಾವು ಬಡ್ಜೆಟ್ಟಿನಲ್ಲಿ ಒಂದು ಕೋಟಿ ರೂಪಾಯಿಗಳನ್ನು ಮನೆಗಳಿಗೋಸ್ಕರ ಇಟ್ಟಿದ್ದೀರಿ. ಇದರಿಂದ ಏನೂ ಆಗುವುದಿಲ್ಲ. ತಾವು ತಮ್ಮ ಅಧಿಕಾರ ವತಿಯಿಂದ ತಯಾರಿಸಲ್ಪಟ್ಟ ಪಟ್ಟಿ ಪ್ರಕಾರ ಎಷ್ಟರಮಟ್ಟಿಗೆ ತಾವು ಕೊಟ್ಟಂಥ ವಿಶ್ವಾಸವನ್ನು ಪೂರ್ಣಮಾಡುತ್ತೀರೆಂಬುದು ಮುಖ್ಯ. ಗೃಹನಿರ್ಮಾಣ ಮಂಡಲಿ ಮತ್ತು ನಗರಾಭಿವೃದ್ಧಿಮಂಡಲಿ ಒಂದು ಕೋಟಿ 26 ಲಕ್ಷ ರೂಪಾಯಿಗಳನ್ನು ಈ ಬಾಬಿಗೋಸ್ಕರ ಇಟ್ಟಿದ್ದಾರೆ. ಸ್ವಾತಂತ್ರ್ಯ ದಿನಾಚರಣೆ ಮಾಡುವ ಕಾಲಕ್ಕೆ 3 ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ಹೇಳಿರುವುದರಿಂದ 9 ಕೋಟಿ ರೂಪಾಯಿಗಳಾದರೂ ಅದಕ್ಕೆ ಬೇಕಾಗುತ್ತದೆ. ಮೂರು ಲಕ್ಷ ಸೈಟುಗಳ ಬಗ್ಗೆ ಹೇಳುವುದಾದರೆ, ಅವು ಎಲ್ಲೆಲ್ಲಿವೆ, ಅವು ಹೊಲವೇ ಅಥವಾ ಮನೆಯೋ ಎಂಬುದನ್ನು ವಿವರವಾಗಿ ತಿಳಿಸಬೇಕಾಗಿದೆ. ಇದರಲ್ಲಿ ನಿಜವಾಗಿ ಏನಾದರೂ ತಪ್ಪುಗಳನ್ನು ಅಧಿಕಾರಿಗಳು ಮಾಡುತ್ತಿದ್ದರೆ, ಅದನ್ನು ಕೂಡಲೇ ಸರಿಪಡಿಸಬೇಕು. ಹಳ್ಳಿಗಳಲ್ಲಿ ವಿಶೇಷವಾಗಿ ಮನೆ ಮತ್ತು ಹೊಲಗಳು ಸಿಗುತ್ತವೆ. ಇವತ್ತು 60 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಮನೆಗಳನ್ನು ಕಟ್ಟುವ ಸಲುವಾಗಿ ಒಂದು ಮಹತ್ತರವಾದ ಯೋಜನೆಯನ್ನು ಸರ್ಕಾರದವರು ಹಾಕಿಕೊಂಡಿದ್ದಾರೆ. ಅದರ ಸಲುವಾಗಿಯೇ ಇವತ್ತು ಹಳ್ಳಿಯ ಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಅನೇಕ ವರದಿಗಳು ಬರುತ್ತಿವೆ. ಇವತ್ತು ಏನು ಆಶೆ ಆಕಾಂಕ್ಷೆಗಳನ್ನು ನೀಡಿದ್ದರೋ ಅದನ್ನೇ ನಡೆಸುತ್ತಿದ್ದಾರೆ. ಅವರು ನಿಜವಾಗಿ ಒಳ್ಳೆಯ ಮನೆಗಳನ್ನು ಕಟ್ಟಿಸಿಕೊಡುತ್ತಾರೆಂಬ ವಿಶ್ವಾಸ ನಮಗಿದೆ. ಆ ಆಶೆ ನಿರಾಶೆಯಾಗಬಾರದು. ಆದರೆ ಮಹತ್ತರವಾದ ಕ್ರಾಂತಿ ಹಳ್ಳಿಗಳಲ್ಲಿ ಇತ್ತೀಚೆಗೆ ಆಗುತ್ತಿವೆ. ಅದರ ಬಗ್ಗೆ ಸರ್ಕಾರ ಹೆಚ್ಚಿನ ಗಮನಕೊಡಬೇಕು. ಅದೇ ರೀತಿಯಲ್ಲಿ ಹಿಂದೆ ಎಲ್ಲಾ ಹಳ್ಳಿಗಳಲ್ಲಿಯೂ ಸಮಗ್ರವಾದ ಭೂಕಂದಾಯವನ್ನು ಜಾರಿಗೆ ತರುತ್ತೇವೆಂದು ಒಂದು ಘೋಷಣೆಯನ್ನು ಚುನಾವಣೆಯ ಸಂಬಂಧದಲ್ಲಿ ಹೇಳಿದ್ದಾರೆ. ಹೈದರಾಬಾದ್ ಕರ್ಣಾಟಕದಲ್ಲಿ ವಿಶೇಷವಾಗಿ ಭೂಮಿ ರೈತನಲ್ಲಿ ಉಳಿದಿಲ್ಲ. ಅಲ್ಲಿ ಟೆನೆನ್ಸಿ ಆಕ್ಟು ಬಂತು. ಹಳ್ಳಿಗಳಲ್ಲಿ ಒಂದು ಸ್ಟ್ಯಾಂಡರ್ಡ್ ಇಷ್ಟೇ ಎಂದು ಈಗ ನಿಗದಿಮಾಡಿರುವುದರಿಂದ ಈಗ ಹಳ್ಳಿಗಳಲ್ಲಿರತಕ್ಕ ಎಲ್ಲಾ ಭೂಮಿಯನ್ನು ಕೆಲವರು ಈಗ ಆಗಲೇ ಮಾರಿಕೊಂಡಿದ್ದಾರೆ. ಹೌಸ್ ಸೈಟುಗಳ ವಿಷಯವಾಗಿ ಹಾಗೂ ಮನೆಗಳ ವಿಷಯದಲ್ಲಿ ಈಗಾಗಲೇ ರೈತರು ಎಚ್ಚೆತ್ತು ಯಾವ ಸೈಟಾಗಲೀ ಅಥವಾ ಮನೆಯಾಗಲೀ ಅವರ ಕೈಯ್ಯಲಿಲ್ಲವೆಂಬ ಪರಿಸ್ಥಿತಿ ಈಗ ಹಳ್ಳಿಗಾಡುಗಳಲ್ಲಿ ಉಂಟಾಗಿದೆ. ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ ಕೆಲವರಿಗೆ 500 ಅಥವಾ 600 ಎಕರೆ ಜಮೀನು ಇದೆ. 10 ಸ್ಟ್ಯಾಂಡರ್ಡ್ ಎಕರೆ ಎಂಬುದಾಗಿ ಮಾಡಿದ್ದರೂ ಕೂಡ ನಮಗೆ ಕಂಪನ್ಸೇಷನ್ ಸಿಗುವ ಹಾಗೆ ಇಲ್ಲ. ಏಕೆಂದರೆ ಕೇವಲ ಮಳೆಯ ಆಧಾರದಮೇಲೆ ಬೆಳೆಯತಕ್ಕ ಭೂಮಿ ನಮ್ಮದು. 10 ಎಕರೆ ಸ್ಟ್ಯಾಂಡರ್ಡ್ ಎಂದು ಮಾಡಿದರೆ 500 ಎಕರೆಯಷ್ಟು ಭೂಮಿ ಇರುವವನ ಗತಿಯೇನು ? ಕೇವಲ ಒಂದೆರಡು ಎಕರೆ ಇರುವವನ ಗತಿಯೇನು ? ಇದರಿಂದ ಎಷ್ಟರಮಟ್ಟಿಗೆ ಇವರು ಭೂಮಿ ಹಂಚುತ್ತಾರೆಂಬುದನ್ನು ಚೆನ್ನಾಗಿ ವಿಚಾರಮಾಡಬೇಕಾಗಿದೆ. ನನಗೆ ವಾಸ್ತವಿಕಾಂಶದಲ್ಲಿ ಹೆಚ್ಚಿನ ವಿಶ್ವಾಸ ಇದೆ. ಮಾನ್ಯ ಹಣಕಾಸಿನ ಸಚಿವರು ಆದಷ್ಟುಮಟ್ಟಿಗೆ ಅಧಿಕಾರದಲ್ಲಿದ್ದೇವೆಂಬ ಮಾತನ್ನು ಹೇಳಿ ಈ ಸಭೆಯಲ್ಲಿ ಒಂದು ಆಶಾದಾಯಕವಾದ ಬಡ್ಜೆಟ್ಟನ್ನು ಇಡಲು ಪ್ರಯತ್ನ ಮಾಡಿದ್ದಾರೆ. ಆದರೆ ಕೆಲವು ಸಂದರ್ಭಗಳಲ್ಲಿ ಸರ್ಕಾರದವರು ಹೆಚ್ಚಿನ ಜನರಿಗೆ ತಪ್ಪು ದಾರಿ ತಿಳಿದು ರೈತರಲ್ಲಿ ತಪ್ಪು ಆಶೆಆಕಾಂಕ್ಷೆಗಳನ್ನು ಹುಟ್ಟಿಸಿ ಅವರು ಕೇಳಿರತಕ್ಕದ್ದನ್ನು ಮುಂದಿನ ವರ್ಷದಲ್ಲಿ ಮಾಡುತ್ತೇವೆ ಎಂಬುದಾಗಿ ಹೇಳುವ ಒಂದು ಪ್ರಯೋಗದಿಂದ ಏನೇನೂ ಯಶಸ್ವಿಯಾಗುವುದಿಲ್ಲ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ತಾವು ಮಾಡತಕ್ಕ ಪ್ರಯೋಗ ನಿಜವಾಗಿಯೂ ವಾಸ್ತವಾಂಶದಲ್ಲಿಲ್ಲ. ಅದು ತಮ್ಮ ಮನಸ್ಸಿಗೇ ತೃಪ್ತಿ ಇಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ನಾನು ಈ ಸೀಲಿಂಗ್ ಬಗ್ಗೆ ಹೇಳುವುದಾದರೆ, ಸೀಲಿಂಗಿಗಿಂತ ಹೆಚ್ಚಿಗೆ ಅಪೇಕ್ಷೆ ಮಾಡುವಷ್ಟು ಭೂಮಿ ಹಂಚುವುದಕ್ಕೆ ಸಿಗುವುದಿಲ್ಲ. ನಿಮಗೆ ಮಾತ್ರ ಅವರಲ್ಲಿ ಅಭಿಮಾನವಿದೆಯೆಂದಲ್ಲ. ನಮಗೂ ಇದೆ. ನೀವು ಅಲ್ಲಿಗೆ ಸೀಲಿಂಗ್ ಬಿಡಬೇಕೆಂದು ಹೇಳುತ್ತೀರಾ ? ಸೀಲಿಂಗ್ ಪ್ರಕಾರವೇ ಭೂಮಿಯನ್ನು ಹಂಚಬೇಕು.

ಶ್ರೀ ಬಾಪೂಗೌಡ ರಾಯಪ್ಪ.—ಈ ಮನೆಯ ಸದಸ್ಯರಲ್ಲಿ ಯಾರ್ಯಾರಿಗೆ ಭೂಮಿ ಹೆಚ್ಚಿದೆಯೋ ಅವರು ಸರ್ಕಾರಕ್ಕೆ ಸರಂಡರ್ ಮಾಡಬೇಕು. ನಮ್ಮಲ್ಲಿ ಯಾರ್ಯಾರಿಗೆ ಭೂಮಿ ಹೆಚ್ಚಿದೆಯೋ ಅದನ್ನು ಸರಂಡರ್ ಮಾಡಲು ಪ್ರಯತ್ನ ಮಾಡಬೇಕು. ಅದು ಕೃತಿಯಲ್ಲಿ ಬರುವುದಕ್ಕೆ ಪ್ರಯತ್ನ ಮಾಡಬೇಕು. ಇದನ್ನು ಮಾನ್ಯ ಮಂತ್ರಿಗಳೂ ಮತ್ತು ಸದಸ್ಯರೂ ಸಹ ಏಕೆ ಮಾಡಬಾರದು? ಬರೀ ಮಾತಾಡುವುದಲ್ಲ, ಮಾತಾಡಿದ ಮೇಲೆ ಅದನ್ನು ಕೃತಿಗೆ ತರಬೇಕು. ಮನೆಗಳನ್ನೂ ಮತ್ತು ಹೊಲಗಳನ್ನೂ ಕೇವಲ ಶ್ರೀಮಂತರೇ ಪಡೆಯತಕ್ಕ ಮೋಸ ಏನಿದೆಯೋ ಅದು ಕೂಡಲೇ ಹೋಗಬೇಕು. ಪ್ರಜಾಪ್ರಭುತ್ವದಲ್ಲಿ ಅಂಥಾದ್ದನ್ನು ಬಹಳ ದಿವಸಗಳವರೆಗೆ ಬೆಳೆಸುವುದಕ್ಕಾಗುವುದಿಲ್ಲ. ಈ ರಾಜ್ಯದ ಜನತೆಯ ಕಲ್ಯಾಣಕ್ಕೋಸ್ಕರ ಹೆಚ್ಚು ಪ್ರಯತ್ನಪಟ್ಟು ಕೇಂದ್ರ ಸರ್ಕಾರದಿಂದ ಹಣ ಸಹಾಯವನ್ನು ಪಡೆದಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಎಷ್ಟೋ ದಿವಸಗಳಿಂದ ಆಗದೇ ಇರುವಂಥ ಯೋಜನೆ ಒಂದಿದೆ. ಈ ಯೋಜನೆಯನ್ನು ಕೇಂದ್ರ ಸರ್ಕಾರ ಮಾಡುತ್ತದೆಂದು ಹೇಳಿದೆ. ರೈತನಾದವನು ಸಾಮಾನ್ಯವಾಗಿ ಏಳಿಗೆಯಾಗಬೇಕಾದರೆ, ರೈತನ ಆರ್ಥಿಕ ಸ್ಥಿತಿ ಉತ್ತಮವಾಗಬೇಕು. ಅವರಿಗೆ ಬಹು ಮುಖ್ಯವಾಗಿ ಭೂಮಿ ಮತ್ತು ನೀರು ಬೇಕು. ಆ ಯೋಜನೆ ಗುಲ್ಬರ್ಗಾಕ್ಕೆ ಮತ್ತು ರಾಯಚೂರಿಗೆ ಸಂಬಂಧಪಟ್ಟ ಯೋಜನೆ ಅಪ್ಪರ್ ಕೃಷ್ಣಾ ಯೋಜನೆ. ಇದು 250 ಕೋಟಿ ರೂಪಾಯಿಗಳ ಯೋಜನೆ. ನಮ್ಮ ಮೂರು ಜಿಲ್ಲೆಗಳಲ್ಲಿಯೂ ಈಗ 20 ಇಂಚುಗಳಷ್ಟು ಮಳೆಯಾಗುತ್ತದೆ. ಇವತ್ತು ಬಜೆಟ್ಟಿನಲ್ಲಿ ಹಣ ಏನು ಇಟ್ಟಿದ್ದಾರೋ ಅದು ಬಹಳ ಕಮ್ಮಿ. ಹೇಮಾವತಿ ಭಾಗದಲ್ಲಿ 100 ಇಂಚುಗಳಷ್ಟು ಮಳೆಯಾಗುತ್ತದೆ. ಅಂದ ಮೇಲೆ ನಮ್ಮ ಭಾಗಕ್ಕೆ ಕೇವಲ ಒಂದು ಕೋಟಿ 90 ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ಆದರೆ 60 ಲಕ್ಷ ರೂಪಾಯಿಗಳನ್ನು ಸಿಬ್ಬಂದಿಗೆ ಖರ್ಚು ಮಾಡುತ್ತಿದ್ದಾರೆ. ನಾನು ಏಕೆ ಈ ಮಾತನ್ನು ಈಗ ಹೇಳುತ್ತಿದ್ದೇನೆಂದರೆ ಹೋದವರ್ಷ ಈ ಯೋಜನೆಗೆ 30 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತೇವೆಂದು ಹೇಳಿದ್ದರು. ಕೇಂದ್ರ ಸರ್ಕಾರದ ಸಹಾಯವನ್ನು ಕಾವೇರಿ ನದಿಗಾಗಿ ಪಡೆದಿದ್ದಾರೆ. ಅದೇ ರೀತಿಯಾಗಿ ಇದಕ್ಕೂ ಏಕೆ ಕೇಂದ್ರದಿಂದ ಸಹಾಯ ಪಡೆಯಬಾರದು? ಇವತ್ತು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ವಿಷಯವಾಗಿ ಮಾತಾಡುವ ಕಾಲಕ್ಕೆ ಎಷ್ಟೋ ವ್ಯತ್ಯಾಸವಾಗಿದೆ. ಇದು ಮಹತ್ವವಾದಂಥ ಪ್ರಾಜೆಕ್ಟ್. ಈಗ ಈ ಪ್ರಾಜೆಕ್ಟ್‌ನಲ್ಲಿದ್ದಂಥ ಕೆಲವು ಡಿವಿಷನ್ನುಗಳನ್ನು ವೈಂಡಪ್ ಮಾಡಿದ್ದಾರೆ. ಅದರಲ್ಲಿ ಕೃಷ್ಣಾಪುರ, ನಾರಾಯಣಪುರ ಡಿವಿಜನ್ನುಗಳು. ಈ ರೀತಿಯಾಗಿ ತೋರಿಕೆಗೆ ಮಾತ್ರ ಈ ಕಾರ್ಯ ನಡೆದಿದೆಯೆಂದು ಹೇಳಬಹುದು. ಆದರೆ ಇಂತಹ ಮಲತಾಯಿ ಧೋರಣೆಯನ್ನು ಸರ್ಕಾರದವರು ನ್ಯಾಷನಲ್ ಪ್ರಾಜೆಕ್ಟಿಗೆ ತೋರಿಸುವುದು ಬಹಳ ತಪ್ಪಾಗುತ್ತದೆ. ನಾರಾಯಣಪುರ ಅಣೆಕಟ್ಟು ಕಟ್ಟುವುದನ್ನು ವೈಂಡಪ್ ಮಾಡಬೇಕೆಂದು ಆದೇಶವೂ ಕೂಡ ಹೋಗಿದ್ದಾಗ ಅದರ ಬಗ್ಗೆ ಒಂದು ಮೀಟಿಂಗ್ ನಡೆದಾಗ ಅಲ್ಲಿನ ಚೀಫ್ ಇಂಜನಿಯರ್ ಕಾರಣಾಂತರದಿಂದ ವಾಕೌಟ್ ಮಾಡಿದ್ದಕ್ಕಾಗಿ ಅವರನ್ನು ವರ್ಗಮಾಡಿದ್ದಾರೆ. ರೈತರಿಗೆ ಬೇಕಾದಂಥ ಯೋಜನೆಗಳಲ್ಲಿ ಏನಾದರೂ ತಪ್ಪುಗಳಿದ್ದರೂ ಅವನ್ನು ಬರೀ ಮಲತಾಯಿ ಧೋರಣೆಯಿಂದ ನೋಡಿ ಸರ್ಕಾರದವರು ಅವುಗಳ ಬಗ್ಗೆ ಸರಿಯಾದಂಥ ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ ರೈತರೇ ಮುಂದೆ ಕ್ರಾಂತಿ ಮಾಡುತ್ತಾರೆ. ಇದರ ಬಗ್ಗೆ ಒಂದು ಅಜಿಟೇಷನ್ ಮಾಡುತ್ತಾರೆಂದು ನಾನು ತಮಗೆ ಈ ಒಂದು ಮಾತನ್ನು ಹೇಳುತ್ತಿದ್ದೇನೆ.

ಈ ರೀತಿಯಾಗಿ ಇದನ್ನು ಒಂದು ತೋರಿಕೆಗೆ ಮಾತ್ರ ಕಾರ್ಯ ನಡೆಸಿರುವಂತೆ ಕಾಣುತ್ತಿದೆ. ಇದನ್ನು ಒಂದು ಮಲತಾಯಿ ಧೋರಣೆ ಎಂದು ಹೇಳದೆ ವಿಧಿಯಿಲ್ಲ. ಈಗಾಗಲೇ ಅಲ್ಲೇನು ಡ್ಯಾಮನ್ನು ಕಟ್ಟಬೇಕೆಂದಾಗಿದೆ ಅದನ್ನು ಕಟ್ಟಕೂಡದೆಂದು ಆ ಮೈಸೂರು ಹೌಸಿಂಗ್ ಕಾರ್ಪೊರೇಷನ್ನಿನವರಿಗೆ ತಿಳಿಸಲಾಗಿದೆಯೆಂದೂ ಮತ್ತು ಅಲ್ಲಿ ಇರತಕ್ಕ ಕೆಲವು ಇಂಜಿನಿಯರಿಂಗ್ ಡಿವಿಜನ್‌ಗಳನ್ನು ವೈಂಡಪ್ ಮಾಡುವಂತೆ ಆ ಚೀಫ್ ಇಂಜಿನಿಯರಾದ ಶ್ರೀ ಬಾಳೆ ಕುಂದರಿಯವರಿಗೆ ತಿಳಿಸಿ ಆ ಇಂಜಿನಿಯರ್ ಅವರು ಸಭೆಯಿಂದ ವಾಕ್‌ಔಟ್ ಮಾಡಿದ್ದಕ್ಕಾಗಿ ಅವರನ್ನು ಬೇರೆ ಕಡೆಗೆ ವರ್ಗಾಯಿಸಲಾಗಿದೆ ಎಂದು ಕೇಳುತ್ತೇನೆ. ನಿಜವಾಗಿಯೂ ಇದರಲ್ಲಿ ಅನೇಕ ಯೋಜನೆಗಳನ್ನು ಕೇವಲ ತೋರಿಕೆಗಾಗಿ ಇಟ್ಟುಕೊಂಡಿರುವಂತೆ ಕಂಡು ಬರುತ್ತಿದೆ. ಇದೇನಾದರೂ ನಿಜವಾಗಿದ್ದು ಸರ್ಕಾರದವರು ಈ ಭಾಗದ ಯೋಜನೆಗಳ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಸಕಾಲದಲ್ಲಿ ಕೈಗೊಂಡು ಅವುಗಳನ್ನು ಕಾರ್ಯಗತ ಮಾಡದಿದ್ದರೆ ಆ ಭಾಗದ ಜನರು ಸತ್ಯಾಗ್ರಹ ಹೂಡಬೇಕಾದೀತೆಂದೂ ಅದರಿಂದ ದೇಶದಲ್ಲಿ ಕ್ರಾಂತಿ ಆದೀತೆಂದೂ ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತೇನೆ.

ಈ ಹೊಸ ಸರ್ಕಾರದಲ್ಲೂ ಕೆಲವರು ಒಳ್ಳೆಯ ಉತ್ತಮ ಮಂತ್ರಿಗಳು 4-5 ಮಂದಿ ಇದ್ದಾರೆ. ಇವರು ಬಹಳ ಸಂಯಮದಿಂದ ಕೆಲಸ ಮಾಡುತ್ತಾರೆ. ಆದರೆ ಇನ್ನುಳಿದ ಕೆಲವು ತರುಣ ಮಂತ್ರಿಗಳೇನಿದ್ದಾರೆ ಅವರಿನ್ನೂ ಯವ್ವನದಲ್ಲಿರುವುದರಿಂದ ಅವರಿಗೆ ರಾಜ್ಯದ ಕಾರಭಾರ ಮಾಡುವುದಕ್ಕೆ

ಬಾರದೆ ಸರಿಯಾಗಿ ಕೆಲಸ ಕಾರ್ಯಗಳನ್ನು ಮಾಡದೆ ಅವುಗಳಿಗೆ ಅಡ್ಡಿ ಅಡೆತಡೆಗಳನ್ನು ಉಂಟುಮಾಡಿ ಅವರು ಅಡ್ಡಹಾದಿಯಲ್ಲಿ ಹೋಗುತ್ತಿದ್ದಾರೆ. ಆದರೆ ಅವರು ಯಾರು ಎಂಬುದನ್ನು ನಾನೀಗ ಹೆಸರು ಹಿಡಿದು ಹೇಳುವುದಿಲ್ಲ.

ಇನ್ನು ಕೆಲವು ಜನ ಮಂತ್ರಿಗಳು ಹಳ್ಳಿಗಳ ಕಡೆ ಪ್ರವಾಸಹೋದಕಾಲದಲ್ಲಿ ಅಲ್ಲಿ ಜಾತೀ ಹೆಸರನ್ನು ಹಿಡಿದು ಭಾಷಣ ಮಾಡುತ್ತಾರೆ. ಅಲ್ಲದೆ ಸ್ಥಳೀಯ ಅಧಿಕಾರಿಗಳಿಗೆ ವಿರೋಧ ಪಕ್ಷದ ಸದಸ್ಯರ ಮೇಲೆ ಕೇಸುಗಳನ್ನು ಏಕೆ ಹಾಕಲಿಲ್ಲ ಎಂದು ಬೆದರಿಕೆಗಳನ್ನು ಹಾಕುತ್ತಿದ್ದಾರೆ. ಹಾಗೆ ಅವರು ಗ್ರಾಮಾಂತರ ಪ್ರದೇಶಗಳಲ್ಲಿ ಜಾತೀ ಹೆಸರುಗಳ ಮೇಲೆ ಭಾಷಣ ಮಾಡುತ್ತಿರುವುದರಿಂದ ಅಲ್ಲಿಯ ಜನರಲ್ಲಿ ವಿಶ್ವಾಸ ಕದಡಿ ಅವರಲ್ಲಿ ದ್ವೇಷಾಸೂಯೆಗಳು ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಯಾರೂ ಮರೆಯಬಾರದು. ಜಾತೀ ಆಧಾರ ಒಂದರಮೇಲೇ ಯಾರೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಜಾತಿ ಅನ್ನುವುದು ಪ್ರತಿಯೊಬ್ಬರಿಗೂ ಬೇಕು. ಅದಕ್ಕೂ ಒಂದು ಸೀಮಿತವಿದೆ. ಹಳ್ಳಿಗಳ ಕಡೆ ಗೌಡರ ಹೊಲಗಳಿಗೆ ನುಗ್ಗಿ ಅದನ್ನು ಹಿಡಿದುಕೊಳ್ಳಿ ಎಂದು ಪ್ರೇರೇಪಣೆ ಮಾಡುವುದು ಖಂಡಿತ ಸಾಧುವಾದ್ದಲ್ಲ. ಇನ್ನಾದರೂ ಮಂತ್ರಿಗಳು ರಾಜ್ಯದ ನೀರಾವರಿ ಮತ್ತು ಇನ್ನಿತರೇ ಕೆಲಸ ಕಾರ್ಯಗಳೇನಿವೆ ಅವುಗಳನ್ನು ರಾಜ್ಯದ ಹಿತದ ಸಲುವಾಗಿ ಬೇಗ ಮುಗಿಸುವಂತೆ ಇವರು ಮಾರ್ಗದರ್ಶಕರಾಗಿ ಕೆಲಸ ಮಾಡಬೇಕೆಂದೂ ಹಾಗೆ ಮಾಡದೆ ಆ ಹಳ್ಳೀ ಜನರ ಜೀವನ ಯಾವತ್ತೂ ಅಸಹ್ಯವಾಗಿರುವಂತೆ ಮಾಡುವುದಾದರೆ ಮುಂದೆ ಅದರಿಂದ ದೇಶದಲ್ಲಿ ದೊಡ್ಡ ಕ್ರಾಂತಿ ಎದ್ದೀತೆಂದು ಎಚ್ಚರಿಸಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Smt. WINNIFRED F. FERNANDES (Coondapur). –Hon'ble Speaker, at the outset, I must thank the Finance Minister for his Budget of 1972-73. Of course, it is a very purposeful and beneficial budget in a sense that middle class people and the common man are not over-burdened by taxation. To sum up, the necessities of the common man are taken care of in the budget. But, now we have to practice what we have said; we have to implement our programmes in action. I hope our Finance Minister, who is a man of few words, will implement what he has said very soon.

The three essential needs of the common man are: (1) a house to live in, (2) two square meals a day, and (3) some employment to earn his livelihood. In the Budget speech it is stated that 3 lakhs house sites will be provided to the landless people during this Anniversary Year of our Independence—it is highly appreciable. For the last so many years, the Government is saying that they are going to distribute land to the poor. But, what is it that you have done in action? The Shanubhogues in the villages would not build up the records till they are paid something. Even though we have brought this to the notice of the Revenue authorities several times, no action has been taken. I request the Government to see that these 3 lakhs house sites are given to the landless on a war footing.

I am grateful to the Hon'ble Finance Minister for giving enhanced D. A. to non-gazetted officers and extra pension to pensioners. Unfortunately, you have forgotten the old-age pensioners, who get only Rs. 30 per month. What can a poor man do with Re. 1 a day? One rupee will not be sufficient even for a light tiffin in a hotel. So, I request the Government to enhance this old-age pension to at least Rs. 45 p.m., and I hope that this appeal will find favour at your hands. The age fixed for old-age pension is 70 years. We can find

(SMT. WINNIFRED F. FERNANDES)

only a handful of people in the villages who are above 70. I request you to relax this and make it to 65 and for the handicapped make it 60 so that some more people get this benefit, and surely they will bless your Government. I hope the Government will consider this question favourably.

Of course, enhanced D. A. is given to non-gazetted officers. But the prices of essential commodities are soaring up day by day and the cost of living is going up. If the cost of living were to go up, this enhancement of D. A. will be a never ending story. Therefore, it is high time that you check up the soaring prices. Can't you check it up? Can't you have some raids on the hoarders and black-marketeers. The prices of essential commodities are going up day by day. I request the Government to put an end to this. If prices are checked, surely the non-gazetted officers will not ask for enhanced D. A.

Regarding the water, the rates have been revised in respect of paddy crops and it is fixed at Rs. 25 per acre. In the North and South Kanara Districts, we did not have proper rainfall, with the result the paddy seedlings have been destroyed. We do not hope to get this year's crop. I request you to exempt the water-rate during this year and also to reduce it considerably. We shall see what will happen during the next year.

In regard to Fisheries, you have given a step-motherly treatment. Fisheries, as you all know, is an exchange earner. This being so, the provision made for the fisheries is too small. I request you to provide all the facilities to the fishermen and also to see that their housing problem is solved.

With these few words, I thank the Chair for having given me an opportunity to express myself on the budget.

ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಗಳೇ, ಈ ದಿವಸ ಬಜೆಟ್ಟಿನ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮೊಟ್ಟಮೊದಲನೆಯದಾಗಿ ವಂದಿಸುತ್ತಾ, ಮಾನ್ಯ ಅರ್ಥ ಸಚಿವರು ಮಂಡಿಸಿರುವ ಬಜೆಟ್ಟಿನ ಕೆಲವು ವಿಷಯಗಳ ಬಗ್ಗೆ ಸಂತೋಷವನ್ನೂ ಮತ್ತೆ ಕೆಲವು ವಿಷಯಗಳ ಬಗ್ಗೆ ವಿರೋಧವನ್ನೂ ವ್ಯಕ್ತಪಡಿಸಬೇಕಾಗಿದೆ ಎಂದು ಹೇಳುತ್ತೇನೆ. ಈಗ ನಮ್ಮ ದೇಶ ಬಡತನದ ದೇಶ. ಇಂದು ಯಾವ ತೆರಿಗೆ ಕೊಡುವುದಕ್ಕೂ ರೈತರಿಗೆ ಶಕ್ತಿಯಿಲ್ಲ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 25 ವರ್ಷವಾಗುತ್ತಾ ಬಂತು. ಆದರೂ ಕೂಡ ರೈತರ ಅಭಿವೃದ್ಧಿಗಾಗಿ ಯಾವ ವಿಧವಾದ ಗಮನವನ್ನೂ ಹರಿಸಿಲ್ಲ. ಅವರ ಶಕ್ತಿ ದಿನೇ ದಿನೇ ಕುಂದುತ್ತಿದೆ. ಅವರು ಉತ್ತಮ ಸ್ಥಿತಿಗೆ ಬರುತ್ತಿಲ್ಲ. ಇಂಥ ಸಂದರ್ಭದಲ್ಲಿ ರೈತರಮೇಲೆ ತೆರಿಗೆ ಹೊರಿಸಿರುವುದು ಅದು ಪಡುವ ವಿಷಯವಾಗಿದೆ. ಹಿಂದೆ ಇದೇ ರೀತಿ ರೈತನ ಮೇಲೆ ತೆರಿಗೆ ಹಾಕಿದಾಗ, ಆಹಾರಧಾನ್ಯದ ಮೇಲೆ ತೆರಿಗೆ ಹಾಕಬಾರದು, ಆಹಾರದ ಕೊರತೆ ನೀಗಬೇಕಾದರೆ ಆಹಾರದ ಬೆಳೆಗಳಿಗೆ ತೆರಿಗೆ ಹಾಕಬಾರದು, ಹಾಕಿದರೆ ರೈತರಿಂದ ವಸೂಲಿ ಮಾಡಿದಂತಾಗುತ್ತದೆ ಎಂದು ಹೇಳಿದಾಗ ಅದನ್ನು ತೆಗೆದುಬಿಟ್ಟರು. ನಾವಿನ್ನೂ ಆಹಾರದ ವಿಷಯದಲ್ಲಿ ಸ್ವಪರಿಪೂರ್ಣತೆ ಸಾಧಿಸುವ ಮಟ್ಟಕ್ಕೆ ಬಂದಿಲ್ಲ. ಆದುದರಿಂದ ಮಂತ್ರಿಗಳು ಈ ವಿಷಯದ ಕಡೆ ಗಮನವಿಟ್ಟು ಈಗ ಹಾಕಿರುವ ತೆರಿಗೆಯನ್ನು ವಜಾ ಮಾಡಿ ಬೇರೆ ರೂಪದಲ್ಲಿ ಹಾಕುವುದಕ್ಕೆ ಪ್ರಯತ್ನ ಮಾಡಿ ರೈತರ ಹೊರೆ ಇಳಿಸಬೇಕು.

ಮತ್ತೊಂದು ವಿಷಯ. ರೈತರು ಬೆಳೆಯುವ ಬೆಳೆಗಳಿಗೆ ಸರಕಾರ ಬೆಲೆ ನಿಗದಿ ಮಾಡಿಲ್ಲ. ಕಬ್ಬಿಗೆ 40 ರಿಂದ 60 ರೂಪಾಯಿಗಳವರೆಗೆ ತೆರಿಗೆ ಹಾಕಿದ್ದಾರೆ. ಆ ಬೆಳೆ ತೆಗೆಯುವಾಗ ಕೂಲಿಗೆ ಯಾರೂ ಬಾರದಿರುವಾಗ ಕೆಲವು ಸಂದರ್ಭಗಳಲ್ಲಿ ಕಬ್ಬಿನ ಬೆಳೆಗೆ ಬೆಂಕಿ ಇಟ್ಟು ಬೇರೆ ಬೆಳೆ ಇಡಬೇಕಾದ ಪರಿಸ್ಥಿತಿ ಇರುವಾಗ ಈ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಪ್ರಯತ್ನ ಮಾಡಿಲ್ಲ. ಕಬ್ಬು ಕಮರ್ಷಿಯಲ್ ಕ್ರಾಪ್ ಎಂದು ಹೆಚ್ಚಿನ ತೆರಿಗೆ ಅವಕ್ಕೆ ಹಾಕಿದ್ದೀರಿ. ಆದರೆ ರೈತರಿಗೆ ನಿಯಮಿತ ಬೆಲೆ ದೊರೆಯುವುದಿಲ್ಲ. ಸರಿಯಾದ ಬೆಲೆ ದೊರೆಯುವಂತೆ ವ್ಯವಸ್ಥೆ ಮಾಡಿ ತೆರಿಗೆ ಹಾಕಿದರೆ ರೈತರು ಕೊಡಲು ತಯಾರಾಗಿರುವರು. ಕಳೆದ ಸಾರಿ ಮಂಡ್ಯದ ಕಬ್ಬು ಬೆಳೆಯುವ ಪ್ರದೇಶದಲ್ಲಿ ಕಬ್ಬನ್ನು ಕೇಳುವವರಿಲ್ಲದೆ ಬೆಂಕಿ ಇಟ್ಟಿದ್ದಾರೆ. ಸಕ್ಕರೆ ಕಾರ್ಖಾನೆ ಇರುವ ಪ್ರದೇಶದಲ್ಲಿನ ಪರಿಸ್ಥಿತಿ ನೋಡಿ ಬರುವ ಆದಾಯ ನೋಡಿ ತೆರಿಗೆ ಹಾಕಿದರೆ ಒಪ್ಪಬಹುದು. ಹಾಗೆ ಮಾಡಿಲ್ಲ. ಬತ್ತ ಹೆಚ್ಚಾಗಿ ಬೆಳೆದಾಗ ರೈತರಿಗೆ ಸರಿಯಾದ ಆದಾಯ ದೊರೆಯುತ್ತಿಲ್ಲ, ಸರಕಾರ ಅದನ್ನು ಕೊಂಡುಕೊಳ್ಳುವುದಿಲ್ಲ. ದೇಶದಲ್ಲಿ ಅಭಾವ ಪರಿಸ್ಥಿತಿ ಬಂದಾಗ ಕಂಟ್ರೋಲ್ ಮಾಡಿ ಸರಕಾರ ಗೊತ್ತುಮಾಡುವ ದರಕ್ಕೆ ರೈತ ಮಾರಬೇಕು. ಹಾಗೆ ಮಾಡದಿದ್ದರೆ ಅವನ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುವರು. ಬೆಳೆಗಳಿಗೆ ಗೊತ್ತಾದ ದರ ನಿಗದಿ ಮಾಡಿದರೆ ಪರವಾಗಿಲ್ಲ ; ಅದಿಲ್ಲದೆ ಹೀಗೆ ಮಾಡಿದರೆ ತೊಂದರೆಯಾಗುವುದು. ರಾಗಿ, ಬತ್ತ, ಕಬ್ಬು ಮುಂತಾದ ಯಾವುದೇ ಬೆಳೆ ಬೆಳೆದರೂ ಅದಕ್ಕೆ ನಿಗದಿಯಾದ ಬೆಲೆ ಇರಬೇಕು. ಸರಕಾರ ಮುಂದೆ ಬಂದು ಪದಾರ್ಥಗಳಿಗೆ ಕಡಮೆ ಬೆಲೆ ಇರುವಾಗ ಅವುಗಳನ್ನು ತೆಗೆದುಕೊಂಡು ದಾಸ್ತಾನು ಮಾಡಿ ಸರಿಯಾದ ಬೆಲೆ ಬಂದಾಗ ಕೊಡುವಂತೆ ಮಾಡಬೇಕು.

ಈಗ ಕಾಂಟ್ರ್ಯಾಕ್ಟ್ ಬಸ್ಸುಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸಿದ್ದೀರಿ. ಇಂದು ಸರಕಾರಿ ಬಸ್ಸುಗಳ ವಿಚಾರ ನೋಡಿದರೆ ಅವ್ಯವಸ್ಥೆಯಾಗಿದೆ. ಇದು ಶೋಚನೀಯ ವಿಚಾರವಾಗಿದೆ. ಪ್ರಯಾಣಿಕರು ರಸ್ತೆಗಳಲ್ಲಿ ಬೆಳಗಿನಿಂದ ಸಾಯಂಕಾಲದವರೆಗೆ ಕಾದುಕೊಂಡಿದ್ದರೂ ಅವರಿಗೆ ಬಸ್ಸುಗಳಲ್ಲಿ ಸ್ಥಳ ದೊರೆಯುವುದಿಲ್ಲ. ಕಾರಣ ಬಸ್ಸುಗಳ ಸಂಖ್ಯೆ ಕಡಮೆ ಮತ್ತು ಆಗಾಗ ಕೆಟ್ಟುಹೋಗುವುದು. ಸರಕಾರದವರು ಸಾಕಷ್ಟು ಬಸ್ಸುಗಳನ್ನು ಓಡಿಸಿದರೆ ಮತ್ತು ಸರಿಯಾದ ವ್ಯವಸ್ಥೆಮಾಡಿದರೆ ಆಗ ಜನರು ಕಾಂಟ್ರಾಕ್ಟ್ ಬಸ್ಸುಗಳಲ್ಲಿ ಹೆಚ್ಚಾಗಿ ಹೋಗುವುದಿಲ್ಲ. ಈಗ ಸರಕಾರಿ ಬಸ್ಸುಗಳ ಸೌಕರ್ಯ ಎಲ್ಲಿ ಸಾಲದೋ ಮತ್ತು ಎಲ್ಲಿ ದರ ಕಡಮೆ ಇದೆಯೋ ಅಲ್ಲಿ ಜನರು ಕಂಟ್ರ್ಯಾಕ್ಟ್ ಬಸ್ಸುಗಳಿಗೆ ಹೋಗುವರು. ಆದುದರಿಂದ ಸರಕಾರಿ ಬಸ್ಸುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಓಡಿಸಬೇಕು. ಒಂದು ತಿಂಗಳ ಹಿಂದೆ ಸಚಿವರು ರಾಜ್ಯದಲ್ಲಿ ಎಲ್ಲಾ ರಸ್ತೆಗಳನ್ನೂ ಮನಾಪಲಿ ಮಾಡುವುದಾಗಿ ಹೇಳಿದರು. ಅವರು ಮತ್ತೆ 15 ದಿವಸಗಳ ಕೆಳಗೆ ಖಾಸಗಿ ಬಸ್ಸುಗಳಿಗೆ ಅವಕಾಶ ಕೊಡುವುದಿಲ್ಲವೆಂದು ಹೇಳಿದರು. ಛಾಸಿಗಳು ಸಾಕಷ್ಟು ಸಿಕ್ಕುವುದಿಲ್ಲ, ಹಣದ ಕೊರತೆ ಇದೆ, ಎಲ್ಲಾ ಕಡೆಯೂ ಮನಾಪಲಿ ಮಾಡುವುದಕ್ಕಾಗುವುದಿಲ್ಲ ಎಂದು ಈಗ ಹೇಳುತ್ತಿದ್ದಾರೆ. ಹೀಗಾದರೆ ಸರಕಾರಿ ಬಸ್ ಇರುವ ಕಡೆ ಕಂಟ್ರಾಕ್ಟ್ ಕ್ಯಾರೇಜುಗಳನ್ನು ಓಡಿಸಬೇಕಾಗುವುದು. ಕೆಲವು ಕಡೆ ಖಾಸಗಿ ಬಸ್ಸುಗಳನ್ನು ಓಡಿಸಲು ಅನುಮತಿ ಕೊಟ್ಟು ಮತ್ತೆ ಕೆಲವು ಕಡೆ ಸರಕಾರಿ ಬಸ್ಸುಗಳನ್ನು ಓಡಿಸುತ್ತಿದ್ದಾರೆ. ಖಾಸಗಿಯವರು ಬಸ್ಸನ್ನು ಓಡಿಸುವವರು ಚೆಕಿಂಗ್ ಇನ್‌ಸ್ಪೆಕ್ಟರ್, ಕಂಡಕ್ಟರು, ಡ್ರೈವರು ಮುಂತಾದವರನ್ನೆಲ್ಲಾ ಇಟ್ಟುಕೊಂಡಿದ್ದಾರೆ. ಬೆಂಗಳೂರಿನಿಂದ ಮೈಸೂರಿಗೆ ಖಾಸಗಿ ಬಸ್ಸುಗಳಲ್ಲಿ ಮೂರೂವರೆ ರೂಪಾಯಿ ತೆಗೆದುಕೊಂಡರೆ ಸರಕಾರಿ ಬಸ್ಸುಗಳಲ್ಲಿ 4 ಚಿಲ್ಲರೆ ತೆಗೆದುಕೊಳ್ಳುವರು. ಆದರೂ ಸರಕಾರಕ್ಕೆ ನಷ್ಟವಾಗುವುದು, ಖಾಸಗಿಯವರಿಗೆ ನಷ್ಟವಿಲ್ಲ. ಇದಕ್ಕೆ ಕಾರಣ ಕಂಡುಹಿಡಿದು ಉತ್ಪತ್ತಿ ಸರಿಯಾಗಿ ಬರಲು ಸೂಕ್ತ ಕ್ರಮ ತೆಗೆದುಕೊಂಡರೆ ತೆರಿಗೆ ಹೆಚ್ಚಿಸಬೇಕಾದ ಪ್ರಮೇಯವಿರುವುದಿಲ್ಲ. ಸರಕಾರ ತೆರಿಗೆ ಹೆಚ್ಚಿಸಿದರೆ ಅದು ಪ್ರಜೆಗಳ ಮೇಲೆ ಬೀಳುವುದು. ಇದನ್ನು ಗಮನಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಜನಗಳು ಹೊರಗಡೆ ಪ್ರವಾಸ ಮಾಡುವುದರಿಂದ ಅವರು ಎಲ್ಲೆಲ್ಲಿ ಏನೇನು ಬೆಳೆಯಲು ಸಾಧ್ಯ ಎಂಬುದನ್ನು ನೋಡಿ ಅದಕ್ಕೆ ತಕ್ಕ ಕ್ರಮ ತೆಗೆದುಕೊಂಡು ಬೆಳೆ ಇಡಲು ಅನುಕೂಲವಾಗುತ್ತದೆ. ಮೊದಲು ಗೋಧಿಯನ್ನು ಮೈಸೂರು ದೇಶದಲ್ಲಿ ಬೆಳೆಯಲು ಸಾಧ್ಯವಿಲ್ಲವೆಂದು ತಿಳಿದಿದ್ದರು. ಪಂಜಾಬು ಮುಂತಾದ ಕಡೆ ಬೆಳೆಯುವುದನ್ನು ನೋಡಿ ಇಲ್ಲೂ ಬೆಳೆಯಲು ಪ್ರಯತ್ನ ಮಾಡಿದರು, ಕಳೆದ ವರ್ಷ ಹೆಚ್ಚು ಬೆಳೆದರು. ನವೆಂಬರು ಮತ್ತು ಡಿಸೆಂಬರಿನಲ್ಲಿ ಹೆಚ್ಚು ಗೋಧಿ ಬೆಳೆದರು. ಕಾಂಟ್ರ್ಯಾಕ್ಟ್ ಕ್ಯಾರೇಜಿನಮೇಲೆ ನೂರು ರೂಪಾಯಿ ತೆರಿಗೆ ಹಾಕಿರುವುದು ನಿಜವಾಗಿಯೂ ಸರಿಯಲ್ಲ. ಈ ರೀತಿ ದರ ಜಾಸ್ತಿ ಮಾಡುವುದರಿಂದ ಜನ ಪ್ರವಾಸ ಮಾಡುವುದನ್ನು ಕಡಿಮೆ ಮಾಡುತ್ತಾರೆ. ಸ್ವಲ್ಪ ವಿಚಾರ ಮಾಡಿದರೆ ಈಗ ಇಷ್ಟು ಹೆಚ್ಚಿಸಿರುವುದು ಸರಿಯಲ್ಲವೆಂದು ಗೊತ್ತಾಗುವುದು. ಸರಕಾರಿ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಾಗಿ ಓಡಿಸುವುದಕ್ಕೆ ಶುರು ಮಾಡಿದರೆ ಕಾಂಟ್ರಾಕ್ಟ್ ಕ್ಯಾರೇಜುಗಳಿಗೆ ಜನಗಳೇ ಸಿಕ್ಕದೆ ಅವರು ಬಸ್ಸುಗಳನ್ನೇ ನಿಲ್ಲಿಸುತ್ತಾರೆ.

(ಶ್ರೀ ಹೆಚ್. ಜಿ. ಚನ್ನಪ್ಪ)

ಟ್ಯಾಕ್ಸ್ ಜಾಸ್ತಿ ಮಾಡುವುದರಿಂದ ಅದನ್ನು ರೈತನ ಮೇಲೆ ಹಾಕುತ್ತಾರೆ. ಕೋರ್ಟಿಗೆ ಹೋಗಬೇಕೆಂಬ ಮನುಷ್ಯ ಕೋರ್ಟಿಗೆ ಹೋಗಬೇಕು ಅಂತ ಹತ್ತು ರೂಪಾಯಿ ಆದರೂ ಕೊಟ್ಟು ಹೋಗುವುದಕ್ಕೆ ಸಿದ್ಧವಾಗಿರುತ್ತಾನೆ. ಆದ್ದರಿಂದ ಪ್ರೈವೇಟ್ ಬಸ್ಸುಗಳನ್ನು ಓಡಿಸುವುದು ತಡೆಗಟ್ಟುವುದಕ್ಕೆ ಆಗುವುದಿಲ್ಲ. ಜಾಸ್ತಿ ಟ್ಯಾಕ್ಸ್ ಹಾಕುವುದರಿಂದ ಕೂಡ ತಡೆಗಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ.

4–30 P.M.

ಇವತ್ತಿನ ದಿವಸ ನಮ್ಮ ದೇಶದಲ್ಲಿ ಕೈಗಾರಿಕೆ ಮತ್ತು ಸಣ್ಣ ನೀರಾವರಿ ಯೋಜನೆಗೆ ಹೆಚ್ಚು ಆದ್ಯತೆ ಕೊಡುವುದಕ್ಕೆ ಇನ್ನೂ ಮನಸ್ಸು ಮಾಡುತ್ತಿಲ್ಲ. ಎಲ್ಲಿಯವರೆಗೆ ಸಣ್ಣ ನೀರಾವರಿಗೆ ಆದ್ಯತೆ ಸಿಕ್ಕುವುದಿಲ್ಲವೋ ಅಲ್ಲಿಯವರೆಗೂ ಕ್ಷೇಮ ಮತ್ತು ಸುಭಿಕ್ಷ ಅನ್ನುವುದು ಬರುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಕೇವಲ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟುವುದರಿಂದ ಒಂದೆರಡು ತಾಲ್ಲೂಕುಗಳಿಗೆ ಅದರ ಸೌಲಭ್ಯ ದೊರಕಬಹುದೇ ಹೊರತು ಇತರ ಭಾಗಗಳಿಗೆ ಸೌಲಭ್ಯ ದೊರಕುವುದಿಲ್ಲ. ಆದ್ದರಿಂದ ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಅದೇ ರೀತಿ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ನಿರ್ಮಾಣ ಮಾಡುವುದಕ್ಕೆ ಬದಲಾಗಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಆಯಾ ಪ್ರದೇಶದಲ್ಲಿ ಸಿಕ್ಕತಕ್ಕ ಕಚ್ಚಾವಾಲುಗಳನ್ನು ಉಪಯೋಗ ಮಾಡಿಕೊಂಡು ಮಾಡಿದರೆ ಹೆಚ್ಚು ಪ್ರಯೋಜನವಾಗುತ್ತದೆ. ಇದಕ್ಕಾಗಿ ಒಂದು ತಜ್ಞರ ಸಮಿತಿಯನ್ನು ಮಾಡಿ, ಅದರ ಮುಖಾಂತರ ಪರಿಶೀಲನೆ ಮಾಡಿ ಎಲಾ ತಾಲ್ಲೂಕುಗಳಲ್ಲೂ ಒಂದು ಕೈಗಾರಿಕಾ ಕೇಂದ್ರವನ್ನು ಸ್ಥಾಪನೆ ಮಾಡುವುದರಿಂದ ಅಲ್ಲಿಯ ಜನರಿಗೆ ಅಲ್ಲಿಯೇ ಉದ್ಯೋಗವನ್ನು ಒದಗಿಸಿಕೊಟ್ಟಂತಾಗುತ್ತದೆ. ಇವತ್ತಿನ ದಿವಸ ಬೆಂಗಳೂರಿನಲ್ಲಿ ಹಳ್ಳಿಯ ಜನರು ಬಂದು ವಾಸಮಾಡುವುದಕ್ಕೆ ಶುರುವಾಗಿ ಸ್ಲಂ ಏರಿಯಾ ಜಾಸ್ತಿಯಾಗಿದೆ. ಇದನ್ನು ತಪ್ಪಿಸಬೇಕಾದರೆ ಪಟ್ಟಣಗಳಲ್ಲಿ ಒಂದೇ ಕಡೆ ಕೇಂದ್ರೀಕೃತವಾಗತಕ್ಕ ಕೈಗಾರಿಕೆಗಳನ್ನು ಮತ್ತು ಇತರ ಯೋಜನೆಗಳನ್ನು ತಡೆಗಟ್ಟುವುದರಿಂದ ಸಾಧ್ಯವೇ ಹೊರತು ಇಲ್ಲದೇ ಇದ್ದರೆ ಸಾಧ್ಯವಾಗುವುದಿಲ್ಲ.

ಇನ್ನೊಂದು ವಿಷಯ. ಇವತ್ತಿನ ದಿವಸ ಜನಾರೋಗ್ಯದ ಕಡೆಗೆ ಯಾವ ಒಂದು ಸೌಲಭ್ಯವನ್ನೂ ಒದಗಿಸುತ್ತಿಲ್ಲ. ಮಾನ್ಯ ಮಂತ್ರಿಗಳು 5 ಸಾವಿರ ಜನಸಂಖ್ಯೆಗೆ ಒಂದು ಆಸ್ಪತ್ರೆಯನ್ನು ಕೊಡುತ್ತೇವೆ ಎಂದು ಅವರ ಭಾಷಣದಲ್ಲಿ ಕಳೆದ ಸಾರಿ ಒಂದು ಕಡೆ ಹೇಳಿದ್ದಾರೆ. ಆ ಪತ್ರಿಕೆ ಓದಿದ ದಿವಸ ನಿಜವಾಗಿಯೂ ಹೆಮ್ಮೆ ಅಥವಾ ಸಂತೋಷವಾಯಿತು. ಇವತ್ತಿನ ದಿವಸ ಹೆಲ್ತ್ ಸೆಸ್ ವಸೂಲು ಮಾಡುತ್ತಾ ಇದ್ದಾರೆ. ಯಾವ ಹಳ್ಳಿ ರೈತನಿಗೂ ಒಂದು ಚಮಚ ಔಷಧಿ ಕೂಡ ಕೊಡುತ್ತಾ ಇಲ್ಲ. ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಹೆಲ್ತ್ ಡಿಸ್ಪೆನ್ಸರಿ ಇದೆ, ಆ ಡಿಸ್ಪೆನ್ಸರಿಗಳಲ್ಲಿ ಮಾತ್ರ ಔಷಧಿ ಸಿಕ್ಕುತ್ತದೆ. ಲೋಕಲ್ ಫಂಡ್ ಡಿಸ್ಪೆನ್ಸರಿಗಳಲ್ಲಿ ಔಷಧಿ ಸಿಕ್ಕುವುದಿಲ್ಲ, ಖಾಸಗಿ ಆಸ್ಪತ್ರೆಗೆ ಹೋಗಿ 5ರೂಪಾಯಿ ಕೊಟ್ಟು ಔಷಧಿ ತರಬೇಕಾದ ಪರಿಸ್ಥಿತಿ ಇದೆ. ಇದನ್ನು ತಾವು ನೋಡಿದರೆ ಅರ್ಥವಾಗುತ್ತದೆ.

ಇನ್ನು ವಿದ್ಯಾಭ್ಯಾಸದ ವಿಷಯ. ಕಂಪಲ್ಸರಿ ಎಜ್ಯುಕೇಷನ್ ಜಾರಿಗೆ ತರುತ್ತಾ ಇದ್ದೇವೆ. ಖಾಸಗಿ ಹೈಸ್ಕೂಲುಗಳಿಗೆ 3 ವರ್ಷದ ಗ್ರಾಂಟ್ ತಪ್ಪಿಸಿ 5 ವರ್ಷ ಮಾಡಿದ್ದೇವೆ. ಎಲ್ಲಿ ಸರ್ಕಾರಿ ಶಾಲೆಗಳನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲವೋ ಅಂತಹ ಕಡೆ ಖಾಸಗಿಯವರು ತೆಗೆದರೆ 3 ವರ್ಷದ ನಂತರ ಗ್ರಾಂಟ್ ಕೊಡಬೇಕು ಎನ್ನುವ ನಿಬಂಧನೆ ಮೊದಲು ಏನಿತ್ತೋ ಅದನ್ನು ತಾವು ಅನುಷ್ಠಾನಕ್ಕೆ ಕೊಡಬೇಕೆಂದು ಹೇಳಬಯಸುತ್ತೇನೆ.

ರೂರಲ್ ಅಪ್ ಲಿಫ್ಟ್‌ಮೆಂಟ್‌ಗೆ ಮುಖ್ಯವಾಗಿ ಬೇಕಾಗಿರತಕ್ಕ ವಿದ್ಯಾಭ್ಯಾಸ, ಎಲೆಕ್ಟ್ರಿಸಿಟಿ ಈ ವಿಷಯಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ವಿದ್ಯುಚ್ಛಕ್ತಿ ಕೊಡಿ ಎಂದು ಹೇಳಿ ಮಂಜೂರಾಗಿದ್ದರೂ ಕೂಡ ಅದು ಮೆಟೀರಿಯಲೈಸ್ ಆಗಿಲ್ಲ. ಎಲ್ಲಿ ಮಂಜೂರಾತಿಯಾಗಿದೆಯೋ ಅಂತಹ ಕಡೆ ಆದಷ್ಟು ಜಾಗ್ರತೆ ಕೆಲಸಗಳನ್ನು ಮಾಡಿ ಮುಗಿಸುವುದರಿಂದ ಹೆಚ್ಚಿನ ಆದಾಯ ಬರುತ್ತದೆ ಮತ್ತು ಜನಗಳಿಗೂ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಹಳ್ಳಿ ರಸ್ತೆಗಳ ವಿಷಯ. ಈ ಐ ವಿ ಸಿ ರಸ್ತೆಗಳು ಆರ್‌ಫನ್ ರೋಡ್ಸ್ ಇದ್ದ ಹಾಗೆ ಇವೆ. ಅವನ್ನು ಪಿ ಡಬ್ಲ್ಯು ಡಿ ಅವರೂ ಮಾಡುವುದಿಲ್ಲ. ತಾಲ್ಲೂಕು ಬೋರ್ಡಿನವರಿಗೆ ಇರತಕ್ಕ 50 ಸಾವಿರ ರೂಪಾಯಿಗಳಲ್ಲಿ ರಸ್ತೆಗಳಿಗೂ ಕೊಡಬೇಕು. ಇದನ್ನು ಹಣಕಾಸಿನ ಮಂತ್ರಿಗಳು ಅರ್ಥ

ಮಾಡಿಕೊಳ್ಳಬೇಕು. ಆದ್ದರಿಂದ ಇದಕ್ಕೆ ಸಾಕಾದಷ್ಟು ಗ್ರ್ಯಾಂಟ್ ಕೊಟ್ಟು ಈ ಐ ವಿ ಸಿ ರಸ್ತೆಗಳನ್ನು ಸರಿಯಾಗಿ ಮೇನ್‌ಟೇನ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಇಲ್ಲದೇ ಹೋದರೆ ಪಿ. ಡಬ್ಲ್ಯು. ಡಿ.ಗೆ ವಹಿಸಿ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಸೈಟುಗಳ ವಿಷಯ. ಯಾರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಜಾಗ ಇಲ್ಲ ಅಂತಹವರಿಗೆ ವಾಸಕ್ಕೆ ಮನೆಗಳನ್ನು ಕೊಡುತ್ತೇವೆ ಎಂದು ಸರ್ಕಾರದವರ ಮುಂದೆ ಬಂದಿರುವುದು ಶ್ಲಾಘನೀಯವಾದ ವಿಷಯ. ಆಹಾರದ ಬೆಳೆ ಬೆಳೆಯುತ್ತಾ ಇರತಕ್ಕ ಜಮೀನುಗಳನ್ನು ಅಕ್ವೈರ್ ಮಾಡಿ ಸೈಟ್ ಅಂತ ಹಂಚಿ ಅಲ್ಲಿ ಮೆಣಸಿನ ಗಿಡ ಬೆಳೆಯುವುದರಿಂದ ಪ್ರಯೋಜನವಾಗುವುದಿಲ್ಲ. ಇವತ್ತಿನ ದಿವಸ ಕೊಟ್ಟು ಸೈಟು ಮುಂದಿನ ವರ್ಷ ತಾವು ನೋಡಿದರೆ ಅಲ್ಲಿ ಮನೆ ಇರುವುದಿಲ್ಲ ಮೆಣಸಿನ ಗಿಡ ಬೆಳೆದಿರುತ್ತಾರೆ. ಆದ್ದರಿಂದ ಸ್ವಲ್ಪ ನಿಧಾನವಾದರೂ ಚಿಂತೆ ಇಲ್ಲ ಸ್ಕೀಂಗಳನ್ನು ಮಾಡುವಾಗ ವ್ಯವಸ್ಥಿತವಾಗಿ ಮಾಡಿದರೆ ಪ್ರಯೋಜನವಾಗುತ್ತದೆ ಖಾಲಿ ಸೈಟುಗಳನ್ನು ಹಂಚುವ ಬದಲು ಆದಾಯಕ್ಕೆ ತಕ್ಕಂತೆ ಮನೆಗಳನ್ನು ಕಟ್ಟಿ ಕೊಟ್ಟು ನಂತರ ಅದರ ಬೆಲೆಯನ್ನು ಬೇಕಾದರೆ ಕಂತಿನ ಮೇಲೆ ವಾಪಸ್ ಪಡೆಯಬಹುದು. ಅದರಿಂದ ಅನುಕೂಲವಾಗುತ್ತದೆಯೇ ವಿನಹ ಖಾಲಿ ಸೈಟುಗಳನ್ನು ಹಂಚುವುದರಿಂದ ಯಾವ ಪ್ರಯೋಜನವೂ ಜನಗಳಿಗೆ ಆಗುವುದಿಲ್ಲ. ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಮಾನ್ಯ ಸಭಾಪತಿಗಳಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತಾ ಇನ್ನೂ ಅನೇಕ ವಿಷಯಗಳನ್ನು ಹೇಳಬೇಕಾದ್ದು ಇದ್ದರೂ ಸಹ ಕಾಲಾವಕಾಶವಿಲ್ಲದೇ ಇರುವುದರಿಂದ ನನ್ನ ಮಾತನ್ನು ಮುಕ್ತಾಯ ಮಾಡುತ್ತಾ ಇದ್ದೇನೆ.

† **Sri DHARMASINGH NARAYAN SINGH** (Jewargi).—[*Spoke in Urdu*]

ಶ್ರೀ ಟಿ. ಎಂ. ಮಂಜುನಾಥ್.—(ತಿಪಟೂರು) ಸನ್ಮಾನ್ಯ ಸಭಾಪತಿಗಳೇ, 1972-73ನೇ ಸಾಲಿನ ಆಯವ್ಯಯ ಪತ್ರವನ್ನು ನಮ್ಮ ರಾಜ್ಯದ ಹಣಕಾಸು ಮಂತ್ರಿಗಳಾದ ಮಾನ್ಯ ಘೋರ್ಪಡೆ ಅವರು ಮಂಡಿಸಿದ್ದಾರೆ. ಅವರು ಎಷ್ಟು ಸರಳವಾಗಿದ್ದಾರೆ ಅಷ್ಟೇ ಸರಳವಾದ ಭಾಷೆಯಲ್ಲಿ, ಕನ್ನಡದಲ್ಲಿ ಮುದ್ರಿಸಿ ನಮಗೆ ಕೊಟ್ಟಿದ್ದಾರೆ. ಇದನ್ನು ನಾವು ವಿಮರ್ಶೆ ಮಾಡಿ ನೋಡಿದಾಗ ಅವರು ಇಟ್ಟಿರತಕ್ಕ ಹೆಜ್ಜೆ ದೊಡ್ಡ ಬೆಟ್ಟಕ್ಕೆ ಒಂದು ಗಜ ಬಟ್ಟೆಯಿಂದ ಅಲಂಕರಿಸತಕ್ಕ ಒಂದು ಸ್ಥಿತಿಯನ್ನು ಅವರು ಈ ಹೊತ್ತು ಹೊಂದಿದ್ದಾರೆ.

ಇಂದು ಬೃಹದಾಕಾರವಾಗಿ ಬೆಳೆದಿರತಕ್ಕ ನಮ್ಮ ರಾಜ್ಯದಲ್ಲಿ ಸರ್ವೆ ಸಾಮಾನ್ಯವಾಗಿ ಇರತಕ್ಕ ಪ್ರತಿಯೊಬ್ಬ ಪ್ರಜೆಗೂ ಅವಶ್ಯಕವಾಗಿ ಬೇಕಾಗಿರತಕ್ಕ ಪರಿಪೂರ್ಣ ಜೀವನವನ್ನು ಮಾಡಬೇಕಾದರೆ ಒದಗಿಸಬೇಕಾದಂಥ ಅವಶ್ಯವಾದ ಬೇಡಿಕೆಗಳಿಗೆ ಇನ್ನು ಹೆಚ್ಚಿನ ಮಹತ್ವವನ್ನು ಕೊಡಬೇಕಿತ್ತು. ಇವೊತ್ತಿನ ದಿವಸ ರಾಜ್ಯ ಆಳತಕ್ಕ ಆಡಳಿತ ಕಾಂಗ್ರೆಸ್ಸಿನ ಮಂತ್ರಿ ಮಂಡಲ ಏನು ಇದೆ ಅದು ಅನೇಕ ರಾಜಕೀಯ ಪಕ್ಷಗಳ ಧುರೀಣರನ್ನು ಸಿದ್ಧಾಂತಗಳನ್ನು ಹೊಂದಿರತಕ್ಕ ಕಾಂಗ್ರೆಸ್ ಪಕ್ಷವಾಗಿದೆ. ಒಂದು ಸಿದ್ಧಾಂತವನ್ನು ಹೊಂದದೆ ಅನೇಕ ಸಿದ್ಧಾಂತಗಳನ್ನು ಒಳಗೊಂಡು ಯಾವುದನ್ನೂ ಕಾರ್ಯಾಚರಣೆಯಲ್ಲಿ ತರಲು ಬಾರದೆ ಡೋಲಾಯಮಾನವಾಗಿ ಆಡಳಿತ ಮಾಡುವುದಕ್ಕೆ ಹೊರಟಿದ್ದಾರೆ. ಭೂಸುಧಾರಣೆ ಮತ್ತು ನಗರ ಆಸ್ತಿ ಮಿತಿಗೊಳಿಸುವುದನ್ನು ಜಾರಿಗೆ ತರುವ ಯೋಜನೆಯನ್ನು ಹಾಕಿದ್ದಾರೆ. ನಾನು ಹೇಳುತ್ತೇನೆ ಯಾವ ರೀತಿ ಈ ಅಂಶಗಳನ್ನು ಜಾರಿಗೆ ತರುವುದಕ್ಕೆ ಹೊರಟಿದ್ದೀರಿ ? ಮಂತ್ರಿಮಂಡಲದಲ್ಲಿ ಇರತಕ್ಕ ಒಬ್ಬರಾದರೂ ನನ್ನಲ್ಲಿ ಇರತಕ್ಕ ಆಸ್ತಿಯನ್ನು ಸರ್ಕಾರಕ್ಕೆ ಕೊಟ್ಟಿದ್ದೇನೆ ಎಂದು ಘೋಷಣೆ ಮಾಡಿಲ್ಲ, ಇದು ಘೋಷಣೆ ಆಗದೆ ಕಾರ್ಯರೂಪಕ್ಕೆ ತರುತ್ತಾರೆ ಎಂದು ನಾನಾದರೂ ನಂಬಿದ್ದೇನೆ. ಈ ಒಂದು ದಿಸೆಯಲ್ಲಿ ಸರ್ಕಾರ ಹೋಗಿರುವುದರಿಂದ ನಗರ ಮತ್ತು ಹಳ್ಳಿಗಳಲ್ಲಿ ಆಸ್ತಿಗಳ ಬೆಲೆ ಬಹಳವಾಗಿ ಇಳಿದುಹೋಗಿದೆ. ವಿರೋಧಪಕ್ಷ ಗಾತ್ರದಲ್ಲಿ ಸಣ್ಣದು ಇರಬಹುದು ಆದರೂ ನಾನು ಕೊಡತಕ್ಕ ಸಲಹೆಗಳನ್ನು ಅರ್ಥ ಮಂತ್ರಿಗಳು ಪರಿಗಣನೆಗೆ ತೆಗೆದುಕೊಳ್ಳುತ್ತಾರೆಂದು ನಾನಾದರೂ ನಂಬಿದ್ದೇನೆ. ಅನೇಕ ವಿಧವಾಗಿ ತೆರಿಗೆಗಳನ್ನು ಹಾಕಿದ್ದಾರೆ. ಆಸ್ತಿಗಳ ಬೆಲೆ ಕುಸಿದು ಬಿದ್ದುದರಿಂದ ಆಸ್ತಿಗಳನ್ನು ಮಾರತಕ್ಕುದರ ಮೇಲೆ ಹಾಕತಕ್ಕ ಸ್ಟಾಂಪ್ ಡ್ಯೂಟಿ ಸುಮಾರು ಒಂದು ಕೋಟಿ ರೂಪಾಯಿ ಸರ್ಕಾರಕ್ಕೆ ಆದಾಯ ಬರುವುದು ಕಮ್ಮಿಯಾಗಿರುವುದು ಅವರು ಮನಗಂಡಿಲ್ಲವೆಂದು ಕಾಣುತ್ತದೆ. ನಾನು ಒಂದು ಸಲಹೆ ಕೊಡುತ್ತೇನೆ.

ಯಾವನಾದರೂ ರೈತ ಆಸ್ತಿಯನ್ನು ತೆಗೆದುಕೊಳ್ಳಬೇಕಾದರೆ, 40 ಸಾವಿರ ರೂಪಾಯಿ ಆಸ್ತಿ 20 ಸಾವಿರ ರೂಪಾಯಿ ಮಟ್ಟಕ್ಕೆ ಬಂದಿರಬೇಕಾದರೆ, ಸ್ವಲ್ಪ ಮಟ್ಟಿಗೆ ಸ್ಟಾಂಪ್ ಡ್ಯೂಟಿ ಹೆಚ್ಚಳ ಮಾಡುವುದರಿಂದ ಅದು ಅವನ ಮೇಲೆ ಹೊರೆ ಆಗುವುದಿಲ್ಲ ಎಂದು ಭಾವನೆ ಮಾಡುತ್ತೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಸ್ಟ್ಯಾಂಪ್ ಡ್ಯೂಟಿಯನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸುವುದು ಸೂಕ್ತ

(ಶ್ರೀ ಟಿ. ಎಂ. ಮಂಜುನಾಥ್)

ಎಂದು ಸಲಹೆ ಮಾಡುತ್ತೇನೆ. ಸ್ಟ್ಯಾಂಪ್ ಡ್ಯೂಟಿ ಹಣದಿಂದ ಬರತಕ್ಕ ಒಂದು ಅಂಶವನ್ನು ಸರ್ಕಾರದವರು ಅಭಿವೃದ್ಧಿ ಮಂಡಲಿಗೆ ಕೊಡುತ್ತಾರೆ. ಇವೊತ್ತಿನ ದಿವಸ ಪ್ರತಿಯೊಂದು ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಆದಾಯ ಇರತಕ್ಕದ್ದು ಸ್ಟ್ಯಾಂಪ್ ಡ್ಯೂಟಿ ವರಮಾನದಿಂದ. ನನ್ನ ಅನುಭವದಿಂದ ಹೇಳಬೇಕಾದರೆ ಕಳೆದ 3 ತಿಂಗಳಲ್ಲಿ 15 ಸಾವಿರ ರೂಪಾಯಿ ಸ್ಟ್ಯಾಂಪ್ ಡ್ಯೂಟಿ ಇದ್ದದ್ದು 3 ಸಾವಿರಕ್ಕೆ ಬಂದಿರಬೇಕಾದರೆ, ದೇಶದಲ್ಲಿ ಎಷ್ಟು ಕೋಟಿ ರೂಪಾಯಿ ಕಡಿಮೆಯಾಗುತ್ತದೆಂದು ತಿಳಿಯಬಹುದು. ಇನ್ನು ಹೆಚ್ಚಿಗೆ ಮಾರಾಟ ತೆರಿಗೆ ಹಾಕುವ ಬದಲು, ಎಲ್ಲಾ ಪರಿಣತರು ಹೇಳಿದಂತೆ ತೆರಿಗೆಯನ್ನು ಏನು ಹಾಕಿದ್ದಾರೆ ಅದನ್ನು ಕಡ್ಡಾಯವಾಗಿ ನ್ಯಾಯವಾಗಿ ವಸೂಲು ಮಾಡಿದ್ದೇ ಆದ ಪಕ್ಷದಲ್ಲಿ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುವುದಾಗಿ ತಿಳಿದುಕೊಂಡಿದ್ದೇನೆ. ಇವೊತ್ತಿನ ದಿವಸ ಕಾಂಗ್ರೆಸ್ (ಆರ್) ಪಕ್ಷ ರಾಜ್ಯದಲ್ಲಿ ಆಡಳಿತಕ್ಕೆ ಬಂದು 90 ದಿವಸಗಳಾದವು. ನಾವು ನೋಡಿದ ಪಕ್ಷದಲ್ಲಿ ಯಾವುದೇ ಭ್ರಷ್ಟಾಚಾರ ಕಡಿಮೆ ಆಗಲಿಲ್ಲ. ಅದಕ್ಕೆ ಬದಲಾಗಿ ಸೇಕಡವಾರು ಜಾಸ್ತಿಯಾಗಿದೆ. ಅನೇಕ ಕಡೆಗಳಲ್ಲಿ ಲಂಚರುಷುವತ್ತು ತಾಂಡವಾಡುತ್ತಾ ಇರಬೇಕಾದರೆ ಅದನ್ನು ನಿರ್ಮೂಲ ಮಾಡಲು ಸರ್ಕಾರ ಜವಾಬ್ದಾರಿ ಎಷ್ಟರಮಟ್ಟಿಗೆ ನಿರ್ವಹಿಸಿದೆ ಎಂಬುದನ್ನು ನೋಡಬೇಕು. ರೈತರಿಗೆ ಜನಗಳಿಗೆ ಆಗುವ ಅನ್ಯಾಯವನ್ನು ನಿವಾರಣೆ ಮಾಡುತ್ತೇವೆ ಅವರಿಗೆ ಮೂಲಭೂತವಾದ ಹಕ್ಕುಗಳನ್ನು ಒದಗಿಸುತ್ತೇವೆ ಎಂದು ಹೊರಟಿರತಕ್ಕವರು, ಅವರಿಗೆ ಸರಿಯಾದ ಪರಿಹಾರವನ್ನು ಒದಗಿಸಬೇಕೆಂದು ಹೇಳುತ್ತೇನೆ. ಇದುವರೆಗೆ ಎಷ್ಟು ತೊಂದರೆಯಾಗಿದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಇನ್ನು ಒಂದು ಮಾತನ್ನು ಹೇಳಬೇಕಾಗಿದೆ. ಅದು ಹೊಗಳುವ ವಿಚಾರವಲ್ಲ. ಅರ್ಥಮಂತ್ರಿಗಳು ಡೆಲ್ಲಿಗೆ ಹೋಗಿ ಕೇಂದ್ರ ಸರ್ಕಾರವನ್ನು ಒಪ್ಪಿಸಿ ಕಾಳಿನದಿ ಪ್ರಾಜೆಕ್ಟ್ ಪೂರ್ಣಗೊಳಿಸುತ್ತೇನೆ ಎಂದು ಭರವಸೆ ಕೊಟ್ಟಿದ್ದಾರೆ. ಅದಕ್ಕೆ ನಿಜವಾಗಿ ನಮ್ಮ ದೇಶದ ಪ್ರತಿಯೊಬ್ಬ ಪ್ರಜೆಯೂ ಸಂತೋಷಪಡಬೇಕಾಗಿದೆ. ಇದು ಬೃಹದಾಕಾರವಾದ ಯೋಜನೆ ಆಗಿರುವುದರಿಂದ ಶರಾವತಿ ಕರ್ಮಕಾಂಡ ಆಗುವುದು ಬೇಡ. ಅಲ್ಲಿಗೆ ನಿಷ್ಠಾವಂತ ಅಧಿಕಾರಿಗಳನ್ನು ಹಾಕಿ ಸರಿಯಾದ ರೀತಿಯಲ್ಲಿ ಕೆಲಸ ಮಾಡುವ ಹೊಣೆ ಸರ್ಕಾರದ ಮೇಲೆ ಇದೆ.

ಇನ್ನೊಂದು ಮಾತು ಹೇಳಬೇಕಾಗಿದೆ. ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ತುಂಬಿರತಕ್ಕ ತಂಗಿನ ಬೆಳೆಗಾರರ ಮೇಲೆ ಸರ್ಕಾರ ಸ್ವಲ್ಪಮಟ್ಟಿಗೂ ಸಹ ಜವಾಬ್ದಾರಿಯನ್ನು ತೆಗೆದುಕೊಂಡಿಲ್ಲ ಎಂಬ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. ತೆಂಗಿನ ಬೆಳೆಯ ಉತ್ಪತ್ತಿಯಿಂದ ತೆರಿಗೆ ರೂಪದಲ್ಲಿ ಕೋಟ್ಯಾಂತರ ರೂಪಾಯಿ ಸರ್ಕಾರದ ಬೊಕ್ಕಸಕ್ಕೆ ಬರುತ್ತದೆ. ಈ ಪ್ರದೇಶದ ಜನ ಸರ್ಕಾರಕ್ಕೆ ಕೊಕನಟ್ ಪಿಕ್‌ಅಪ್ಸ್ ಕೊಡಬೇಕು ಎಂದು ಒತ್ತಾಯಪಡಿಸಿದರೂ ಬಡ್ಜೆಟ್ಟಿನಲ್ಲಿ ಇದರ ಬಗ್ಗೆ ಏನು ಇಲ್ಲದ್ದು ನೋಡಿದರೆ ವಿಷಾದವಾಗುತ್ತದೆ. ಸರ್ಕಾರ ಯಾವ ಬಾಬಿನಿಂದ ಆದಾಯ ಪಡೆಯುತ್ತದೋ ಅದರ ಬಗ್ಗೆ ಸರ್ಕಾರ ಕಾರ್ಯಕ್ರಮ ತೆಗೆದುಕೊಂಡು ಅವರ ಬೇಡಿಕೆಗಳನ್ನು ಪೂರ್ಣ ಮಾಡುವ ಜವಾಬ್ದಾರಿ ಅವರ ಮೇಲೆ ಇದೆ. ಅದನ್ನು ಮಾಡಬೇಕೆಂದು ಕಳಕಳಿಯಿಂದ ಹೇಳುತ್ತೇನೆ. ನಮ್ಮ ಮಂತ್ರಿಮಂಡಲ ದೇಶದಲ್ಲಿ ಇರತಕ್ಕ ಸರ್ಕಾರಿ ಜಮೀನನ್ನು ಹಂಚುವುದಕ್ಕೆ ಭೂ ಸಲಹಾ ಸಮಿತಿ ಮಾಡುವುದಕ್ಕೆ ಹೊರಟಿದ್ದಾರೆ. ಹಿಂದೆ ಶ್ರೀ ವೀರೇಂದ್ರ ಪಾಟೀಲ್ ಸರ್ಕಾರ ಇದ್ದಾಗ, ವಿಧಾನ ಸಭಾಸದಸ್ಯ, ತಾಲ್ಲೋಕು ಮಟ್ಟದಲ್ಲಿ ತಾಲ್ಲೋಕು ಅಭಿವೃದ್ಧಿ ಮಂಡಲಿ ಅಧ್ಯಕ್ಷ ಮತ್ತು ಹರಿಜನರಿಗೆ ಸಂಬಂಧಪಟ್ಟ ಒಬ್ಬರನ್ನು ಸೇರಿಸಿ ಕಮಿಟಿ ಮಾಡಿದ್ದರು. ಈಗ ಮಾಡಿರುವ ಸಮಿತಿ ಆಡಳಿತ ಕಾಂಗ್ರೆಸ್ ಸಮಿತಿ ಆಗಿದೆ. ಈಗ ಸರ್ಕಾರದ ಜಮೀನನ್ನು ಸ್ವಂತ ಪಕ್ಷದ ಸ್ವತ್ತು ಎಂದು ಭಾವಿಸಿ ಅದನ್ನು ಹಂಚುವುದಕ್ಕೆ ಹೊರಟಿದ್ದಾರೆ. ಇದು ಶೋಚನೀಯವಾದ ವಿಚಾರ. ನೀವು ಸರಿಯಾದ ರೀತಿಯಲ್ಲಿ ಸರ್ಕಾರಿ ಜಮೀನನ್ನು ಹಂಚುವುದಕ್ಕೆ ಆಲೋಚನೆ ಮಾಡಬೇಕಾದುದು ಮುಖ್ಯ. ಮೈಸೂರು ದೇಶದಲ್ಲಿ ನೈಸರ್ಗಿಕ ದತ್ತವಾದ ಭೂಮಿಯಲ್ಲಿ ಅನೇಕ ನಿಧಿ ನಿಕ್ಷೇಪ ಇರುವುದು ಗೊತ್ತಿದೆ. ನಾನು ಕಳಕಳಿಯಿಂದ ಹೇಳುತ್ತೇನೆ. ಕೈಗಾರಿಕೋದ್ಯಮಗಳಿಗೆ ಹೆಚ್ಚಿಗೆ ಅವಕಾಶ ಮಾಡಿಕೊಟ್ಟು ಭೂಮಿಯಲ್ಲಿ ಇರತಕ್ಕ ನಿಕ್ಷೇಪವನ್ನು ಹೊರಗಡೆ ತೆಗೆದು ಸಂಪನ್ಮೂಲಗಳನ್ನು ಹೆಚ್ಚಿಗೆ ಮಾಡಿ ಅದರಿಂದ ಜನಗಳ ಅವಶ್ಯಕತೆ ಏನು ಇದೆ ಅದನ್ನು ಪರಿಪೂರ್ಣ ಮಾಡತಕ್ಕ ಅವಕಾಶಗಳನ್ನು ಮಾಡಿಕೊಡಬೇಕು. ಇನ್ನೂ ಈ ದಿವಸ ಹೊರಗಡೆ ಕಳುಹಿಸಿರತಕ್ಕ ಲೋಹದ ಮೇಲೆ ಎಕ್ಸೈಜ್ ಡ್ಯೂಟಿ ಹಾಕಿ ಅದರ ಮೂಲಕ ಹಣವನ್ನು ವಸೂಲು ಮಾಡಬೇಕೆಂದು ಹೇಳುತ್ತೇನೆ. ಇವೊತ್ತು ರೈತರು ಬೆಳೆದಂತಹ ಆಹಾರ ಪದಾರ್ಥಗಳಿಗೆ ಹೆಚ್ಚಿನ ರೇಟು ಬರುವವರೆಗೆ ಕೂಡಿ ಇಟ್ಟುಕೊಳ್ಳುವುದಕ್ಕೆ ಎ ಮತ್ತು ಬಿ ಅಗ್ರಿಕಲ್ಚರಲ್

ಪ್ರೊಡ್ಯೂಸಿಂಗ್ ಮಾರ್ಕೆಟ್ ಕಮಿಟಿಗಳು ಏನು ಇವೆ ಅವು ವೇರ್‌ಹೌಸ್‌ಗಳನ್ನು ಕಡ್ಡಾಯವಾಗಿ ಕಟ್ಟುವ ಏರ್ಪಾಡು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಜನತೆಗೆ ಅವಶ್ಯವಾಗಿ ಮತ್ತು ಮೂಲಭೂತವಾಗಿ ಬೇಕಾದ ಬೇಡಿಕೆಗಳನ್ನು ಪೂರೈಸುವ ವಿಚಾರದಲ್ಲಿ ನಾವು ನಮ್ಮ ಸಹಕಾರ ಕೊಡುತ್ತೇವೆ. ಬಡ್ಜೆಟ್ಟಿನಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ಕೃತಜ್ಞತೆ ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಸತ್ಯನಾರಾಯಣಸಿಂಗ್ (ಹೊಸಪೇಟೆ).—ಮಾನ್ಯ ಸಭಾಧ್ಯಕ್ಷರೇ, ನಮ್ಮ ಅರ್ಥ ಸಚಿವರು ಮಂಡಿಸಿರುವ 1972–73ನೇ ಸಾಲಿನ ಆಯವ್ಯಯವನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತಾ ಈ ಸಂದರ್ಭದಲ್ಲಿ ಕೆಲವೊಂದು ವಿಷಯಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಲು ಇಚ್ಛೆಪಡುತ್ತೇನೆ. 1953ರಲ್ಲಿ ಆಗಿನ ಕಾಮಗಾರಿಗಳು ಮುಗಿಯದ ಕಾರಣ ಅಂದಿನ ವಾತಾವರಣದಲ್ಲಿ ತುಂಗಭದ್ರಾ ಅಣೆಕಟ್ಟಿನ ಆಡಳಿತ ನಡೆಸುವುದಕ್ಕೆ ಸಂಬಂಧಪಟ್ಟ ಸರ್ಕಾರಗಳು ಒಪ್ಪಿದ ನಂತರ ತುಂಗಭದ್ರಾ ಬೋರ್ಡನ್ನು ರಚಿಸಲಾಗಿತ್ತು. ಇಂದಿಗೆ 1972ರಲ್ಲಿ ಎಲ್ಲಾ ಕಾಮಗಾರಿಗಳು ಪೂರ್ತಿಯಾಗಿ ಆಡಳಿತ ಸುಗಮವಾಗಿ ನಡೆಯುತ್ತಾ ಇದ್ದರೂ, ಇಂತಹ ಬೋರ್ಡು ಮುಂದುವರಿಯುವುದನ್ನು ನಾವು ನೋಡುತ್ತಾ ಇದ್ದೇವೆ ಅದು ನಿಜವಾಗಿ ದುಃಖಕರ ಸಂಗತಿಯಾಗಿದೆ. ತುಂಗಭದ್ರಾ ಆಡಳಿತ ಬೋರ್ಡಿನಲ್ಲಿ ಕನ್ನಡಿಗರಿಗೆ ಆಗುವ ಅನ್ಯಾಯ ಎಷ್ಟು ಎಂದು ಹೇಳತೀರದು. ನಾನು ಸರ್ಕಾರಕ್ಕೆ ಕೇಳಿಕೊಳ್ಳುವುದು, ಕೂಡಲೇ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿ ಬೋರ್ಡನ್ನು ರದ್ದುಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು. ನಾನು ಹೆಚ್ಚಿಗೆ ಕಬ್ಬು ಬೆಳೆಯುವ ಪ್ರದೇಶದಿಂದ ಬರುತ್ತಿರುವುದರಿಂದ, ಕಬ್ಬಿನ ಬಗ್ಗೆ ಹೆಚ್ಚಿನ ಆಸೆ ತೋರಿಸಿ ನೀರು ತೆರಿಗೆಯನ್ನು ಹೆಚ್ಚು ಮಾಡಲು ಹೊರಟಿದ್ದಾರೆ. ಈ ಒಂದು ದೃಷ್ಟಿಯಿಂದ, ಕಬ್ಬು ಬೆಳೆಗಾರರ ಅನೇಕ ಸಮಸ್ಯೆಗಳನ್ನು ತಮ್ಮ ಮುಂದೆ ಇಡಲು ಇಚ್ಛೆಪಡುತ್ತೇನೆ.

5-00 P.M.

ಮೊದಲನೆಯದಾಗಿ ತಾವು ಕಬ್ಬಿನ ಬೆಳೆಗೆ ಈಗಿರುವ ನೀರಿನ ತೆರಿಗೆಯನ್ನು ಎರಡರಷ್ಟು ಹೆಚ್ಚು ಮಾಡಿದ್ದೀರಿ. ಇದರಿಂದ ಕಬ್ಬು ಬೆಳೆಯುವುದಕ್ಕೆ ಕರಭಾರ ಹೆಚ್ಚಾಗುತ್ತದೆ. ಆದ್ದರಿಂದ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಈ ನೀರಿನ ತೆರಿಗೆಯನ್ನು ಖಂಡಿತವಾಗಿಯೂ ಕಡಿಮೆ ಮಾಡಬೇಕು. ಅಲ್ಲದೆ 1965ರಿಂದ ನೀರಿನ ತೆರಿಗೆ ಸಮಸ್ಯೆಯ ಪರಿಹಾರವಾಗದೆ ಹಾಗೆ ಉಳಿದಿದ್ದು ಆರು ವರ್ಷದ ತೆರಿಗೆಯನ್ನು ಒಂದೇ ಸಲ ವಸೂಲು ಮಾಡಲು ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಈ ಆರು ವರ್ಷದ ತೆರಿಗೆ ಮತ್ತು ದುಪ್ಪಟ್ಟು ಹೊಸದಾಗಿ ವಿಧಿಸಿದ ತೆರಿಗೆಯನ್ನು ಹೇರಿದರೆ ಇಂತಹ ಕರಭಾರ ರೈತರು ಹೊರುವಸ್ಥಿತಿಯಲ್ಲಿಲ್ಲ. ಆದ್ದರಿಂದ ಈ ಒಂದು ಹಳೆಯ ಬಾಕಿಯನ್ನು ಸುಲಭವಾದ ಕಂತುಗಳಲ್ಲಿ ಕೊಡಲು ತಾವು ಪರವಾನೆಗೆ ಕೊಡಬೇಕು. ನಮ್ಮ ದೇಶದಲ್ಲಿ ಈಗ ಕೆಲವೊಂದು ರೈತರು ನೀರು ಹೆಚ್ಚಾಗಿ ಸಿಕ್ಕುವಂತಹ ಸಂದರ್ಭಗಳಲ್ಲಿ ತಾತ್ಕಾಲಿಕವಾದ ಪರ್ಮಿಟ್ ತೆಗೆದುಕೊಂಡು ಬೆಳೆ ಬೆಳೆಯುತ್ತಿದ್ದಾರೆ. ಅವರಿಗೆ ಎರಡು ಪಟ್ಟು ನೀರಿನ ತೆರಿಗೆಯನ್ನು ತಾವು ಹಾಕುತ್ತೀರಿ. ಅದಕ್ಕೆ ಯಾವ ಒಂದು ಸರಿಯಾದ ಕಾರಣವಿಲ್ಲ. ಇದು ಸಮಂಜಸವಾದುದೂ ಅಲ್ಲ. ಸರ್ಕಾರದಿಂದ ಪರ್ಮಿಟ್ ತೆಗೆದುಕೊಂಡರೂ ಅವರಮೇಲೆ ದಂಡ ಹೇರುತ್ತಿದ್ದೀರಿ. ಇದರಿಂದ ಅವರಿಗೆ ಅನ್ಯಾಯವಾಗುತ್ತಿದೆ. ಕೂಡಲೇ ಅವರು ಮಾಮೂಲಾಗಿ ನೀರಿನ ತೆರಿಗೆಯನ್ನು ಕೊಡುವಂತೆ ಮಾಡಬೇಕು.

[MADAM SPEAKER in the Chair.]

ಶ್ರೀ ಕೋಣಂದೂರು ಲಿಂಗಪ್ಪ.—ಈ ಎಲ್ಲಾ ನೀರಿನ ತೆರಿಗೆಯನ್ನು ರದ್ದು ಮಾಡಿ 5,000 ರೂಪಾಯಿ ಉತ್ಪತ್ತಿ ಇರುವವರಮೇಲೆ ತೆರಿಗೆ ಹಾಕಬಹುದು ತಾನೇ ?

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಕಾನೂನಿಗೆ ವಿರೋಧವಾಗಿ ಅನ್ ಆಥರೈಸ್ಡ್ ಕಲ್ಟಿವೇಷನ್ ಮಾಡುವ ರೈತರಿಗೆ ಸುಮಾರು 10ಪಟ್ಟು ಮಾಮೂಲು ತೆರಿಗೆಗಿಂತ ಹೆಚ್ಚು ತೆರಿಗೆಯನ್ನು ಹಾಕುತ್ತಿದ್ದೀರಿ. ಇದು ಅನೇಕ ಸಲ ರೈತ ಭೂಮಿಯಲ್ಲಿ ಬೆಳೆದದ್ದಕ್ಕಿಂತ ಹೆಚ್ಚಿನ ಬೆಲೆ ಆಗುತ್ತದೆ. ಈ ಒಂದು ಪದ್ಧತಿಯನ್ನು ತಾವು ನಿಲ್ಲಿಸಿ ಅನ್‌ಆಥರೈಸ್ಡ್ ಕಲ್ಟಿವೇಷನ್ ಮಾಡಿದವರ ಮೇಲೆ 5 ಪಟ್ಟು 10 ಪಟ್ಟು ದಂಡ ವಿಧಿಸಿದರೆ ಸಾಕು ಎಂದು ಸೂಚನೆ ಕೊಡಬಯಸುತ್ತೇನೆ. ಅನ್‌ಆಥರೈಸ್ಡ್ ಕಲ್ಟಿವೇಷನ್ ಮಾಡುವ ರೈತರಿಗೆ ನೀರು ಸಿಗದಂತೆ ಪ್ರಾರಂಭದಲ್ಲಿ ಕ್ರಮ ತೆಗೆದುಕೊಂಡರೆ ಮುಂದೆ ಅನ್‌ಆಥರೈಸ್ಡ್ ಕಲ್ಟಿವೇಷನ್ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ಇಂತಹ ಒಂದು ವ್ಯವಸ್ಥೆಯನ್ನು ಜಾರಿಗೆ ತರಬೇಕು ಎಂದು ಕೇಳಿಕೊಳ್ಳುತ್ತೇನೆ.

(ಶ್ರೀ ಬಿ. ಸತ್ಯನಾರಾಯಣ ಸಿಂಗ್)

ನನ್ನ ಒಂದು ಕ್ಷೇತ್ರದಲ್ಲಿ ನನಗೆ ತಿಳಿದಿರುವಂತೆ ನಮ್ಮ ಹಳ್ಳಿಯ ಅಯಕಟ್ಟನ್ನು ವಿಜಯನಗರದ ಅರಸರ ಕಾಲದಲ್ಲಿ ಕಟ್ಟಿದ ಕಾಲುವೆಗಳ ಮೂಲಕ ವ್ಯವಸಾಯ ಮಾಡುತ್ತಿದ್ದೇವೆ. ಈವೊತ್ತಿನ ದಿವಸ ನೀರಿನ ತೆರಿಗೆಯನ್ನು ಹಾಕಿದ್ದನ್ನು ನೋಡಿದರೆ ತುಂಗಭದ್ರ ಅಣೆಕಟ್ಟಿಗೆ ಖರ್ಚು ಮಾಡಿದ ಹಣ ಮೂರು ಕೋಟಿ ರೂಪಾಯಿಯನ್ನು ಬಡ್ಡಿ ಸಮೇತ ರೈತರಿಂದ ವಸೂಲಿ ಮಾಡಲು ಹೊರಟಿದ್ದೀರಿ. ಆದರೆ ತುಂಗಭದ್ರ ಅಣೆ ಕಟ್ಟು ಕಟ್ಟುವುದಕ್ಕೆ ಮುಂಚೆ ಇದು ಹಳೆಯ ಆಯುಕಟ್ಟಿಗೆ ಸೇರಿದ ಪ್ರದೇಶವಾದ್ದರಿಂದ ತೆರಿಗೆಯನ್ನು ಹೊರಲಿಕ್ಕೆ ಬದ್ಧರಲ್ಲ ಎಂದು ಈ ಪ್ರದೇಶದಲ್ಲಿರುವವರು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ತೆರಿಗೆಯನ್ನು ಹೊರಲಾರದೆ ಇದ್ದುದರಿಂದ ಪುನರ್ ವಿಮರ್ಶೆ ಮಾಡಿ ಇದರಿಂದ ರಿಯಾಯಿತಿ ಕೊಡಬೇಕು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಇನ್ನೊಂದು ವಿಷಾದದ ಸಂಗತಿ ಎಂದರೆ ತುಂಗಭದ್ರ ಆಯುಕಟ್ಟಿನ ಕೆಳಗೆ ರಸ್ತೆಗಳನ್ನು ಸುಧಾರಿಸಲು ಸರ್ಕಾರಕೊಟ್ಟಂಥ ಗ್ರಾಂಟುಗಳಿಂದ, ನಮ್ಮ ಹಳೆಯ ಅಯುಕಟ್ಟಿನಲ್ಲಿ ಏನಾದರೂ ಕೆಲಸ ಇದ್ದರೆ ಅದನ್ನು ಮಾಡಲಿಕ್ಕೆ ಸರ್ಕಾರಿ ಅಧಿಕಾರಿಗಳು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಆದುದರಿಂದ ಈ ಹಳೆಯ ಅಯುಕಟ್ಟಿನವರಿಗೆ ಈ ನೀರಿನ ತೆರಿಗೆಯನ್ನು ವಿಧಿಸಬಾರದು. ಹಾಗೆ ವಿಧಿಸುವುದಾದರೆ ರಿಯಾಯಿತಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ಆಯುಕಟ್ಟಿನಲ್ಲಿ ವೆಚ್ಚವನ್ನು ಸುಧಾರಿಸಲಿಕ್ಕೆ ಕೇಂದ್ರ ಸರ್ಕಾರದವರು ಏನು ಹಣ ಕೊಡುತ್ತಾರೆ ಅದರಲ್ಲೂ ಕೂಡ ನಮಗೆ ಪಾಲು ಸಿಗಬೇಕಾಗಿದೆ. ಈ ಹಣವನ್ನು ಉಪಯೋಗಮಾಡುವುದಕ್ಕೆ ನಮಗೂ ಅವಕಾಶ ಕಲ್ಪಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ತುಂಗಭದ್ರ ಅಣೆಕಟ್ಟಿನ ಸೆಂಟ್ರಲ್ ಗ್ರಾಂಟಿನಿಂದ ಹಳೆ ಆಯುಕಟ್ಟಿನ ಕೆಲಸ ಮಾಡಿಕೊಡಬೇಕೆಂದು ಅಧಿಕಾರಿಗಳಿಗೆ ಹೇಳಿದರೆ, ಅವರು ಇದು ಹೊಸ ಅಯುಕಟ್ಟಿಗೆ ಸಂಬಂಧಪಟ್ಟಿದ್ದು ಹಳೆಯ ಆಯುಕಟ್ಟಿಗೆ ಸಂಬಂಧಪಟ್ಟಿಲ್ಲ, ಆದ್ದರಿಂದ ಇಲ್ಲಿ ಯಾವ ಕೆಲಸವನ್ನು ಹಳೆಯ ಅಯುಕಟ್ಟಿನಲ್ಲಿ ನಡೆಸುವುದಕ್ಕೆ ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಆದ್ದರಿಂದ ಈ ವಿಷಯವನ್ನು ಅಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಬೇಕಾದುದು ಅವಶ್ಯವಾಗಿದೆ.

ನಂತರ ನಮ್ಮ ಪ್ರದೇಶದಲ್ಲಿ ವ್ಯವಸಾಯ ಇಲಾಖೆಯು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಎಂದು ಸ್ಪಷ್ಟವಾಗಿ ಹೇಳಲು ಇಚ್ಛೆಪಡುತ್ತೇನೆ. ರೈತರಿಗೆ ಕಬ್ಬಿನ ಬೀಜ ಒದಗಿಸುವುದಕ್ಕೆ ನಮ್ಮ ವ್ಯವಸಾಯ ಇಲಾಖೆಯಲ್ಲಿ ಶಕ್ತಿ ಇಲ್ಲ. ಕಳೆದ 10 ವರ್ಷಗಳಿಂದ ನಮ್ಮ ರೈತರು ಹಳೆಯ ಬೀಜ ವನ್ನು ಉಪಯೋಗ ಮಾಡುತ್ತಾ ಇದ್ದಾರೆ. ಆದ್ದರಿಂದ ಒಂದು ಎಕರೆಯಲ್ಲಿ ಏನು ಉತ್ಪಾದನೆ ಆಗುತ್ತಿತ್ತೋ ಅದು ಕಡಿಮೆ ಆಗುತ್ತಾ ಹೋಗುತ್ತಿದೆ. ಆದ್ದರಿಂದ ಈ ಪ್ರದೇಶಕ್ಕೆ ಒಳ್ಳೆಯ ಬೀಜಗಳನ್ನು ಸರ್ಕಾರದವರಾಗಲೀ ಅಥವಾ ಖಾಸಗೀ ಫ್ಯಾಕ್ಟರಿಯ ಮೂಲಕವಾಗಲೀ ಕೊಡಿಸುವ ಏರ್ಪಾಡು ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಅದೇ ರೀತಿ ಕಬ್ಬಿನ ಬೆಳೆಗೆ ಬೇಕಾದ ಔಷಧಿಗಳು ನಮ್ಮ ದೇಶದಲ್ಲಿ ಸಿಗುತ್ತಿಲ್ಲ ಎಂದು ತಿಳಿದುಬಂದಿದೆ. ಮುಖ್ಯವಾಗಿ ಬೇರು ಹುಳದ ರೋಗ ನಮ್ಮ ಕಡೆ ಬರುತ್ತಾ ಇದೆ. ಇದರಿಂದ ರೈತರಿಗೆ ಬಹಳ ನಷ್ಟವಾಗಿ ತೊಂದರೆಯಾಗಿದೆ. ಈ ಔಷಧಿಯನ್ನು ಪರದೇಶದಿಂದ ಆಮದು ಮಾಡಬೇಕಾಗಿದೆ ಎಂದು ತಿಳಿದುಬಂದಿದೆ. ಆದುದರಿಂದ ಈ ಔಷಧಿಯನ್ನು ಪರದೇಶದಿಂದ ಆಮದು ಮಾಡಿ ನಮ್ಮ ರೈತರಿಗೆ ಸಿಗುವಂತೆ ಏರ್ಪಾಡು ಮಾಡ ಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಮುಖ್ಯವಾಗಿ ತಾವು ಈವೊತ್ತಿನದಿವಸ ರೈತರ ಮೇಲೆ ನೀರಿನ ತೆರಿಗೆಯನ್ನು ಹೆಚ್ಚು ಹೆಚ್ಚು ಮಾಡಲು ಹೊರಟಿದ್ದೀರಿ. ಆದರೆ ರೈತರ ಕಷ್ಟಗಳ ಬಗ್ಗೆ ಸರ್ಕಾರದವರು ಯಾವ ರೀತಿ ಗಮನ ಕೊಟ್ಟಿಲ್ಲ ಎಂದು ನನ್ನ ಆಪಾದನೆ. ಕಳೆದ 10 ವರ್ಷಗಳಿಂದ ಒಂದು ರಸ್ತೆಯನ್ನು ಸರ್ಕಾರ ಸರಿ ಯಾಗಿ ಮೇನ್‌ಟೇನ್ ಮಾಡಿಲ್ಲ ಎಂದು ಪಿ.ಡಬ್ಲ್ಯೂ.ಡಿ. ಡಿಪಾರ್ಟ್‌ಮೆಂಟಿನವರು ಸ್ಪಷ್ಟವಾಗಿ ಹೇಳಿದ್ದಾರೆ. ಇದು ತಮಗೆ ಸಂಬಂಧಪಟ್ಟ ವಿಷಯವಲ್ಲ ಎಂದು ಹೇಳಿದ್ದಾರೆ. ಈ ರೀತಿಯಲ್ಲಿ, ಯಾವ ಅನುಕೂಲಗಳನ್ನು ಮಾಡಿಕೊಡದಿದ್ದರೂ, ರೈತರ ಮೇಲೆ ನೀವು ಕರಭಾರ ಹೊರಿಸುವುದಕ್ಕೆ ಹೊರಟಿದ್ದೀರಿ. ಬಡ್ಜೆಟ್ಟಿನಲ್ಲಿ ಕೇವಲ 25 ಲಕ್ಷ ರೂಪಾಯಿಗಳನ್ನು ರಸ್ತೆಗಳ ದುರಸ್ತಿಗೆ ಇಟ್ಟಿದ್ದೀರಿ. ಅದು ಸಾಲದು. ನಮ್ಮ ರಾಜ್ಯದಲ್ಲಿ 14 ಕಬ್ಬಿನ ಫ್ಯಾಕ್ಟರಿಗಳು ಇವೆ. ಪ್ರತಿಯೊಂದು ಫ್ಯಾಕ್ಟರಿಗೂ 3 ಲಕ್ಷ ರೂಪಾಯಿ ಇಟ್ಟರೂ ಸಾಲದು. ಕನಿಷ್ಟ ಪಕ್ಷ ಇಲ್ಲಿಯ ರಸ್ತೆಗಳ ರಿಪೇರಿಗಾಗಿ ಪ್ರತಿವರ್ಷವೂ 52 ಲಕ್ಷ ರೂಪಾಯಿಗಳನ್ನು ಇಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟಲ್ಲದೆ ಕಬ್ಬಿನ ಉತ್ಪಾದನೆ ಬಗ್ಗೆ ನಮ್ಮ ರಾಜ್ಯ ಸರ್ಕಾರದವರು ಯಾವುದೇ ರೀತಿಯ ಸರಿಯಾದ ಒಂದು ವ್ಯವಸ್ಥೆ ಮಾಡಿಲ್ಲ. ಅದೇ ರೀತಿ ಲೋಕಸಭಾ ಎಸ್ಟಿಮೇಟ್ ಕಮಿಟಿಯವರು ಸಹ ಅಭಿಪ್ರಾಯಪಟ್ಟಿದ್ದಾರೆ ಸ್ಟೇಟ್ ಅಗ್ರಿ

ಕಲ್ಚರ್ ಮಿನಿಸ್ಟರ್ ಅವರು ಕೂಡ ಲೋಕಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಡುತ್ತಾ, ಷುಗರ್ ಕೇನ್ ಪರ್ಚೇಸ್ ಟ್ಯಾಕ್ಸನಲ್ಲಿ ಅರ್ಧಭಾಗವನ್ನು ನಮ್ಮ ಪ್ರದೇಶದಲ್ಲಿ ಕಬ್ಬು ಉತ್ಪಾದನೆ ಹೆಚ್ಚಿಸಲು ಉಪಯೋಗಮಾಡಬೇಕೆಂದು ರಾಜ್ಯ ಸರ್ಕಾರಕ್ಕೆ ಆದೇಶ ಕೊಟ್ಟಿದ್ದಾರೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಈ ಒಂದು ದೃಷ್ಟಿಯಿಂದ ನಾನು ತಮ್ಮಲ್ಲಿ ಪುನಃ ಅರಿಕೆಮಾಡಿಕೊಳ್ಳುವುದೇನೆಂದರೆ ಸಾಧ್ಯವಾದಷ್ಟುಮಟ್ಟಿಗೆ ಪರ್ಚೇಸ್ ಟ್ಯಾಕ್ಸನ್ನು ಅರ್ಧ ಭಾಗ ಕಬ್ಬು ಉತ್ಪಾದನೆ ಹೆಚ್ಚಿಸಲು ಉಪಯೋಗಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ಖಾಸಗಿ ಫ್ಯಾಕ್ಟರಿ ಇರುವ ಕಡೆ ರೈತರು ತೊಂದರೆಗಳನ್ನು ಅನುಭವಿಸುವ ಪ್ರಸಂಗಗಳನ್ನು ಕಣ್ಣಾರೆ ನೋಡಿದ್ದೇನೆ. ಹಿರಿಯರಾದ ಡಾ. ನಾಗನಗೌಡ ಅವರು ಎಂ.ಎಲ್.ಎ. ಆಗಿರುವ ಪರ್ಯಂತ ಷುಗರ್ ಕೇನ್ ಸಂಬಂಧಿಸಿದ ಬಿಲ್ ಪಾಸ್ ಮಾಡುವುದಕ್ಕೆ ಪ್ರಯತ್ನಪಟ್ಟರು. ದುರ್ದೈವದ ಸಂಗತಿ ಎಂದರೆ ಇವತ್ತಿನ ದಿವಸ ಬಿಲ್‌ಪಾಸ್ ಆಗದೆ ಇದೇ ರೀತಿ ಉಳಿದಿದೆ. ಈಗಿರತಕ್ಕಂತಹ ಬಿಲ್ ಮುಖ್ಯವಾಗಿ ಫ್ಯಾಕ್ಟರಿ ಕೊಳ್ಳುವ ಕಬ್ಬನ್ನು ತೂಕ ಮಾಡಿ ರೈತರಿಗೆ ಕೊಡುವಾಗ ಸಕಾಲದಲ್ಲಿ ಕೊಡುವ ಬಗ್ಗೆ ಸರ್ಕಾರದ ಹತೋಟಿ, ಕಬ್ಬಿನಲ್ಲಿ ಸಕ್ಕರೆ ಪ್ರಮಾಣದಲ್ಲಿ ಇಳುವರಿ ಬಗ್ಗೆ ಮೇಲ್ವಿಚಾರಣೆ ಮುಂತಾದ ಅಂಶಗಳು ಈ ಬಿಲ್‌ನಲ್ಲಿ ಸೇರಿರುವುದರಿಂದ ಈ ಒಂದು ಬಿಲ್ಲನ್ನು ಆದಷ್ಟು ಬೇಗನೆ ಪಾಸು ಮಾಡಿ ಜಾರಿಗೆ ತರಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇವೊತ್ತಿನದಿವಸ, ತಮ್ಮ ಒಂದು ಬಡ್ಜೆಟ್ಟಿನಲ್ಲಿ ಕಂಟ್ರ್ಯಾಕ್ಟ್ ಕ್ಯಾರೇಜ್‌ಸ್ ಮೇಲೆ ಟ್ಯಾಕ್ಸನ್ನು 35 ರಿಂದ 100 ರೂಪಾಯಿಗಳವೆರೆಗೆ ಏರಿಸಿದ್ದೀರಿ. ಇದರ ಬಗ್ಗೆ ನನ್ನ ಅಭ್ಯಂತರವಿಲ್ಲ. ಆದರೆ ಈ ಸಂಬಂಧದಲ್ಲಿ ಸರ್ಕಾರದ ಸ್ಪಷ್ಟವಾದ ನೀತಿ ಏನು ಎಂಬುದನ್ನು ನಾನು ಕೇಳಬಯಸುತ್ತೇನೆ. ಈ ಟ್ಯಾಕ್ಸ್ ಏರಿಸಿದ್ದರಿಂದ ಕಾಂಟ್ರಾಕ್ಟ್ ಕ್ಯಾರೇಜಿನ ಹೆಚ್ಚು ಆಗುವ ಸಂಭವ ಜಾಸ್ತಿಯಾಗಿದೆ. ಇದನ್ನು ಇಂಡೈರೆಕ್ಟ್ ಆಗಿ ಲೀಗಲೈಸ್ ಮಾಡುತ್ತಿದ್ದೀರಿ. ಈ ದಿವಸ ಅನೇಕ ಸದಸ್ಯರು ಇದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರೂ ಸರ್ಕಾರದಿಂದ ಸೂಕ್ತ ಉತ್ತರ ಬರುತ್ತಾ ಇಲ್ಲ. ಕಾಂಟ್ರ್ಯಾಕ್ಟ್ ಕ್ಯಾರೇಜಸ' ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಹೆಚ್ಚು ಆದಾಯ ಬರುವ ರೀತಿಯಲ್ಲಿ ಬಸ್ ಓಡಿಸುವುದಕ್ಕೆ ಅವಕಾಶ ಮಾಡಿಕೊಡಿ ಇಲ್ಲದೆ ಹೋದಲ್ಲಿ ಒಂದು ಪರಿಹಾರವನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಅದೇನೆಂದರೆ ಇವೊತ್ತಿನ ದಿವಸ ನಮ್ಮ ರಾಜ್ಯದ ಅನೇಕ ಭಾಗಗಳಲ್ಲಿ ಓಡಾಡುತ್ತಿರುವ ಕಾಂಟ್ರಾಕ್ಟ್ ಗಾಡಿಗಳನ್ನು ಸಹ ರಾಷ್ಟ್ರೀಕರಣ ಮಾಡುವುದಕ್ಕೆ ಈಗಿರುವ ಆಕ್ಟ್‌ನಲ್ಲಿಯೇ ಅವಕಾಶವಿರುವುದರಿಂದ, ಆ ಆಕ್ಟನ್ನು ಉಪಯೋಗಿಸಿಕೊಂಡು ರಾಷ್ಟ್ರೀಕರಣ ಮಾಡಿಬಿಟ್ಟರೆ ಈ ಕಾಂಟ್ರಾಕ್ಟ್ ಗಾಡಿಗಳ ಹಾವಳಿ ತಪ್ಪುತ್ತದೆ ಮತ್ತು ನಮ್ಮ ರಾಜ್ಯ ಸರ್ಕಾರಕ್ಕೂ ಹೆಚ್ಚಿನ ಆದಾಯ ಬರುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಬಿಟ್ಟು ಈ ಕಾಂಟ್ರಾಕ್ಟ್ ಗಾಡಿಗಳಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರಬೇಕೆನ್ನುವುದು ಸರ್ಕಾರದ ಧೋರಣೆಯಾಗಿದ್ದರೆ. ಎಲ್ಲ ಕಡೆಯೂ ಅವುಗಳನ್ನು ಓಡಾಡುವುದಕ್ಕೆ ಅನುಮತಿ ಕೊಡಿ. ಒಟ್ಟಿನಲ್ಲಿ ಕಾಂಟ್ರಾಕ್ಟ್ ಗಾಡಿಗಳ ಬಗ್ಗೆ ಸರ್ಕಾರದ ಧೋರಣೆ ಏನು ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕಾಂಟ್ರಾಕ್ಟ್ ಗಾಡಿಗಳಿಗೆ ತೆರಿಗೆ ಹೆಚ್ಚು ಮಾಡಿರುವಂತೆ ಸರಕು ವಾಹನಗಳ ಸಂಬಂಧದಲ್ಲಿ ಪ್ರಯಾಣಿಕರ ಮತ್ತು ಸರಕಿನ ಮೇಲೆ ತೆರಿಗೆ ವಿಧಿಸುವ ಶಾಸನದ ಮೇರೆಗೆ ವಿಧಿಸುವ ಕಾಂಪೊಸಿಷನ್ ದರವನ್ನು ಒಂದು ತ್ರಿಮಾಸಕ್ಕೆ 112.50 ರೂಪಾಯಿನಿಂದ 150 ರೂಪಾಯಿಗೆ ಹೆಚ್ಚಿಸಿದ್ದೀರಿ. ಈಗಾಗಲೇ ಲಾರಿಯವರು 600 ರೂಪಾಯಿಗಳಿಂದ 800 ರೂಪಾಯಿಗಳವರೆಗೆ ತೆರಿಗೆ ಕೊಡುತ್ತಿರುವಾಗ, ಅದರ ಮೇಲೆ ಈ ಒಂದು ಟಿ. ಪಿ. ಜಿ. ಟ್ಯಾಕ್ಸನ್ನು ಹೆಚ್ಚು ಮಾಡಿರುವುದು ಸರಿಯಲ್ಲ. ಇದನ್ನು ಮತ್ತೊಮ್ಮೆ ಪುನರ್‌ವಿಮರ್ಶೆ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಇದಕ್ಕೆ ಒಂದು ಉದಾಹರಣೆ ಕೊಡುವುದಾದರೆ, ನಮ್ಮ ಕಡೆ ಒಂದು ವಾಡಿಕೆ ಮಾತಿದೆ, ಒಬ್ಬ ಮನುಷ್ಯನನ್ನು ಹಾಳು ಮಾಡಬೇಕಾದರೆ ಆತನಿಗೆ ಒಂದು ಲಾರಿ ಕೊಡಿಸಬೇಕು ಅಥವಾ ಆತನನ್ನು ಚುನಾವಣೆಗೆ ನಿಲ್ಲಿಸಬೇಕು ಎಂಬುದಾಗಿ. ಅದರಂತೆ ಲಾರಿ ನಡೆಸುವವರಿಗೆ ಅನೇಕ ಕಷ್ಟಗಳಿರುವುದರಿಂದ ಈಗ ಹೆಚ್ಚು ಮಾಡಿರುವ ಕಾಂಪೊಸಿಷನ್ ದರವನ್ನು ಪುನರ್ವಿಮರ್ಶೆ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಮುಖ್ಯವಾಗಿ ಲಾರಿ ಚಾಸೀಸ್, ಕಾಂಪೊನೆಂಟ್ಸ್ ಅಂಡ್ ಪಾರ್ಟ್ಸ್ ಆಫ್ ಮೋಟಾರ್ ವೆಹಿಕಲ್ಸ್ ಬಗ್ಗೆ ಇರುವ ಅಂತರವೇನು ಎಂಬುದು ಗೊತ್ತಾಗಲಿಲ್ಲ. ಇದರ ಬಗ್ಗೆ ಒಂದು ಪಟ್ಟಿಯನ್ನು ತಯಾರು ಮಾಡಿ ಕೊಟ್ಟರೆ, ಅದರಿಂದ ಜನರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Smt. SUMATI BALACHANDRA MADIMAN (Dharwar Rural).—Madam Speaker, at the outset I sincerely congratulate the Hon. Finance Minister for presenting before the House, as promised, a more purposeful budget which ensures development with social justice.

I will first say a few words on the Rural Communications. To implement the Rural Communications Programme successfully, I suggest that the P.W.D. takes up the road works. It is not possible for the Taluk Development Boards to take up this work due to paucity of funds. The T.D.B. should take the responsibility of maintaining the roads. In many taluks there are important roads over which the past Government has taken more than 14 years to take a decision on taking up the work, as a result of which even today proper roads do not exist. The people have to walk miles to reach a hospital and a school. This has left many villages in the condition in which they were 25 years ago. There is no progress of any kind at all. This important basic necessity has been ignored so far. But now I am happy to see that the Minister for Finance has with deep forethought suggested that to ensure that funds are properly co-ordinated and utilised priorities will have to be carefully drawn up. Only by planning carefully, we will be able to meet the demands of the people.

Regarding provision of drinking water facilities, I have observed that only when it is brought to the notice of the Government that there is scarcity of water and people agitate that the fast boring rig is rushed to the place and after drilling bore wells in a few villages it is rushed to a neighbouring taluk. This creates discontent in the people, as they do not realise the urgency of having drinking water wells in other places as their problems are important to them. The drought or scarcity of water is an annual feature. So by now I am sure the concerned departments will know the affected areas. Therefore, the scheme of drilling bore wells and sinking wells should be taken up throughout the year by which the purpose of providing drinkiag water to all the villages will be achieved. I am glad that seven more fast boring rigs will be available from the UNICEF. This will help us make the scheme a success.

In the field of education no mention has been made about Pre-primary Education. Everyone is aware that the first five years of a child's life are the most important so much so that further development depends on how the child is brought up in the tender age. Therefore, the Government should pay attention and give serious thought to this important aspect by which many a problem will be solved.

I will say a few words about the housing schemes for Scheduled Castes and Scheduled Tribes. Advancing loans to the Harijans and Girijans by the Housing Corporation is a very good scheme. But to make this scheme a success, instead of giving Harijans and Girijans loans, houses should be built for them and by way of monthly rent the amount spent should be collected. Because it is impossible for those people to pay back the loans by instalments as they being labourers it is

difficult for them to save money. This being the case, in many places these loans have not been repaid and this has deprived other people of this loan and they are disgruntled and unhappy and complain of injustice. There are also cases where the money has been misused, where the money has not reached the concerned person at all. The timber and other materials are sold and somebody else has made money out of it. So, to avoid the misuse of money, I strongly feel that instead of giving loans, houses should be built for the Harijans and Girijans and the amount should be collected by way of rent. Only then we will be able to succeed in this project.

I thank you, Madam, for alloting me some time to speak a few words.

† ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, 1972–73 ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಮಾನ್ಯ ಆರ್ಥಿಕ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿದ್ದಾರೆ, ಅದರಲ್ಲಿ ಅನೇಕ ವಿಚಾರಗಳು ಶ್ಲಾಘನೀಯವಾದವುಗಳಾಗಿದ್ದರೆ, ಮತ್ತೆ ಕೆಲವು ವಿಚಾರಗಳು ಸಮಾಜವಾದಕ್ಕೆ ದೂರವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಅವರ ಸರ್ಕಾರದವರು ಕೇಂದ್ರದಲ್ಲಿ ಪ್ರಯತ್ನ ಮಾಡಿ ಕಾಳೀ ನದಿ ಯೋಜನೆಗೆ ಪೂರ್ಣ ಸಹಾಯವನ್ನು ಪಡೆದುಕೊಂಡಿರುವುದು ಕನ್ನಡ ಕುಲಕೋಟಿಗೆ ಹೆಮ್ಮೆಯ ಸಂಗತಿಯಾಗಿದೆ. ಅದಕ್ಕಾಗಿ ನಾನು ಕನ್ನಡ ಕುಲಕೋಟಿಯ ಪರವಾಗಿ ಧನ್ಯವಾದಗಳನ್ನು ಮಾನ್ಯ ಮುಖ್ಯ ಮಂತ್ರಿಗೆ ಅರ್ಪಿಸುತ್ತೇನೆ. ಈ ಯೋಜನೆಯ ಪೂರ್ಣ ಅನುಕೂಲ ನಮ್ಮ ಕರ್ನಾಟಕ ಜನತೆಗೇ ಆಗಬೇಕು ಮತ್ತು ಸದ್ವಿನಿಯೋಗವಾಗಬೇಕು. ಆ ರೀತಿ ಮಾಡುತ್ತಾರೆಂಬ ಆಶೆಯನ್ನು ನಾನು ಇಟ್ಟುಕೊಂಡಿದ್ದೇನೆ.

ಮಾನ್ಯ ಆರ್ಥಿಕ ಮಂತ್ರಿಗಳು ರೈತರ ಮೇಲೆ ಏನು ಒಂದು ನೀರಿನ ದರವನ್ನು ಹೆಚ್ಚು ಮಾಡಿದ್ದಾರೆ ಅದು ಬಹಳ ಶೋಚನೀಯವಾದ ವಿಚಾರವೆಂದು ಹೇಳುತ್ತೇನೆ. ಈಗಾಗಲೇ ರೈತಾಪಿ ಜನ ಅನೇಕ ರೀತಿಯ ತೆರಿಗೆಗಳಿಂದ ಕುಗ್ಗಿಹೋಗಿದ್ದಾರೆ. ಈ ತೆರಿಗೆಗಳ ಜೊತೆಗೆ ನೀರಿನ ದರವನ್ನು ಹೆಚ್ಚು ಮಾಡಿದ್ದು ಸರಿಯಲ್ಲ. ಈ ನೀರಿನ ದರವನ್ನು ಕಡಿಮೆ ಮಾಡಿ, ಅದರಿಂದ ಆಗತಕ್ಕ ನಷ್ಟವನ್ನು ಭರ್ತಿಮಾಡಿಕೊಳ್ಳುವುದಕ್ಕೆ ಅನೇಕ ಮಾರ್ಗಗಳಿವೆ. ಮುಖ್ಯವಾಗಿ ಇಂದು ಕಮರ್ಷಿಯಲ್ ಟ್ಯಾಕ್ಸ್ ಮತ್ತು ಸೇಲ್ಸ್ ಟ್ಯಾಕ್ಸ್ ಸರಿಯಾಗಿ ವಸೂಲಿಯಾಗುತ್ತಿಲ್ಲ. ವರ್ತಕರು ಸಹ ಸರಿಯಾದ ಲೆಕ್ಕ ಕೊಡದೆ ಕದಿಯುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ವರ್ತಕರ ಮೇಲೆ ಸರಿಯಾದ ಕ್ರಮ ತೆಗೆದುಕೊಂಡರೆ ಮತ್ತು ಅಧಿಕಾರಿಗಳು ಕೂಡ ಪ್ರಾಮಾಣಿಕವಾಗಿ ವಸೂಲಿ ಮಾಡಿದ್ದೇ ಆದರೆ ಇನ್ನೂ ಹೆಚ್ಚಿನ ವರಮಾನ ಬರುತ್ತದೆ. ಈ ವರಮಾನದಿಂದ ವಾಟರ್ ರೇಟನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಮಾನ್ಯ ಆರ್ಥಿಕ ಸಚಿವರಿಗೆ ತಿಳಿಸಬಯಸುತ್ತೇನೆ.

ಕುಟುಂಬ ಯೋಜನೆ ಬಗ್ಗೆ ಹೇಳುವುದಾದರೆ, ಇಂದು ಫಲವತ್ತಾದ ಭೂಮಿಯನ್ನು ಕೈಗಾರಿಕೆಗಳಿಗಾಗಿ ಸ್ವಾಧೀನಪಡಿಸಿಕೊಳ್ಳುತ್ತಿರುವುದರಿಂದ, ಭೂಮಿಯ ವಿಸ್ತೀರ್ಣ ಕಡಿಮೆಯಾಗುತ್ತಿದೆ, ಆದರೆ ಜನಸಂಖ್ಯೆಯ ಪ್ರಮಾಣ ಹೆಚ್ಚುತ್ತಿದೆ. ಈ ಕುಟುಂಬ ಯೋಜನೆ ಎಂಬುದು ಎಲ್ಲ ಜನಾಂಗಕ್ಕೂ ಒಂದೇ ರೀತಿಯಲ್ಲಿ ಅನ್ವಯವಾಗುತ್ತಿಲ್ಲ. ಮುಖ್ಯವಾಗಿ ಹಿಂದುಗಳಿಗೆ ಈ ಯೋಜನೆ ಹೆಚ್ಚಾಗಿ ಅನ್ವಯವಾಗುತ್ತಿದೆ. ಬೇರೆ ಜನಾಂಗದಲ್ಲಿ ಒಬ್ಬರು 7 ಜನರನ್ನು ಮದುವೆಯಾಗುವುದಕ್ಕೆ ಅವಕಾಶವಿದ್ದರೆ, ಹಿಂದುಗಳಲ್ಲಿ ಒಬ್ಬರು ಒಬ್ಬರನ್ನೇ ಮದುವೆಯಾಗುವುದಕ್ಕೆ ಅವಕಾಶವಿದೆ. ಈ ಕಾರಣದಿಂದ ಹಿಂದುಗಳ ಸಂಖ್ಯೆ ಕಡಿಮೆಯಾಗುತ್ತಿದ್ದರೆ, ಬೇರೆ ಜನಾಂಗಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆದಕಾರಣ ಕುಟುಂಬ ಯೋಜನೆಯನ್ನು ಎಲ್ಲ ಜನಾಂಗದವರಿಗೂ ಅನ್ವಯ ಮಾಡಬೇಕು. ಇಲ್ಲದಿದ್ದರೆ ಹಿಂದುಗಳು ಹಿಂದಿನಿಂದ ಏನು ಒಂದು ಸಂಪ್ರದಾಯ ಅನುಸರಿಸಿಕೊಂಡು ಬಂದಿದ್ದಾರೆ ಅದಕ್ಕೆ ಗಂಡಾಂತರ ಬರಬಹುದೆಂದು ಎಲ್ಲರಲ್ಲಿಯೂ ಭಯ ಮೂಡಿದೆ.

ಆದುದರಿಂದ ಈ ಒಂದು ಮಿತ ಸಂತಾನ ಯೋಜನೆಯನ್ನು ಜಾರಿಗೆ ತರಬೇಕು. ಕೆಲವು ವರ್ಗದವರು ಇದನ್ನು ಉಪಯೋಗಿಸಿಕೊಂಡಿಲ್ಲ. ಹಿಂದೂಗಳಲ್ಲದವರು ಇದನ್ನು ಆಚರಣೆಗೆ ತಂದಿಲ್ಲ. ಆದುದರಿಂದ ದಿನೇ ದಿನೇ ಬೆಳೆಯುವ ಜನಸಂಖ್ಯೆಯನ್ನು ತಡೆಗಟ್ಟುವುದಕ್ಕಾಗಿ ಎಲ್ಲ ಕೋಮಿನವರಿಗೂ ಅನ್ವಯಿಸುವ ಹಾಗೆ ಈ ಒಂದು ಯೋಜನೆಯನ್ನು ಕಡ್ಡಾಯವಾಗಿ ಜಾರಿಗೆ ತರಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಎನ್. ಬಸವಯ್ಯ)

ಇನ್ನು ನಮ್ಮ ತುಮಕೂರು ಜಿಲ್ಲೆಯಲ್ಲಿ ತೆಂಗಿನ ಬೆಳೆ ಜಾಸ್ತಿ ಬರುತ್ತಾ ಇವೆ. ಆದರೆ ರೇಟು ಕುಗ್ಗುತ್ತಾ ಇದೆ. ಸಿಲೋನ್‌ನಿಂದ ಕೊಬ್ಬರಿಯನ್ನು ಆಮದು ಮಾಡಿಕೊಳ್ಳುತ್ತಿದ್ದಾರೆ ಎಂದು ತಿಳಿದು ಬಂದಿದೆ. ಆದುದರಿಂದ ಇಲ್ಲಿ ಕೊಬ್ಬರಿ ರೇಟು ಕಡಿಮೆಯಾಗಿದೆ. ಇದರಿಂದ ಕೋಕನಟ್ ಡೆವಲಪ್‌ಮೆಂಟ್‌ಗೋಸ್ಕರ ಬ್ಯಾಂಕುಗಳಿಂದ ತೆಗೆದುಕೊಂಡ ಸಾಲವನ್ನು ತೀರಿಸುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಕಳೆದ ಸಾರಿ ಈ ಕೊಬ್ಬರಿ ರೇಟು ಕ್ವಿಂಟಾಲ್ ಒಂದಕ್ಕೆ 750 ರೂಪಾಯಿ ಇತ್ತು. ಈ ಸಾರಿ 300-350 ರೂಪಾಯಿಗೆ ಇಳಿದಿದೆ. ಇದರಿಂದ ಅವರು ತೆಗೆದುಕೊಂಡಿರತಕ್ಕಂಥ ಸಾಲವನ್ನು ತೀರಿಸುವುದಕ್ಕಾಗುವುದಿಲ್ಲ. ಆದುದರಿಂದ ನೀವು ಕೇಂದ್ರ ಸರ್ಕಾರದವರಿಗೆ ತಿಳಿಸಬೇಕಾದುದು ಏನೆಂದರೆ ಅವರು ಆಮದು ಮಾಡಿಕೊಳ್ಳತಕ್ಕಂಥ ವಸ್ತುಗಳನ್ನು ನಮ್ಮಲ್ಲಿ ಎಷ್ಟು ಉತ್ಪಾದನೆ ಆಗುತ್ತದೆಯೋ ಅಷ್ಟನ್ನು ನೋಡಿಕೊಂಡು ಸಾಲದ್ದನ್ನು ಆಮದು ಮಾಡಿಕೊಳ್ಳಬೇಕು ಎಂದು ತಿಳಿಸಬೇಕು. ಈಗ ರೈತನಿಗೆ ಹೋದ ಸಾರಿ ಹಾಗೆ ಒಂದು ಕ್ವಿಂಟಾಲ್‌ಗೆ 750 ರೂಪಾಯಿ ಬೆಲೆ ಸಿಕ್ಕದಿದ್ದರೂ ಕೂಡ ಒಂದು ಸ್ಟಾಂಡರ್ಡ್ ರೇಟು ಇಟ್ಟು, 500 ರೂಪಾಯಿನೋ 600 ರೂಪಾಯಿನೋ ಮಿನಿಮಮ್ ರೇಟು ಇಟ್ಟು ಮಾಡಲಿ. ಅವನಿಗೆ ವಿಪರೀತ ಕಡಿಮೆ ಆದರೆ ಈ ವ್ಯವಸಾಯದಿಂದ ತುಂಬಾ ನಷ್ಟವಾಗುತ್ತದೆ. ಒಬ್ಬೊಬ್ಬರಿಗೆ 2-3 ಎಕರೆ ಇದ್ದಂಥಾವರಿಗೆ ಈವೊತ್ತಿನ ದಿವಸ ಈ ರೀತಿ ಕಡಿಮೆ ರೇಟು ಇದ್ದರೆ ಆತನು ತನ್ನ ಜೀವನವನ್ನು ನಡೆಸುವುದಕ್ಕಾಗುವುದಿಲ್ಲ ಮತ್ತು ಅವನು ಈ ಕೋಕನಟ್ ಡೆವಲಪ್‌ಮೆಂಟ್‌ಗಾಗಿ ತೆಗೆದುಕೊಂಡಂಥಾ ಸಾಲವನ್ನು ಕೂಡ ತೀರಿಸುವುದಕ್ಕಾಗುವುದಿಲ್ಲ. ಆದುದರಿಂದ ಇದರ ಬಗ್ಗೆ ಒಂದು ಕ್ರಮ ತೆಗೆದುಕೊಳ್ಳಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಈಗ ನಮ್ಮ ರಾಜ್ಯದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ರಾ ಮೆಟೀರಿಯಲ್ಸ್ ಸಿಕ್ಕುತ್ತಾ ಇದೆ. ಈಗ ಒಂದು ಉದಾಹರಣೆ ಹೇಳುವುದಾದರೆ ನನ್ನ ಕ್ಷೇತ್ರವಾದ ಚಿಕ್ಕನಾಯಕನಹಳ್ಳಿಯಲ್ಲಿ ಮ್ಯಾಂಗನೀಸ್ ಓರ್ ಅಥವಾ ಐರನ್ ಓರ್‌ಗೆ ಹೇರಳವಾಗಿ ರಾ ಮೆಟೀರಿಯಲ್ಸ್ ಸಿಕ್ಕುವುದರಿಂದ ಅಲ್ಲಿ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಿದರೆ ಅನ್‌ಎಂಪ್ಲಾಯ್‌ಮೆಂಟ್ ಕೂಡ ಪರಿಹಾರವಾಗುತ್ತದೆ. ಆದುದರಿಂದ ಈ ಅವಕಾಶವನ್ನು ಕಲ್ಪಿಸಿಕೊಂಡು ಯಾವುದಾದರೂ ಒಂದು ಕೈಗಾರಿಕೆಯನ್ನು ನನ್ನ ಕ್ಷೇತ್ರದಲ್ಲಿ ಸ್ಥಾಪನೆ ಮಾಡಬೇಕು ಎಂದು ತಿಳಿಸುತ್ತೇನೆ. ಅಲ್ಲದೆ ಅಯಾಯ ತಾಲ್ಲೂಕ್ ಮಟ್ಟದಲ್ಲಿ ಯಾವ ಯಾವ ಮೆಟೀರಿಯಲ್ಸ್ ಸಿಕ್ಕುತ್ತದೋ ಅಂಥಾ ಕಡೆ ಅದಕ್ಕೆ ಸಂಬಂಧಪಟ್ಟ ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕು ಎಂದು ತಮ್ಮ ಗಮನಕ್ಕೆ ತರುತ್ತೇನೆ.

ಇನ್ನು ಎಜುಕೇಷನ್ ಬಗ್ಗೆ ಹೇಳುವುದಾದರೆ ಪ್ರೀಯೂನಿವರ್ಸಿಟಿ ಬೋರ್ಡ್‌ನವರು ಎಲ್ಲೆಲ್ಲಿ ಹೈಯ್ಯರ್ ಸೆಕೆಂಡರಿ ಸ್ಕೂಲುಗಳು ಇವೆಯೋ ಅಲ್ಲಲ್ಲಿ ಜೂನಿಯರ್ ಕಾಲೇಜುಗಳನ್ನು ಸ್ಥಾಪಿಸುತ್ತಿದ್ದಾರೆ. ಕೆಲವು ಕಡೆ ಹಾಗೆ ಸ್ಥಾಪಿಸುವುದಕ್ಕೆ ಗಮನ ಕೊಟ್ಟಿಲ್ಲ. ನನ್ನ ತಾಲ್ಲೂಕಿನಲ್ಲಿ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ನಡೆಸತಕ್ಕಂಥ 12 ಹೈಸ್ಕೂಲುಗಳು ಇವೆ. ಅವರು ಯಾರೂ ಜೂನಿಯರ್ ಕಾಲೇಜುಗಳನ್ನು ಸ್ಥಾಪನೆ ಮಾಡುವುದಕ್ಕೆ ಮುಂದೆ ಬಂದಿಲ್ಲ. ಎಲ್ಲೆಲ್ಲಿ ಹೈಯ್ಯರ್ ಸೆಕೆಂಡರಿ ಸ್ಕೂಲುಗಳು ಇವೆಯೋ ಅಲ್ಲಲ್ಲಿ ಜೂನಿಯರ್ ಕಾಲೇಜುಗಳನ್ನು ತೆರೆಯಬೇಕು ಎನ್ನುವ ಆದೇಶ ಇದೆ. ನನ್ನ ಕ್ಷೇತ್ರದಲ್ಲಿ ಖಾಸಗೀ ಹೈಸ್ಕೂಲ್ ನಡೆಸುತ್ತಾ ಇರುವ ಸಂಸ್ಥೆಯವರು ಜೂನಿಯರ್ ಕಾಲೇಜನ್ನು ತೆರೆಯುವುದಕ್ಕೆ ಮುಂದೆ ಬಂದಿಲ್ಲ. ಕಾರಣ ಅವರಿಗೆ ಲ್ಯಾಬೊರೇಟರಿ ಅಭಾವ, ಸಿಬ್ಬಂದಿ ಅಭಾವ ಇದೆ. ಅಂಥಾ ಕಡೆ ಸರ್ಕಾರದವರೇ ಜೂನಿಯರ್ ಕಾಲೇಜನ್ನು ನಡೆಸುವುದಕ್ಕೆ ಪ್ರಯತ್ನಿಸಬೇಕು ಎಂದು ಹೇಳುತ್ತೇನೆ.

ಇನ್ನು ಸಹಕಾರ ಇಲಾಖೆ ವಿಷಯ. ಈ ಸಹಕಾರಿ ಸಂಸ್ಥೆಯಿಂದ ರೈತರಿಗೆ ಹೆಚ್ಚು ಹೆಚ್ಚು ಸೌಲಭ್ಯಗಳನ್ನು ಕೊಡುವುದಕ್ಕೆ ಸರ್ಕಾರದವರು ಬೇಕಾದಷ್ಟು ಹಣ ಕೊಟ್ಟಿದ್ದಾರೆ. ಆದರೆ ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಲ್ಲ. ಇದಕ್ಕೆ ಯಾರು ಕಾರಣರು ಎಂದರೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ನೌಕರರೇ ಕಾರಣರು. ಇವರು ಸಹಕಾರಿ ಸೊಸೈಟಿಗಳಿಗೆ ಹಣ ಕೊಡಬೇಕಾದರೆ ರೈತರ ರಿಕಾರ್ಡ್‌ನ್ನೆಲ್ಲಾ ತರಿಸಿಕೊಂಡು ಸಂಬಂಧಪಟ್ಟ ಕಾಗದ ಪತ್ರಗಳನ್ನು ಬಂದೋಬಸ್ತು ಮಾಡಿಕೊಂಡು ಸಾಲ ಕೊಡುತ್ತಾರೆ. ಈ ರೀತಿಯಾಗಿ ಸಾಲ ಕೊಡುವ ಜವಾಬ್ದಾರಿಯನ್ನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನವರು ವಹಿಸಿಕೊಂಡ ಮೇಲೆ ಸಾಲ ವಸೂಲ್ಮಾಡುವ ಹೊಣೆಯನ್ನೂ ಕೂಡ ಅವರೇ ವಹಿಸಿಕೊಳ್ಳಬೇಕು. ಅದು ಬಿಟ್ಟು ಸಹಕಾರಿ ಸೊಸೈಟಿಯ ಮೇಲೆ ವಸೂಲ್ಮಾಡುವ ಜವಾಬ್ದಾರಿ ವಹಿಸಿದ್ದಾರೆ. ಅವರನ್ನು ನಿಮ್ಮಿಂದ ಸಾಲ ವಸೂಲಾಗುತ್ತಾ ಇರುವುದು 50 ಪರ್ಸೆಂಟ್‌ಗೆ ರೀಚ್ ಆಗಿಲ್ಲ, 70 ಪರ್ಸೆಂಟ್ ರೀಚ್ ಆಗುವ ಹಾಗೆ ಮಾಡಬೇಕು

ಎನ್ನುವ ಆದೇಶವನ್ನು ಹೊರಡಿಸಿದ್ದಾರೆ. ಆದುದರಿಂದ ನಾನು ಹೇಳುವುದು ಏನೆಂದರೆ ಇದಕ್ಕೆ ಬ್ಯಾಂಕ್ ನೌಕರರೇ ಕಾರಣರಾಗಿರುವುದರಿಂದ ಈ ವಸೂಲಾತಿ ಕ್ರಮಕ್ಕೂ ಕೂಡ ತಕ್ಕ ಕ್ರಮ ತೆಗೆದುಕೊಂಡು ಇಂಪ್ರೂ ಮಾಡುವುದಕ್ಕೆ ಗಮನ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಪಿ.ಡಬ್ಲ್ಯು.ಡಿ ಇಲಾಖೆ ವಿಚಾರ. ಈ ಇಲಾಖೆಯವರು ಕೆಲಸಗಳನ್ನು ತೆಗೆದುಕೊಳ್ಳ ಬೇಕಾದರೆ ಉದಾಸೀನ ಮಾಡುತ್ತಾರೆ. ಕಾರಣ 1966 ರಲ್ಲಿ ಎಸ್ಟಿಮೇಟ್ ಆದುದನ್ನು ಸರ್ಕಾರದ ಕನ್‌ಕರೆನ್ಸ್‌ಗೆ ಅಪ್ರೂವಲ್‌ಗೆ ಕಳುಹಿಸಿದ್ದೇವೆ ಅಂತ ಹೇಳಿ ಆ ಕೆಲಸವನ್ನು 1972ರ ಅಂತ್ಯದ ವೇಳೆಗೆ ತೆಗೆದುಕೊಂಡಿದ್ದಾರೆ. ಈ ರೀತಿ ನಿಧಾನವಾಗಿ ತೆಗೆದುಕೊಂಡರೆ ಮೆಟೀರಿಯಲ್ಸ್ ಕಾಸ್ಟ್ ಜಾಸ್ತಿಯಾಗಿ ಮತ್ತು ಬೇರೆ ರೇಟ್ ಕೊಡಬೇಕಾಗುತ್ತದೆ. ಇದರಿಂದ ಸರ್ಕಾರಕ್ಕೆ ಲಾಸ್ ಆಗುವುದಿಲ್ಲವೇ ? ಅಲ್ಲದೇ ಜನತೆಗೂ ಲಾಸ್ ಆಗುವುದಿಲ್ಲವೇ ? ಇದನ್ನು ಆಲೋಚನೆ ಮಾಡಿ.

ಇನ್ನೊಂದು ವಿಷಯ. ಪಿ.ಡಬ್ಲ್ಯು.ಡಿ.ಗೆ ಸಂಬಂಧಪಟ್ಟಂತೆ ಕೆಲವು ಜನ ರೈತರು ಕೆರೆಗಳ ಹತ್ತಿರ ಇರುವ ಭೂಮಿಯನ್ನು ಎನ್‌ಕ್ರೋಚ್ ಮಾಡಿಕೊಳ್ಳುತ್ತಾರೆ. ಮಾನ್ಯ ಅರ್ಥ ಸಚಿವರಲ್ಲಿ ನನ್ನ ಮನವಿ ಏನೆಂದರೆ ಪ್ರತಿಯೊಂದು ಡಿವಿಷನ್ನಿಗೂ ಒಬ್ಬೊಬ್ಬ ಸರ್ವೇಯರನ್ನು ನೇಮಿಸಿದರೆ ಪಿ.ಡಬ್ಲ್ಯು. ಡಿ.ಗೆ ಸೇರಿದ ಕೆರೆಗಳ ಹತ್ತಿರ ಇರುವ ಭೂಮಿಯನ್ನು ಎನ್‌ಕ್ರೋಚ್ ಮಾಡುವುದಕ್ಕಾಗುವುದಿಲ್ಲ. ಆ ಕೆರೆಗಳಲ್ಲಿರುವ ನೀರನ್ನು ಅಲ್ಲೇ ನಿಲ್ಲಿಸಿ ಎನ್‌ಕ್ರೋಚ್ ಮಾಡುವುದನ್ನು ತಪ್ಪಿಸುವುದಕ್ಕೋಸ್ಕರ ಪ್ರತಿ ಡಿವಿಷನ್ನಿಗೂ ಒಬ್ಬೊಬ್ಬ ಸರ್ವೇಯರನ್ನು ನೇಮಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಷಯ. ಈಗ ಏನೊಂದು ಈ ವಿದ್ಯಾಭ್ಯಾಸಕ್ಕೆ ಬಡ್ಜೆಟ್ ಅಲಾಟ್ ಮಾಡಿದ್ದೀರೋ ಅದು ಸಾಕಾದಷ್ಟು ಕಡಿಮೆಯಾಗಿದೆ. ಪ್ರಪ್ರಥಮವಾಗಿ ನಮ್ಮ ದೇಶ ರೈತ ಕುಟುಂಬಕ್ಕೆ ಸೇರಿದಂಥ ದೇಶ ಆದುದರಿಂದ ನನ್ನ ಸಲಹೆ ಏನೆಂದರೆ ಹೆಚ್ಚು ಹೆಚ್ಚು ವಿದ್ಯಾವಂತರು ಗಳನ್ನು ತಯಾರಿಸುವುದಕ್ಕೋಸ್ಕರ ಹೆಚ್ಚು ಹೆಚ್ಚು ಹಣವನ್ನು ಕೊಟ್ಟು ಅನೇಕ ಕಡೆ ಜೂನಿಯರ್ ಕಾಲೇಜುಗಳು ಕೊಟ್ಟಿಲ್ಲದೇ ಇರುವ ಕಡೆ ಸರ್ಕಾರದವರೇ ಜೂನಿಯರ್ ಕಾಲೇಜುಗಳನ್ನು ತೆರೆಯುವುದಕ್ಕೆ ಪ್ರೋತ್ಸಾಹ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಪಬ್ಲಿಕ್ ಸರ್ವಿಸ್ ಕಮೀಷನ್ನಿನ ವಿಚಾರ. ಈಗ ಅವರು ಏನೊಂದು ಎಕ್ಸಾಮಿನೇಷನ್ ನಡೆಸುತ್ತಾರೋ ಅದರಲ್ಲಿ ವೈವಾವೋಸ್ ಎಕ್ಸಾಮಿನೇಷನ್ ಕೂಡ ಇಟ್ಟಿದ್ದಾರೆ. ಆದರೆ ಈ ವೈವಾವೋಸ್‌ಗೆ ಇಟ್ಟಿರುವ ನಂಬರು ಕಡಿಮೆ. ನಮ್ಮ ದೇಶದ ರೈತಾಪಿ ಜನಗಳ ಮಕ್ಕಳು ರಿಟನ್ ಟೆಸ್ಟ್‌ನಲ್ಲೂ ಪಾಸಾಗುವುದು ಕಷ್ಟ. ಈ ವಿದ್ಯಾಭ್ಯಾಸಕ್ಕೆ ಅವನು ಹೆಚ್ಚಿನ ನಿಗಾ ಕೂಡ ಕೊಡು ವುದಿಲ್ಲ. ಏತಕ್ಕೆ ? ಅಲ್ಲಿಯ ಒಂದು ವಾತಾವರಣದಿಂದ ಈ ವಿದ್ಯಾಭ್ಯಾಸಕ್ಕೆ ಅವನು ಅಷ್ಟು ಹೆಚ್ಚು ನಿಗಾ ಕೊಡುವುದಿಲ್ಲ. ಆದುದರಿಂದ ನಾನು ಹೇಳುವುದು ಏನೆಂದರೆ ಈ ವೈವಾವೋಸ್ ಎಕ್ಸಾ ಮಿನೇಷನ್‌ಗೆ ಹೆಚ್ಚಿನ ನಂಬರು ಕೊಟ್ಟು ಪಾಸು ಮಾಡಿಸಬೇಕು. ಮತ್ತು ಈ ವೈವಾವೋಸ್‌ಗೆ ಇಟ್ಟಿರತಕ್ಕಂಥ 35 ನಂಬರು ಕಡಿಮೆ. ಅದನ್ನು 100 ಕ್ಕೆ ಏರಿಸಬೇಕು. ಇದರಿಂದ ಹಳ್ಳಿಗಳಿಂದ, ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕಂಥ ಮಕ್ಕಳಿಗೆ ಹೆಚ್ಚಿನ ಉಪಯೋಗವಾಗುತ್ತದೆ. ಇದನ್ನು ಮಾಡಬೇಕು ಎಂದು ಹೇಳುತ್ತೇನೆ. ಇಷ್ಟು ಹೇಳಿ ಈ ಸಂದರ್ಭದಲ್ಲಿ ನನಗೆ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷಿಣಿಯವರಿಗೆ ವಂದಿಸುತ್ತೇನೆ. ಅಲ್ಲದೆ ಈ ಆಯ ವ್ಯಯ ಪತ್ರವನ್ನು ಮಂಡಿಸಿರತಕ್ಕಂಥ ಶ್ರೀಮಾನ್ ಘೋರ್ಪಡೆಯವರು ಕರ್ನಾಟಕದ ಅನೇಕ ಭಾಗಗಳ ಜನಗಳಿಗೆ ಮೆಚ್ಚತಕ್ಕಂಥ ಅನೇಕ ವಿಚಾರಗಳನ್ನು ಈ ಬಡ್ಜೆಟ್‌ನಲ್ಲಿ ತಯಾರು ಮಾಡಿದ್ದಾರೆ. ಆದುದರಿಂದ ಅವರನ್ನು ಶ್ಲಾಘಿಸಿ ಮತ್ತೊಮ್ಮೆ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಸಿ. ಶೆಟ್ಟಾರ್ (ಹಾನಗಲ್).—ಮಾನ್ಯ ಅಧ್ಯಕ್ಷಿಣಿಯವರೇ, ಈವೊತ್ತಿನ ದಿವಸ ನಮ್ಮ ಸರ್ಕಾರದ ಅರ್ಥಮಂತ್ರಿಗಳು ಸಾದರುಪಡಿಸಿದ ಬಡ್ಜೆಟ್ಟನ್ನು ಅನುಮೋದಿಸುತ್ತಾ ಅದಕ್ಕೆ ಬೆಂಬಲಿಸುತ್ತೇನೆ. ಮುಖ್ಯವಾದ ವಿಷಯ ಮೆಚ್ಚತಕ್ಕಂಥ ವಿಷಯ ಏನೆಂದರೆ ನಮ್ಮ ಆರ್ಥಿಕ ಸಮತೋಲನವನ್ನು ಸರಿದೂಗಿಸಿಕೊಂಡು ಓವರ್‌ಡ್ರಾಫ್ಟ್‌ನಲ್ಲಿ ಹೆಚ್ಚಳ ಸಂಭವಿಸಿದಂತೆ ಅದನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದಾರೆ. ಇದನ್ನು ಪ್ರಶಂಸಿಸಬೇಕಾಗಿದೆ.

ಎರಡನೆಯದಾಗಿ ಹೋದ ಸಲ ಮಾರ್ಚ್ ತಿಂಗಳಿನಲ್ಲಿ ಇಂಟೀರಿಮ್ ಬಡ್ಜೆಟ್‌ನಲ್ಲಿ ಸುಮಾರು 35 ಕೋಟಿ ರೂಪಾಯಿಗಳ ಕೊರತೆಯನ್ನು ತೋರಿಸಿದ್ದಾರೆ. ಈಗ ಆ ಕೊರತೆಯನ್ನು ನೀಗಿಸಿ ಈವೊತ್ತಿನ ದಿವಸ $4\frac{1}{2}$ ಕೋಟಿ ರೂಪಾಯಿ ಕೊರತೆಗೆ ಇಳಿಸಿದ್ದಾರೆ. ಈ ಬಗ್ಗೆ ನಮಗೆ ಹಿಂದೆ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಎಷ್ಟರ ಮಟ್ಟಿಗೆ ಕೆಟ್ಟಿದೆ ಎಂದು ಶಂಕೆ ಮತ್ತು ಭೀತಿ ಹುಟ್ಟಿತ್ತೋ ಅದನ್ನು ನಮ್ಮ ಅರ್ಥ ಸಚಿವರು ಬಹಳ ಚಾಣಾಕ್ಷತನದಿಂದ ಮತ್ತು ಪ್ರಾಮಾಣಿಕವಾದ ರೀತಿಯಲ್ಲಿ, ನಿವಾರಿಸಿ 4.5 ಕೋಟಿ ರೂಪಾಯಿಗೆ ಇಳಿಸಿದ್ದಾರೆ.

(ಶ್ರೀ ಪಿ. ಸಿ. ಶೆಟ್ಟ್ಯಾರ್)

5-30 P.M.

ಅಷ್ಟೇ ಅಲ್ಲ ನಮ್ಮ ರಾಜ್ಯದ ಆರ್ಥಿಕ ತೊಂದರೆಯಲ್ಲಿ ಓವರ್‌ಡ್ರಾಫ್ಟ್ ಇರುವಂತಹ ಪರಿಸ್ಥಿತಿಯಲ್ಲಿ 1972-73 ನೇ ಸಾಲಿನ ವಾರ್ಷಿಕ ಯೋಜನೆಯ ವೆಚ್ಚವನ್ನು 76.28 ಕೋಟಿ ರೂಪಾಯಿಗಳಿಗೆ ಏರಿಸಿದ್ದಾರೆ. ಆದ್ದರಿಂದ ಈ ಬಗ್ಗೆ ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಕೃತಜ್ಞತೆಯನ್ನು ಸಲ್ಲಿಸಬೇಕಾಗಿದೆ. ಇನ್ನು ಬಹು ಮುಖ್ಯವಾದ ಕಾಳಿ ನದಿ ಯೋಜನೆ. ಈ ಯೋಜನೆಯನ್ನು ನಮ್ಮ ರಾಜ್ಯದಲ್ಲಿ ನಮ್ಮ ಹಣದಿಂದ ತೆಗೆದುಕೊಳ್ಳುವುದಕ್ಕೆ ಆರ್ಥಿಕ ಅವಕಾಶ ಇರಲಿಲ್ಲ. ಅದಕ್ಕಾಗಿ ಈ ಯೋಜನೆಯನ್ನು ಸಂಪೂರ್ಣವಾಗಿ ಕೇಂದ್ರ ಸರ್ಕಾರದವರೇ ವಹಿಸಿಕೊಳ್ಳುವಂತೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ಹಣಕಾಸಿನ ಮಂತ್ರಿಗಳು ಮಾಡಿದರು. ಅದಕ್ಕಾಗಿ ನಾನು ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿಕೊಂಡು ಬಂದಂತಹ ವಿಚಾರಗಳನ್ನು ಸರಿಯಾಗಿ ತಿಳಿದುಕೊಂಡು ಜನತೆಗೆ ಏನು ಮಾಡಬೇಕಾಗಿದೆ ಅವುಗಳ ಬಗ್ಗೆ ಪ್ರಾಮಾಣಿಕವಾದ ಕೆಲಸಗಳನ್ನು ಮಾಡಲು ನಮ್ಮ ಅರ್ಥಸಚಿವರು ಪ್ರಯತ್ನ ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಪ್ರಸಂಗದಲ್ಲಿ ನಾನು ಹೇಳಬೇಕಾದರೆ ನಮ್ಮ ದೇಶದ ಒಂದು ಸಮಸ್ಯೆ ಏನಿದೆ ಅದನ್ನು ತಿಳಿದುಕೊಂಡು ಅದನ್ನು ಬಗೆಹರಿಸಲು ಮಾನ್ಯ ಅರ್ಥ ಮಂತ್ರಿಗಳು ಹೆಚ್ಚಿನ ಒಂದು ಪ್ರಯತ್ನ ಮಾಡಿದ್ದಾರೆ. ಅವರು ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಇವೊತ್ತು ನಮ್ಮ ದೇಶದ ಸಮಸ್ಯೆಗಳು ಎಷ್ಟಿವೆ ಆ ಎಲ್ಲಾ ಸಮಸ್ಯೆಗಳನ್ನೂ ಬಗೆಹರಿಸಲು ಸಾಧ್ಯವಿಲ್ಲದೇ ಇದ್ದರೂ ಕೂಡ ಇಂಥಾ ಒಂದು ಕಠಿಣ ಪರಿಸ್ಥಿತಿಯಲ್ಲಿ ಎಲ್ಲಾ ಸಮಸ್ಯೆಗಳನ್ನೂ ನಾವು ಹಾಕಿಕೊಂಡಿರತಕ್ಕ ತತ್ವದ ತಳಹದಿಯ ಮೇಲೆ ಬಗೆಹರಿಸಲು ಪ್ರಯತ್ನ ಮಾಡಿದ್ದಾರೆ. ಈ ದೃಷ್ಟಿಯಿಂದ ನಾನು ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಮಾನ್ಯ ಆರ್ಥಿಕ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಮುಂಗಡ ಪತ್ರದಲ್ಲಿ ನಾನು ಚುನಾವಣೆಯ ಸಂದರ್ಭದಲ್ಲಿ ಏನು ಸಮಾಜವಾದವನ್ನು ಕಾರ್ಯಾಚರಣೆಗೆ ತರುತ್ತೇವೆಂದು ಹೇಳಿದ್ದೆವೋ ಆ ತಳಹದಿಯ ಮೇಲೆ ಸಮಸ್ಯೆಗಳನ್ನು ಬಗೆಹರಿಸತಕ್ಕಂಥಾ ವಿಷಯಗಳು ಇದರಲ್ಲಿ ಕೆಲವೊಂದು ಸನ್ನಿವೇಶದಲ್ಲಿ ಇಲ್ಲ ಎಂದು ಹೇಳಿದರೆ ಅವರು ತಪ್ಪು ತಿಳಿದುಕೊಳ್ಳಬಾರದು. ಈಗ ರೈತರ ಮೇಲೆ ಸರ್ಕಾರದವರು ನೀರಿನ ತೆರಿಗೆಯನ್ನು ಹಾಕಿದ್ದಾರೆ. ಭೂಕಂದಾಯ ಮತ್ತು ಈ ಬಾಬಿನಿಂದ ಸರ್ಕಾರಕ್ಕೆ ಎಷ್ಟು ಆದಾಯ ಬರುತ್ತದೆ ಎಂಬುದನ್ನು ಮುಂಗಡ ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿಲ್ಲ. ಆದರೆ ಕರ ಮಾತ್ರ ಹಾಕಿದ್ದಾರೆ. ಬತ್ತ ಮತ್ತು ಕಬ್ಬು ಬೆಳೆಯುವುದಕ್ಕೆ ನೀರಿನ ತೆರಿಗೆಯನ್ನು ಸರ್ಕಾರದವರು ಏನು ಹಾಕಿದ್ದಾರೆ ಈ ಹಣವನ್ನು ಮತ್ತು ಭೂಕಂದಾಯದಿಂದ ಬರತಕ್ಕ ಆದಾಯವನ್ನು ಬೇರೆ ರೀತಿಯಿಂದ ತೆಗೆದುಕೊಳ್ಳುವುದಕ್ಕೆ ಸಾಧ್ಯವಿತ್ತು. ಇವೊತ್ತು ನಮ್ಮ ದೇಶದಲ್ಲಿ ಶೇಕಡ 70 ಜನ ವ್ಯವಸಾಯವನ್ನು ಅವಲಂಬಿಸಿಕೊಂಡಿದ್ದಾರೆ. ಆದ್ದರಿಂದ ಈ ಕೃಷಿಕರಿಗೆ ಬೇಕಾದ ಸೌಲಭ್ಯವನ್ನು ಒದಗಿಸಿ ಅವರ ಆರ್ಥಿಕ ಸುಧಾರಣೆಯನ್ನು ಮಾಡದೇ ಹೋದರೆ ಯಾವ ಪ್ರಗತಿಯನ್ನು ನಾವು ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲ. ಈ ದೃಷ್ಟಿಯಿಂದ ಈ ಒಂದು ವ್ಯವಸಾಯದ ಮೇಲೆ ಸರ್ಕಾರದವರು ತೆರಿಗೆಯನ್ನು ಹಾಕಬಾರದಾಗಿತ್ತು ಎಂದು ನನ್ನ ಅಭಿಪ್ರಾಯ. ಸಮಾಜವಾದ ತತ್ವದ ತಳಹದಿಯ ಮೇಲೆ ಯಾವುದೇ ಕರವನ್ನು ಹಾಕುವುದಾದರೂ ಕೂಡ ಯಾರಿಗೆ ಕರವನ್ನು ಕೊಡುವುದಕ್ಕೆ ಸಾಮರ್ಥ್ಯ ಇದೆಯೋ ಅಂಥವರ ಮೇಲೆ ಬೇಕಾದರೆ ಕರವನ್ನು ಹಾಕಿ. ಆದರೆ ಈಗ ನೀರಿನ ಕರವನ್ನು ಹಾಕಿರುವಂತಹ ರೀತಿ ಸರಿಯಾಗಿಲ್ಲ, ಇದು ಸಮಾಜವಾದದ ತತ್ವಕ್ಕನುಗುಣವಾಗಿಲ್ಲ ಎಂದು ನಾನು ಈ ಸನ್ನಿವೇಶದಲ್ಲಿ ಹೇಳಬಯಸುತ್ತೇನೆ. ಉತ್ಪನ್ನದ ಮೇಲೆ ತೆರಿಗೆಯನ್ನು ಹಾಕಬಹುದು. ಈಗ ಇನ್‌ಕಂಟ್ಯಾಕ್ಸ್ ಮತ್ತಿತರ ಕರಗಳ ಆಕರಣೆ ಬೇರೆ ವ್ಯವಹಾರಗಳಲ್ಲಿ ಕೆಲವೊಂದು ಉತ್ಪನ್ನದ ಮೇಲೆ ತೆರಿಗೆಯನ್ನು ಹಾಕುತ್ತಿದ್ದಾರೆ. ಆ ಒಂದು ದೃಷ್ಟಿಯಿಂದ ನೋಡಿದರೆ ಇದು ಸರಿಯಲ್ಲ, ಎಷ್ಟು ಎಕರೆ ಸಾಗುವಾಡುತ್ತಿದ್ದಾರೆಯೋ ಆ ಒಂದು ಆಧಾರದ ಮೇಲೆ ಕರವನ್ನು ಹಾಕಬಾರದು. 5 ಸಾವಿರ ರೂಪಾಯಿಗಳಿಗಿಂತ ಹೆಚ್ಚು ಉತ್ಪತ್ತಿ ಯಾರಿಗೆ ಬೇಸಾಯದಿಂದ ಬರುತ್ತದೆಯೋ ಅವರಿಗೆ ಈ ತೆರಿಗೆಯನ್ನು ಹಾಕಿ ಅವರಿಂದ ವಾಟರ್‌ರೇಟ್ ಮಾತ್ರ ವಿಧಿಸಿರುವುದರಿಂದ ಬರತಕ್ಕ ಹಣವನ್ನು ಕೂಡಿಸಿಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. ಸಮಾಜವಾದದ ಕಾರ್ಯಾಚರಣೆಯನ್ನು ಜನ ನಂಬಿಕೊಂಡು ಕಾಲವನ್ನು ಕಳೆಯುತ್ತಿರುವಂಥಾ ಈ ಒಂದು ಪರಿಸ್ಥಿತಿಯಲ್ಲಿ ಎಕರೆವಾರು ನೀರಿನ ತೆರಿಗೆಯನ್ನು ಹಾಕಬಾರದು. ಈಗ ಹಾಕಿರತಕ್ಕ ನೀರಿನ ತೆರಿಗೆಯಿಂದ ಎಷ್ಟು ಹಣ ಬರುತ್ತದೆಯೋ ಅದನ್ನು ಸರ್ಕಾರದವರು ನಿಶ್ಚಿತ ಮಾಡಿ ಆ ಹಣವನ್ನು ಬೇಸಾಯದಲ್ಲಿ 5 ರೂಪಾಯಿಗಳಿಗಿಂತ

ಹೆಚ್ಚಿನ ಆದಾಯ ಬರುವ ಜನರ ಮೇಲೆ ಯಾವ ರೇಟಿನಲ್ಲಿ ತೆರಿಗೆಯನ್ನು ವಿಧಿಸಬೇಕೆಂಬುದನ್ನು ಯೋಚನೆ ಮಾಡಿ ಅದನ್ನು ವಿಧಿಸಬೇಕು ಎಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ ಉತ್ಪನ್ನದ ಮೇಲೆ ಕರ ಹಾಕುವುದಕ್ಕೆ ಸಾಧ್ಯವಿಲ್ಲ. ಇದು ವ್ಯವಹಾರಿಕವಾಗಿ ಆಗುವುದಿಲ್ಲ, ಇದರ ಲೆಕ್ಕಪತ್ರಗಳನ್ನು ಇಡುವುಧಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ವಿಚಾರ ಇದ್ದರೆ ಈ ಒಂದು ಕರವನ್ನು 'ಪ್ರಾಜೆಕ್ಟ್ ಏರಿಯಾಕ್ಕೆ ಮಾತ್ರ ಅನ್ವಯಿಸಬೇಕು. 12 ತಿಂಗಳ ನೀರು ಬೇಕು ಎಂದು ರೈತ ಅಪೇಕ್ಷೆ ಪಟ್ಟಾಗ,' ಅವನಿಗೆ ನೀರು ಸಿಕ್ಕುವಂತಹ ಪರಿಸ್ಥಿತಿ ಇದ್ದಾಗ ಮಾತ್ರ ಇದನ್ನು ಹಾಕಬೇಕು ಎಂದು ನಾನು ಹೇಳುತ್ತೇನೆ.

ಮಾರಾಟ ತೆರಿಗೆಯ ಬಗ್ಗೆ ಹೇಳಬೇಕಾದರೆ ಈ ವಿಷಯದಲ್ಲಿ ನಾನು ಬಹಳ ನೊಂದುಕೊಂಡು ಹೇಳಬೇಕಾಗಿದೆ. ಇವೊತ್ತು ಈ ಖಾತೆಯಲ್ಲಿರುವಷ್ಟು ಲಂಚ ಬೇರೆ ಯಾವ ಖಾತೆಯಲ್ಲಿಯೂ ಇಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಮಾನ್ಯ ಅರ್ಥ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಕಮರ್ಷಿಯಲ್ ಟ್ಯಾಕ್ಸ್ ಆಫೀಸರುಗಳು ಏನಿದ್ದಾರೆ ಅವರಿಗೆ ಪಗಾರ ಕೊಡಬೇಡಿ. ಏತಕ್ಕೆಂದರೆ ಸೇಲ್ಸ್ ಟ್ಯಾಕ್ಸ್‌ನಲ್ಲಿ ತುಂಬ ಅಪವ್ಯಯವಾಗುತ್ತಿದೆ. ಈ ಸಂದರ್ಭದಲ್ಲಿ ನಾನು ಸಲಹೆ ಮಾಡುವುದು ಏನೆಂದರೆ ಆಹಾರಶಾಖೆಯ ಮಂತ್ರಿಗಳು, ಸಹಕಾರ ಮಂತ್ರಿಗಳು, ಮತ್ತು ಅರ್ಥ ಮಂತ್ರಿಗಳು ಈ ಮೂರು ಮಂದಿಯೂ ಕೂಡಿಕೊಂಡು ಇವುತ್ತು ಅಗ್ರಿಕಲ್‌ಚರರ್ ಪ್ರೊಡ್ಯೂಜ್ ಮಾರಾಟದ ಬಗ್ಗೆ ಯಾವ ಯಾವ ನಿಯಮಗಳನ್ನು ಹಾಕಿಕೊಳ್ಳಬೇಕು ಎಂಬುದನ್ನು ಯೋಚನೆ ಮಾಡಿ ಮಾಡಬೇಕು ಎಂದು ನಾನು ಸೂಚನೆ ಮಾಡುತ್ತೇನೆ. ಇವೊತ್ತು ಲಕ್ಷಗಟ್ಟಲೆ ವ್ಯಾಪಾರಸ್ಥರು ರೈತರ ಹೆಸರಿನಲ್ಲಿ ಅಗ್ರಿಕಲ್‌ಚರಲ್ ಪ್ರೊಸೆಸ್ಡ್ ಮಾಲುಗಳನ್ನು ಮಾರಾಟ ಮಾಡುತ್ತಿದ್ದಾರೆ. ಇವೊತ್ತಿನ ದಿವಸ ಅಗ್ರಿಕಲ್‌ಚರ್ ಪ್ರೊಸೆಸ್ಡ್ ಗೂಡ್ಸ್ ಮಾರಬೇಕಾದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಪರ್ಮಿಷನ್ ತೆಗೆದುಕೊಂಡು, ಆ ಪರ್ಮಿಟ್ ಕೊಟ್ಟರೆ ಒಕ್ಕಲಿಗರು ಮಾರಾಟ ಮಾಡಬೇಕಾಗುತ್ತದೆ. ಅದನ್ನು ಅಧಿಕಾರಿಗಳಿಗೆ ಚೆಕ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಡಿಕ್ಲರೇಶನ್ ಆಫ್ ಸ್ಟಾಕ್‌ನ್ನು ಕಡ್ಡಾಯವಾಗಿ ಎಲ್ಲರೂ ಮಾಡಬೇಕೆಂದು ವಿಧಿಸಬೇಕು. ಆದರೆ ಎಲ್ಲಿಯಾದರೂ ಅನಿರೀಕ್ಷಿತವಾಗಿ ಅಧಿಕಾರಿಗಳು ರೈಡ್ ಮಾಡಿದಾಗ ವ್ಯಾಪಾರಿಯ ಹತ್ತಿರ ಡಿಕ್ಲೇರ್ ಮಾಡಿದ್ದಕ್ಕಿಂತ ಹೆಚ್ಚಿನ ಮಾಲುಗಳು ಇದ್ದರೆ ಅದನ್ನು ಸಂಪೂರ್ಣವಾಗಿ ಕನ್‌ಫಿಸ್ಕೇಟ್ ಮಾಡಬೇಕು ಮತ್ತು ಅದರಷ್ಟೇ ಪೆನಲ್ಟಿ ಅವರಿಗೆ ಹಾಕಬೇಕು. ಅಷ್ಟೇ ಅಲ್ಲದೆ ಅವರ ಮೇಲೆ ಕ್ರಿಮಿನಲ್ ಕೇಸ್ ಮಾಡಿ ಸಾರ್ವಜನಿಕ ಕ್ಷೇತ್ರದಲ್ಲಿ ಅಂಥವನನ್ನು ಡಿಸ್‌ಕ್ವಾಲಿಫೈ ಮಾಡಬೇಕೆಂದಾದರೆ ಮಾತ್ರ ಈ ಸೇಲ್ಸ್ ಟ್ಯಾಕ್ಸಾಗಲಿ ಅಥವಾ ಇತರ ತೆರಿಗೆಯಾಗಲಿ ಯಾವ ರೀತಿಯಲ್ಲಿ ಬರಬೇಕೋ ಆ ರೀತಿಯಲ್ಲಿ ಬರುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಈ ಅಧಿಕಾರಿಗಳು ಮತ್ತು ವ್ಯಾಪಾರಸ್ಥರು ನಮ್ಮ ದೇಶದ ಹಣವನ್ನು ಕೊಳ್ಳೆಹೊಡೆಯುತ್ತಾರೆ, ಎಂದು ಹೇಳಿದರೆ ತಪ್ಪಾಗಲಾರದು.

ಇನ್ನು ಲಂಚದ ಬಗ್ಗೆ ಬಹಳ ವಿಷಾದದಿಂದ ನಾನು ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಲಂಚ ಇರುವಷ್ಟು ಬೇರೆ ಯಾವ ದೇಶದಲ್ಲಿಯೂ ಇಲ್ಲ. ಇವತ್ತು ಇರುವ ಮಂತ್ರಿಮಂಡಲ ಇವತ್ತು ಆಡಳಿತದಲ್ಲಿರುವಂತಹ ಒಂದು ರೂಪಾಯಿ ಅಂಶದ ಲಂಚವನ್ನು 8 ಆಣೆಯಷ್ಟು ಆದರೂ ಕಡಿಮೆ ಮಾಡಿದರೆ ಇಡೀ ಮಂತ್ರಿಮಂಡಲದ ಫೋಟೋವನ್ನು ತೆಗೆದುಕೊಂಡು ಹೋಗಿ ದೇವರ ಹಾಗೆ ನಾನು ಪೂಜೆ ಮಾಡಲು ಸಿದ್ಧನಿದ್ದೇನೆ. ಆ ಒಂದು ಪರಿಸ್ಥಿತಿಗೆ ನಮ್ಮ ಆಡಳಿತದಲ್ಲಿ ಇರುವ ಲಂಚದ ಹಾವಳಿ ಬಂದು ನಿಂತಿದೆ. ಸರ್ಕಾರದವರು ಈ ಒಂದು ಹಾವಳಿಯನ್ನು ತಡೆಗಟ್ಟಲು ಯಾವ ಕ್ರಮವನ್ನೂ ಕೈಗೊಳ್ಳುತ್ತಾ ಇಲ್ಲ. ನಾನಾದರೂ ಇದರ ಬಗ್ಗೆ ಒಂದು ಸಲಹೆಯನ್ನು ಮಾಡುತ್ತೇನೆ. ಇದಕ್ಕೆ ಒಂದು ನಾನ್ ಅಫಿಷಿಯಲ್ಸ್ ಕಮಿಟಿ ಮಾಡಿ ಯಾರ್ಯಾರು ರಿಟೈಯರ್ಡ್ ಆಫೀಸರ್ಸ್ ಎಷ್ಟೆಷ್ಟು ಆಸ್ತಿಯನ್ನು ಇಟ್ಟುಕೊಂಡಿದ್ದಾರೆಂದು ಕಂಡುಹಿಡಿಯಬೇಕು. ಅದನ್ನು ಸರಿಯಾಗಿ ಪರಿಶೀಲಿಸಿ ಅನ್ ಅಕೌಂಟೆಡ್ ಎಂದು ಕಂಡಾಗ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಇರಬೇಕು. ಈಗ ಪ್ರತೀ 5 ವರ್ಷಕ್ಕೊಮ್ಮೆ ಅಸೆಟ್ಸ್ ಅಂಡ್ ಲೈಯಬಿಲಿಟೀಸನ್ನು ಮೇಲಾಧಿಕಾರಿಗಳಿಗೆ ಕೊಡುವಂತಹ ಪ್ರೊವಿಜನ್ ಇದೆ. ಅದನ್ನು ತೆಗೆದು ಅದಕ್ಕೋಸ್ಕರ ಒಂದು ಸ್ವತಂತ್ರ ಫೋರಂ ಮಾಡಿ, ಅದಕ್ಕೆ ಈ ಅಧಿಕಾರಿಗಳ ಅಸೆಟ್ಸ್ ಅಂಡ್ ಲೈಯಬಿಲಿಟೀಸ್ ಸ್ಟೇಟ್‌ಮೆಂಟ್ ಕೊಡುವ ಹಾಗೆ ಮಾಡಬೇಕು. ಒಬ್ಬ ಅಧಿಕಾರಿಯು ತನ್ನ ಮೇಲಧಿಕಾರಿಗೆ ಕೊಡುವ ಕ್ರಮವನ್ನು ತಪ್ಪಿಸಬೇಕು. ಹಾಗೆಯೇ ಅದರ ಒಂದು ಕಾಪಿಯನ್ನು ಇನಕಂ ಟ್ಯಾಕ್ಸ್ ಅಧಿಕಾರಿಗಳಿಗೆ ಕಳಿಸಬೇಕು. ಅವೆರಡೂ ಸರಿಯಾಗಿದೆ ಎನ್ನುವುದರ ಬಗ್ಗೆ ಒಂದು ಅಫಿಡಾವಿಟ್‌ನ್ನು ಆ ಅಧಿಕಾರಿಗಳು ಕೊಡುವಂತೆ ಮಾಡಬೇಕು. ಹೀಗೆ ಮಾಡಿದರೆ ಮಾತ್ರ ಅವರ ಅಕ್ರಮ ವ್ಯವಹಾರದ ಆಸ್ತಿಯನ್ನು ಕಂಡ ಹಿಡಿಯಲು ಸಾಧ್ಯವಾಗುತ್ತದೆ. ಮತ್ತೆ ಪ್ರತಿಯೊಬ್ಬ ಮೇಲಧಿಕಾರಿಯು

(ಶ್ರೀ ಪಿ. ಸಿ. ಶೆಟ್ಟರ್)

5 ವರ್ಷಗಳಿಗೊಮ್ಮೆ ತನ್ನ ಕೈಕೆಳಗಿರುವ ಅಧಿಕಾರಿಗಳ ಅಸೆಟ್ಸ್ ಅಂಡ್ ಲೈಯೆಬಿಲಿಟೀಸನ್ನು ಸ್ಕ್ರೂಟಿನಿ ಮಾಡಿ, ಪರೀಕ್ಷೆ ಮಾಡಿ ಸೂಕ್ತಕ್ರಮ ತೆಗೆದುಕೊಳ್ಳಬೇಕೆಂಬ ನಿಯಮವನ್ನೂ ಮಾಡಬೇಕು. ಅದೇ ರೀತಿ ಈಗ ಇರುವಂತಹ ಸಿ ಐ ಡಿ ಸೆಲ್ಸ್ ಮತ್ತು ವಿಜಿಲೆನ್ಸ್ ಸೆಲ್ಲುಗಳನ್ನು ಪ್ರತಿಯೊಂದು ಜಿಲ್ಲೆಯಲ್ಲಿಯೂ ಮಾಡಬೇಕು. ಅಲ್ಲದೆ ಇಂತಹ ಸೆಲ್ಲುಗಳನ್ನು ಒಂದು ಸ್ವತಂತ್ರ ಫೋರಂನ ಹಾಗೆ ಮಾಡಬೇಕೇ ಹೊರತು, ಅದನ್ನು ಬೇರೆ ಖಾತೆಯ ಅಧೀನದಲ್ಲಿರುವಂತೆ ಮಾಡ ಬಾರದು. ಮತ್ತು ಬೇರೆ ಖಾತೆಗಳಲ್ಲಿ ಕೆಲಸ ಮಾಡಿದ ಅಧಿಕಾರಿಗಳನ್ನು ಇಲ್ಲಿ ನೇಮಿಸಬಾರದು. ಅದೇ ರೀತಿ ಗೆಜೆಟೆಡ್ ಆಫೀಸರುಗಳನ್ನು ಅವರ ನೇಟಿವ್ ಜಿಲ್ಲೆಯಲ್ಲಿ ಯಾವುದೇ ಹುದ್ದೆಗಳಿಗೆ ಹಾಕಬಾರದು. ಮತ್ತು ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಇಂತಹ ''ಕಮಿಶನ್ಸ್''ಗಳ ಮೇಲೆ ಯಿದ್ದಂತೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಹಾಗೆ ಕ್ರಮ ತೆಗೆದುಕೊಳ್ಳದಿದ್ದರೆ, ತಪ್ಪು ಮಾಡಿ ದವನಿಗಿಂತಲೂ ಹೆಚ್ಚಿನ ಕ್ರಮವನ್ನು ಯಾರು ಕ್ರಮ ತೆಗೆದುಕೊಳ್ಳಬೇಕೋ ಆ ಅಧಿಕಾರಿಯಮೇಲೆ ತೆಗೆದುಕೊಳ್ಳುವ ಒಂದು ಅವಕಾಶವನ್ನು ನಾವು ಇಂದು ರೂಪಿಸಬೇಕಾಗಿದೆ. ಇವತ್ತು ವಿರೋಧ ಪಕ್ಷದವರು ಎಷ್ಟು ಮಟ್ಟಿಗೆ ಶಕ್ತಿಯುತರಾಗಿದ್ದಾರೆ ಎಂಬುದರ ಬಗ್ಗೆ ನಾನು ಮಾತನಾಡಲು ಹೋಗವುದಿಲ್ಲ. ಆದರೆ ನಮ್ಮ ದೇಶದಲ್ಲಿ ಇವತ್ತು ಜನರು ನಮ್ಮ ಆಡಳಿತವು ಸರಿಯಾದ ರೀತಿಯಲ್ಲಿ ನಡೆಯುತ್ತದೆ; ಎಲ್ಲರಿಗೂ ನ್ಯಾಯ ದೊರೆಯುತ್ತದೆ ಎಂದು ತಿಳಿದುಕೊಂಡಿದ್ದಾರೆ. ಆದ್ದರಿಂದ ಬರೇ ಭಾಷಣಗಳಲ್ಲಿ ನಮ್ಮ ಕಾರ್ಯಕ್ರಮವನ್ನು ಹೇಳಿದರೆ ಇಂದು ಸಾಲದು ; ಅದನ್ನು ಕಾರ್ಯತಃ ಜಾರಿಯಲ್ಲಿ ತರಬೇಕಾಗಿದೆ. ಆದ್ದರಿಂದ ಸರ್ಕಾರ ಕೈಗೊಂಡ ನಿಯಮಗಳನ್ನು ಮಂತ್ರಿಯವರು ಆಚರಣೆಗೆ ತರುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು ಅಧಿಕಾರಿಗಳು ಏನಾದರೂ ತಪ್ಪು ಮಾಡಿದರೆ ಅಥವಾ ಅವರ ಮೇಲೆ ಟೀಕೆ ಟಿಪ್ಪಣಿಗಳನ್ನು ಯಾರಾದರೂ ಇಲ್ಲಿ ಮಾಡಿದರೆ, ಅಂತಹ ಅಧಿಕಾರಿಗಳನ್ನು ಸಮರ್ಥನೆ ಮಾಡಿಕೊಂಡು ಅದು ತಪ್ಪು ಎಂದು ಹೇಳುವ ಗೋಜಿಗೆ ಹೋಗ ಬಾರದು. ಆದ್ದರಿಂದ ಯಾರೇ ಆಗಿರಲಿ ಅಧಿಕಾರಿಗಳು ತಪ್ಪು ಮಾಡಿದರೆ, ಅಂಥ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದರೆ, ಸಂಬಂಧಪಟ್ಟ ಮಂತ್ರಿಯವರು ಅದರ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇವೆಂದು ಹೇಳಬೇಕೇ ಹೊರತು ಅದು ಸುಳ್ಳು, ಅಥವಾ ಅದು ಸರಿಯಿಲ್ಲವೆಂದು ಹೇಳಿ ಅಂಥ ಅಧಿಕಾರಿಗಳನ್ನು ಡಿಫೆಂಡ್ ಮಾಡುವುದಕ್ಕೆ ಹೋಗಬಾರದೆಂದು ಕೇಳಿಕೊಳ್ಳುತ್ತೇನೆ. ಈ ರೀತಿ ಮಾಡದೆ ಇನ್ನೂ ಅವರನ್ನು ಡಿಫೆಂಡ್ ಮಾಡುತ್ತಾ ಹೋದರೆ ಅವರ ಪರವಾಗಿ ವಾದ ಮಾಡು ವುದಕ್ಕೆ ನೀವು ಇಲ್ಲಿ ವಕೀಲರಾಗಿದ್ದೀರಾ; ಆದ್ದರಿಂದ ನಾವು ಇನ್ನೂ ಹೆಚ್ಚಿನ ತಪ್ಪನ್ನು ಅಥವಾ ಕಿರುಕುಳವನ್ನು ಜನರಿಗೆ ಕೊಟ್ಟರೂ ಪರವಾಗಿಲ್ಲವೆಂದು ತಿಳಿದುಕೊಂಡು ಇನ್ನೂ ಹೆಚ್ಚಿನ ತಪ್ಪುಗಳನ್ನು ಮಾಡುವುದಕ್ಕೆ ಅಂಥ ಅಧಿಕಾರಿಗಳಿಗೆ ಅವಕಾಶವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೋದ ಸಾರಿಯೂ ಹೇಳಿದ್ದೇನೆ. ಯಾರ್ಯಾರು ತಪ್ಪಿತಸ್ಥರು ಇದ್ದಾರೆ, ಅಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು. ಯಾರೂ ಈಗ ಅಂಥವರನ್ನು ಡಿಫೆಂಡ್ ಮಾಡುವುದಕ್ಕೆ ಹೋಗಿಲ್ಲವಲ್ಲ.

ಶ್ರೀ ಪಿ. ಸಿ. ಶೆಟ್ಟರ್.—ನೀವು ಡಿಫೆಂಡ್ ಮಾಡಬೇಡಿ ಎಂದು ಹೇಳುತ್ತಿದ್ದೇನೆ.

ಇನ್ನು ಪ್ರಿವೆನ್‌ಷನ್ ಆಫ್ ಕರಪ್ಷನ್ ಆಕ್ಟಿನ ಬಗ್ಗೆ ಒಂದು ಸಲಹೆ ಕೊಡುತ್ತೇನೆ. ಎಲ್ಲಿ ಪ್ರೈಮಾಫೇಸಿ ಕೇಸ್ ಆಯಿತು ಅಲ್ಲಿ ಅಧಿಕಾರಿಯ ಮೇಲೆ ಬರ್ಡನ್ ಹಾಕಬೇಕು. ಇನ್ನುಮೇಲೆ ಪ್ರತಿಯೊಂದು ಆಕ್ಟಿನಲ್ಲಿಯೂ The officer is "empowered to" should be removed and "responsible to do this function" ಎಂದು ಹಾಕಬೇಕು. ಮತ್ತು "may do" should be removed and "he shall do" ಎಂದು ಜವಾಬ್ದಾರಿಯನ್ನು ಅಧಿಕಾರಿಯ ಮೇಲೆ ನಿಗದಿಯಾಗಿ ಹಾಕಬೇಕು. The powers of the officer should be mentioned specifically. The responsibility should be fixed on the officer concerned.

ಮತ್ತೊಂದು ವಿಷಯ. ರಾಜ್ಯಪಾಲರಾದ ಧರ್ಮವೀರರು ಆಡಳಿತ ನಡೆಸುತ್ತಿದ್ದಾಗ ಈ ರೇಸಿಂಗ್ ಕ್ಲಬ್ಬಿಗೆ 80 ಲಕ್ಷ ರೂಪಾಯಿ ಸಾಲ ಕೊಟ್ಟದ್ದಕ್ಕೆ ಸರ್ಕಾರ ಜಾಮೀನಾಗಿದೆ ಎಂದು ತಿಳಿದುಬಂದಿದೆ. ಅದನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿದೆಯೋ ಎಂದು ಕೇಳುತ್ತೇನೆ. ಇಂದು ಜೂಜಾಟದ ರೀತಿಯಲ್ಲಿರುವ ಈ ಕ್ಲಬ್ಬಿಗೆ ಹಣ ಕೊಡುವುದಕ್ಕೆ ಸರ್ಕಾರದವರಲ್ಲಿ ಹಣ ಇದೆ, ಆದರೆ ಬಡ ರೈತರ ಯೋಗಕ್ಷೇಮಕ್ಕೆ ಅಥವಾ ಬಡ ಜನರ ಅಭಿವೃದ್ಧಿ ಕೆಲಸಗಳಿಗಾಗಿ ರೊಕ್ಕ ಇಲ್ಲವೆಂದು ಹೇಳುವುದು ಇದು ಎಂತಹ ಸಮಾಜವಾದ ಎಂದು ನಾನು ಕೇಳುತ್ತೇನೆ.

ಈಗ ಬ್ಯಾಂಕಿನವರು ಅಷ್ಟೊಂದು ಸರಿಯಾಗಿ ಬಡ ರೈತರನ್ನು ನೋಡಿಕೊಳ್ಳುತ್ತಾ ಇಲ್ಲವೆಂಬ ವಿಷಯ ಮಾನ್ಯ ಮಂತ್ರಿಗಳಿಗೆ ತಿಳಿದಿದೆ. ಕೇಂದ್ರ ಸರ್ಕಾರವೂ ಸಹ ಬ್ಯಾಂಕುಗಳ ಮೇಲೆ ಸ್ವಲ್ಪ ಮಟ್ಟಿಗೆ ಹತೋಟಿಯನ್ನು ಇಟ್ಟುಕೊಳ್ಳುವುದು ಅಗತ್ಯ. ಕೇಂದ್ರ ಸರ್ಕಾರ ಈ ಕಾರ್ಯವನ್ನು ಮಾಡದಿದ್ದರೆ ರೈತರಿಗೆ ಹೆಚ್ಚಿದ ತೊಂದರೆಯಾಗುತ್ತದೆ.

ಕೊನೆಯದಾಗಿ ನಾನು ಈ ಬಡ್ಜೆಟ್ಟಿನ ಬಗ್ಗೆ ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ನಿಮ್ಮ ಬಡ್ಜೆಟ್ಟಿನಲ್ಲಿ ಇನ್ನು ಮುಂದೆ ಜಮಾ ಹೆಚ್ಚಾಗಬೇಕು. ಖರ್ಚು ಕಡಿಮೆಯಾಗಬೇಕು. ಇವತ್ತಿಗೆ ಸರ್ಕಾರ ಸರಿಯಾಗಿ ನಡೆಯುತ್ತಿದೆ ಎಂದು ಬಡ್ಜೆಟ್ ನೋಡಿ ಹೇಳಬಹುದು. ಆದರೆ ಮುಂದೆ ಏನಾದರೂ ಓವರ್ ಡ್ರಾಫ್ಟ್‌ಗೆ ಮತ್ತೆ ಈ ಸರ್ಕಾರ ಹೋಗುವುದಾದರೆ ಆಗ ಈ ಸರ್ಕಾರ ಅಷ್ಟು ಮೆಚ್ಚುಗೆಗೆ ಪಾತ್ರವಾಗಲಿಕ್ಕಿಲ್ಲ. ಖರ್ಚನ್ನು ಆದಷ್ಟು ಮಟ್ಟಿಗೆ ಒಂದು ಹತೋಟಿಗೆ ತರುವ ರೀತಿಯಲ್ಲಿ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ.

ನನಗೆ ಇಷ್ಟು ಹೊತ್ತು ಮಾತನಾಡಲು ಅಧ್ಯಕ್ಷಣಿಯವರು ನನಗೆ ಕಾಲಾವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷಣಿಯವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು (ಬೇತಮಂಗಲ).—ಸನ್ಮಾನ್ಯ ಅಧ್ಯಕ್ಷಣಿಯವರೇ ನಮ್ಮ ಅರ್ಥ ಸಚಿವರು ಮಂಡಿಸಿರತಕ್ಕ ಆಯವ್ಯಯ ಪತ್ರವನ್ನು ನಾನು ಸ್ವಾಗತಿಸುತ್ತಾ ಅದರ ಬಗ್ಗೆ ನನ್ನ ಸಲಹೆಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. 1972-73ನೇ ಆಯವ್ಯಯ ಪತ್ರದಲ್ಲಿ ಕೃಷಿಗೆ 6 ಕೋಟಿ ರೂಪಾಯಿಗಳನ್ನೂ ಕೈಗಾರಿಕೆಗೆ 15 ಕೋಟಿ ರೂಪಾಯಿಗಳನ್ನೂ ಇಟ್ಟಿದ್ದೀರಿ. ಆದರೆ ಕೃಷಿಗೆ ಹೆಚ್ಚಿಗೆ ಪ್ರಾಧಾನ್ಯತೆ ಕೊಡಬೇಕಾಗಿರುವುದರಿಂದ ಅದಕ್ಕೆ ಹೆಚ್ಚಿಗೆ ಹಣ ಇಡಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಿಜವಾಗಿ ಶ್ರಮಜೀವಿಗಳಿಗಿಂತ ಬುದ್ಧಿಜೀವಿಗಳು ತುಂಬಾ ಸುಖವಾಗಿದ್ದಾರೆ. ಶ್ರಮಜೀವಿಗಳು ಬಿಸಿಲು, ಮಳೆಗಳಲ್ಲಿ ಇದ್ದುಕೊಂಡೇ ಕೆಲಸಮಾಡಬೇಕು. ಆದ್ದರಿಂದ ಬುದ್ಧಿಜೀವಿಗಳಿಗೆ ಸುಖ, ಶ್ರಮಜೀವಿಗಳಿಗೆ ಕಷ್ಟ ಇರುತ್ತದೆ. ಅದರಿಂದಲೇ ಕೃಷಿ ಕೆಲಸಕ್ಕೆ ಹೆಚ್ಚಿಗೆ ಜನ ಬರುವುದಿಲ್ಲ. ಬಿಸಿಲು ಮತ್ತು ಮಳೆಯಲ್ಲಿಯೇ ಶ್ರಮಜೀವಿಗಳು ಕೆಲಸ ಮಾಡಬೇಕಾಗಿದೆ. ಆ ಟೈಂನಲ್ಲಿ ಅವರು ಕೆಲಸ ಮಾಡುವುದಕ್ಕಾಗುವುದಿಲ್ಲ. ಆ ಟೈಂ ಬಿಟ್ಟು ಕೆಲಸ ಮಾಡಬೇಕು. ಅವರಿಗೆ ಬಹಳ ಕಷ್ಟವಿರುತ್ತದೆ. ಆದರೆ ಕೃಷಿ ಮಾಡುವವರನ್ನು ಈ ದೇಶದ ಬೆನ್ನು ಮೂಳೆಯೆಂದು ಹೇಳುತ್ತಿದ್ದಾರೆ. ಆ ರೀತಿ ಕವಿಗಳು ಮಾತ್ರ ಹೇಳುತ್ತಾರೆ. ಇದಕ್ಕೆ ಉತ್ತೇಜನವಂತೂ ಸಿಗುತ್ತಾ ಇಲ್ಲ. ಆದ್ದರಿಂದಲೇ ಈಗ ಕೃಷಿಕನಿಗೆ ಸಮಾಜದಲ್ಲಿ ಸರಿಯಾದ ಸ್ಥಾನವಿಲ್ಲದಂತಾಗಿದೆ. ಈಗ ವ್ಯವಸಾಯ ತೆರಿಗೆ ವಗೈರೆಗಳನ್ನು ಕೃಷಿಕನ ಮೇಲೆ ವಿಶೇಷವಾಗಿ ಹೇರುತ್ತಿದ್ದಾರೆ. ಕೃಷಿಕನಿಗೆ ಬೇಕಾದ ಗೊಬ್ಬರ, ಕಬ್ಬಿಣ, ವಿದ್ಯುಚ್ಛಕ್ತಿ ಸರಬರಾಯಿಗೆ ಆಗತಕ್ಕ ಖರ್ಚು ಇವೆಲ್ಲಾ ಹೆಚ್ಚಿಗೆ ದುಬಾರಿಯಾಗಿರುವುದರಿಂದ ಅವನು ಒಂದಕ್ಕೆರಡರಷ್ಟು ತೆರಿಗೆಗಳನ್ನು ಕೊಡಬೇಕಾಗಿದೆ. ಇದರಿಂದ ಅವನು ಬೆಳೆದ ಪದಾರ್ಥಗಳಿಗೂ ಹೆಚ್ಚಿನ ಬೆಲೆಯನ್ನು ವಿಧಿಸಬೇಕಾಗಿ ಬರುತ್ತದೆ. ಅಲ್ಲದೆ ರೈತನು ಬೆಳೆದ ಪದಾರ್ಥಗಳು ಸರಿಯಾಗಿ ಅವನ ಮನೆಗೆ ಬರುವುದಕ್ಕೆ ಅನೇಕ ಕಷ್ಟಗಳು ಉಂಟಾಗುತ್ತವೆ. ಇದಕ್ಕೆ ಮೂಲಕಾರಣ ಬೆಳೆಗಳಿಗೆ ಬರತಕ್ಕ ರೋಗರುಜಿನಗಳು. ಇಂತಹ ತೊಂದರೆಗಳನ್ನು ಅನುಭವಿಸಿ ರೈತರು ಲೆವಿ ಕೊಡಬೇಕಾಗುತ್ತದೆ. ಇದನ್ನು ಗಮನಿಸಿದರೆ ರೈತನಿಗೆ ಏನು ಆದಾಯ ಬರುತ್ತದೋ ಗೊತ್ತಿಲ್ಲ. ಈ ಕಾರಣದಿಂದ ಬೆಳೆಯ ವಿಮಾ ಪದ್ಧತಿಯನ್ನು ಕೂಡಲೇ ಇಲ್ಲಿ ಜಾರಿಗೆ ತರುವುದು ಒಳ್ಳೆಯದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೃಷಿಗೆ ಬಡ್ಜೆಟ್ಟಿನಲ್ಲಿ ಕಡಿಮೆ ಹಣವನ್ನು ಇಟ್ಟಿರುವುದರಿಂದ ಕೈಗಾರಿಕೆಯ ಬಾಬಿಗೆ ಇಟ್ಟಹಾಗೆಯೇ ಕೃಷಿ ಬಾಬಿಗೆ ಇಡಬೇಕು ಮತ್ತು ಇನ್ನೂ ಜಾಸ್ತಿಯಾಗಿಯೇ ಇಟ್ಟರೆ ತುಂಬಾ ಒಳ್ಳೆಯದು. ಇದರಮೇಲೆ ಹಾಕತಕ್ಕ ತೆರಿಗೆ ವಗೈರೆಗಳನ್ನು ಕೂಡಲೇ ವಜಾ ಮಾಡಬೇಕೆಂದು ಹೇಳುತ್ತೇನೆ. ಅಗ್ರಿಕಲ್‌ಚರಲ್ ಫೈನಾನ್ಸ್ ಕಾರ್ಪೊರೇಷನ್ ಕೂಡ ಇವರಿಗೆ ಹೆಚ್ಚಿಗೆ ಸಹಾಯಮಾಡಬೇಕೆಂದು ಹೇಳುತ್ತೇನೆ.

ಇನ್ನು ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ವಿಚಾರ. ಇದಕ್ಕೆ ಸಂಬಂಧಪಟ್ಟ ಇಲಾಖೆಯಲ್ಲಿ ಸುಮಾರು 3-4 ವರ್ಷಗಳಿಂದಲೂ ಎಷ್ಟೋ ಫೈಲುಗಳು ತೀರ್ಮಾನವಾಗುತ್ತಲೇ ಇಲ್ಲ. ಇದಕ್ಕೆ ಒಂದು ಪ್ರತ್ಯೇಕ ಇಲಾಖೆಯಿದ್ದರೂ ಕೂಡ ವರ್ಷೇ ವರ್ಷೇ ಮೂರ, ನಾಲ್ಕು ವರ್ಷಗಳಿಂದಲೂ ತೆರಿಗೆ ಸಾಕಷ್ಟು ವಸೂಲಾಗುತ್ತಿಲ್ಲ. ಈ ರೀತಿಯಾಗಿ ಡಿಲೇ ಆಗುವುದಕ್ಕೆ ಕಾರಣವೇನೋ ಗೊತ್ತಿಲ್ಲ. ಪಕ್ಕದ ರಾಜ್ಯಗಳಲ್ಲಿ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಹಾಕುವುದಕ್ಕೆ ಮೊದಲೇ ಪಹಣಿ ಬರೆಯುವುದಕ್ಕೆ ವ್ಯವಸ್ಥೆ ಮಾಡಿದನಂತರ ರೆವಿನ್ಯೂ ಇನ್‌ಸ್ಪೆಕ್ಟರ್ ಆಗಲೀ ಅಥವಾ ಗ್ರಾಮದ ಶ್ಯಾನುಭೋಗರುಗಳಾಗಲೀ ಆ ಲೆಕ್ಕಗಳನ್ನು ಬರೆದುಕೊಂಡಾದಮೇಲೆ ರೆವಿನ್ಯೂ ಇಲಾಖೆಯವರು

(ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು)

ತೆರಿಗೆಯನ್ನು ನಿಗದಿಮಾಡಿ ಕರಾರುವಾಕ್ಕಾಗಿ ಅದನ್ನು ಹಾಕುವುದರಿಂದ ಅಲ್ಲಿ ತೆರಿಗೆ ವಸೂಲಿ ಕಾರ್ಯ ಹೆಚ್ಚಾಗಿ ಆಗಿ ಹೆಚ್ಚು ವರಮಾನ ಬರುತ್ತದೆ. ಅದೇ ರೀತಿಯಲ್ಲಿ ನಾವೂ ಸಹ ಇಲ್ಲಿ ಮಾಡಿದರೆ ಇಲಾಖೆಯಲ್ಲಿ ಖರ್ಚು ಕಡಿಮೆಯಾಗಿ ಹೆಚ್ಚು ವರಮಾನವನ್ನು ಪಡೆಯಬಹುದು. ಅನಾವಶ್ಯಕವಾದ ಖರ್ಚೂ ಸಹ ನಮಗೆ ಉಳಿಯುತ್ತದೆ ಡಿಲೇ ಆಗುವುದೂ ಕೂಡ ತಪ್ಪುತ್ತದೆ.

ಇನ್ನು ವಾಟರ್ ಸೆಸ್ ವಿಚಾರ. ಬತ್ತದ ಬೆಳೆಗೆ ಒಂದು ಎಕರೆಗೆ 20 ರೂಪಾಯಿಗಳಂತೆಯೂ ಕಬ್ಬಿನ ಬೆಳೆಗೆ ಎಕರೆಗೆ 40ರಿಂದ 60 ರೂಪಾಯಿಗಳಂತೆಯೂ ವಾಟರ್ ರೇಟನ್ನು ಹಾಕಿದ್ದೀರಿ. ವರ್ಷದ ಪೂರ್ತಿ ಕೆರೆಯಿಂದ ಅಥವಾ ಕಾಲುವೆಯಿಂದ ನೀರು ಹರಿದರೆ ಅದಕ್ಕೆ ಈ ರೀತಿಯಾಗಿ ತೆರಿಗೆ ಹಾಕುತ್ತಿದ್ದೀರೆಂದು ನಾನು ತಿಳಿಯುತ್ತೇನೆ. ಆದರೆ ಅನೇಕ ಕಡೆಗಳಲ್ಲಿ ಸಣ್ಣ ಕೆರೆ ಕುಂಟೆಗಳ ಕೆಳಗೆ ನೀರು ಬರುವುದಿಲ್ಲ. ಆಗ ಅಲ್ಲಿ ಕೇವಲ ಒಂದೆರಡು ತಿಂಗಳುಗಳು ಮಾತ್ರ ನೀರು ಹರಿಯುತ್ತದೆ. ಅಂಥಾದ್ದಕ್ಕೆ ವಾಟರ್ ಟ್ಯಾಕ್ಸ್ ಹಾಕುವುದು ಅಷ್ಟು ಚೆನ್ನಾಗಿರುವುದಿಲ್ಲ. ಇನ್ನು ಕೆಲವು ಕಡೆಗಳಲ್ಲಿ ಬಾವಿಗಳಿಂದ ಅಥವಾ ಪಂಪುಗಳಿಂದ ನೀರು ಹಾಯಿಸಿ ಕೆಲಸ ಮಾಡುತ್ತಾರೆ. ಆದರೆ ಕೆಲವು ಕಡೆಗಳಲ್ಲಿ ನೀರು ಬಾವಿಗಳ ಮೂಲಕ ಅಥವಾ ಕೆರೆಗಳ ಮೂಲಕ ಹರಿಯುತ್ತಿದೆ ಎಂಬುದನ್ನು ರುಜುವಾತು ಮಾಡಬೇಕಾದರೆ ರೈತರಿಗೆ ಬಹಳ ಕಷ್ಟವಾಗುತ್ತದೆ. ಅದನ್ನು ಪಹಣಿ ಮುಖಾಂತರ ಮಾಡಬೇಕಾಗುತ್ತವೆ. ಆ ವಿಷಯವನ್ನೂ ಸಹ ಯಾವ ರೀತಿ ಮಾಡಬೇಕೆಂಬುದನ್ನು ತಿಳಿದುಕೊಂಡು ಒಂದುವೇಳೆ ಕೆರೆ ಕುಂಟೆಗಳ ಕೆಳಗೆ ಬಾವಿಗಳಿಂದ ನೀರಾವರಿಯನ್ನು ಮಾಡುತ್ತಿದ್ದರೆ ಅಂತಹವರಿಗೆ ವಾಟರ್ ರೇಟ್ ಬಗ್ಗೆ ರಿಯಾಯಿತಿ ಮಾಡಬೇಕು. ಒಟ್ಟಿನಲ್ಲಿ ಈ ವಾಟರ್ ರೇಟಿನ ಬಗ್ಗೆ ನಾನು ಹೇಳುವುದಾದರೆ, ಈ ತೆರಿಗೆಯನ್ನು ಮೊದಲನ್ನಹಾಗೆಯೇ ರೈತರ ಮೇಲೆ ವಿಧಿಸುವುದು ಬಹಳ ಒಳ್ಳೆಯದು. ನಮ್ಮ ದೇಶದಲ್ಲಿ ಅಬ್ಕಾರಿ ಹರಾಜಿನಿಂದ ಎಷ್ಟು ವರಮಾನ ಬರುತ್ತದೋ ಅಷ್ಟು ವರಮಾನವನ್ನು ದವಸಧಾನ್ಯಗಳನ್ನು ಬೆಳೆಯುವುದರಿಂದ ಪಡೆಯುವುದಕ್ಕೆ ಸಾಧ್ಯವಿಲ್ಲ. ಆ ರೀತಿಯಾಗಿ ದವಸಧಾನ್ಯಗಳನ್ನು ಬೆಳೆಯುವವರಮೇಲೆ ತೆರಿಗೆ ಜಾಸ್ತಿ ಹಾಕಬಾರದು. ಇದರ ಬಗ್ಗೆ ಸರ್ಕಾರದವರು ದೀರ್ಘವಾಗಿ ಯೋಚನೆಮಾಡಿ ಈ ತೆರಿಗೆಯನ್ನು ಕೃಷಿಕರ ಮೇಲೆ ಹಾಕುವುದನ್ನೇ ವಜಾಮಾಡಬೇಕೆಂದು ನಾನು ಸಲಹೆಮಾಡುತ್ತೇನೆ.

ಕೊನೆಯದಾಗಿ, ಇಷ್ಟು ಮಾತುಗಳನ್ನು ಮಾತನಾಡಲು ನನಗೆ ಅವಕಾಶವನ್ನು ಕೊಟ್ಟಿದ್ದಕ್ಕೆ ಸಭಾಪತಿಗಳಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಬಿ. ಕೆ. ಸುಬ್ಬಯ್ಯ (ವಿರಾಜಪೇಟೆ). —ಮಾನ್ಯ ಅಧ್ಯಕ್ಷಣಿಯವರೇ, ನಾನು ನಮ್ಮ ಮಾನ್ಯ ಅರ್ಥಸಚಿವರು ಮಂಡಿಸಿರತಕ್ಕ ಬಡ್ಜೆಟ್ಟನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ತಿಳಿಸಬಚ್ಛಿಸುತ್ತೇನೆ. ನಾನು ವಿರಾಜಪೇಟೆ ತಾಲ್ಲೂಕನ್ನು ಪ್ರತಿನಿಧಿಸಿರತಕ್ಕವನು. ಈ ವಿರಾಜಪೇಟೆ ತಾಲ್ಲೂಕು ಕೊಡಗಿನಲ್ಲಿ ಅತಿಮುಖ್ಯವಾದ ವಿಭಾಗ. ಅಲ್ಲಿ ಹಿಂದಿನಿಂದಲೂ ರಸ್ತೆಗಳು ಸಾಕಷ್ಟು ದುರಸ್ತಿ ಆಗಿಲ್ಲ. ದೊಡ್ಡ ದೊಡ್ಡ ವಾಹನಗಳು ಸಂಚರಿಸುವುದಕ್ಕೆ ಬಹಳ ಕಷ್ಟವಾಗಿದೆ. ಅಲ್ಲಿರತಕ್ಕ ಸೇತುವೆಗಳು ಮತ್ತು ಕಲ್ವರ್ಟ್ಸ್ ಬಹಳ ಸಣ್ಣವಾಗಿರುವುದರಿಂದ ಅಲ್ಲಿ ದೊಡ್ಡ ದೊಡ್ಡ ವಾಹನಗಳು ದಾಟಲು ತುಂಬಾ ತೊಂದರೆಯಾಗಿದೆ. ಸರ್ಕಾರದವರು ಪ್ರಥಮವಾಗಿ ಅಲ್ಲಿ ಹಂತಹಂತವಾಗಿ ಯಾದರೂ ಅಲ್ಲಿರತಕ್ಕ ಸೇತುವೆಗಳ ಬಡಾವಣೆಯ ಕಾರ್ಯವನ್ನು ಮಾಡಬೇಕು.

ಇನ್ನು ಸಮಾಜಕಲ್ಯಾಣ ವಿಷಯದಲ್ಲಿ ಹೇಳಬೇಕಾದರೆ ನಮ್ಮ ಕಡೆ ಗಿರಿಜನರ ಅಭಿವೃದ್ಧಿಗಾಗಿ ಒಂದು ಅಡ್‌ಹಾಕ್ ಬ್ಲಾಕ್ ಎಂಬುದಾಗಿ ಮಾಡಿಕೊಂಡಿದ್ದಾರೆ. ಕೆಲವೇ ಸಂಸ್ಥೆಗಳು ಅಲ್ಲಿ ಒಬ್ಬ ಸ್ಪೆಷಲ್ ಆಫೀಸರ ಅಧೀನದಲ್ಲಿವೆ. ಉಳಿದ ಕೆಲವು ಸಂಸ್ಥೆಗಳು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರವರ ಅಧೀನದಲ್ಲಿಯೇ ಇಟ್ಟುಕೊಂಡಿದ್ದಾರೆ. ಹಿಂದೆ ಇವು ಬಿ. ಡಿ. ಒ. ಗಳ ಅಧೀನದಲ್ಲಿದ್ದವು. ಸ್ಪೆಷಲ್ ಆಫೀಸರವರ ಅಧೀನದಲ್ಲಿ ಇಲ್ಲದೆ ಇರುವ ಇತರ ಸಂಸ್ಥೆಗಳ ವಿಚಾರ ನೋಡಿಕೊಳ್ಳಲು ಅಲ್ಲಿ ವ್ಯವಸ್ಥೆ ಇಲ್ಲದೇ ಇರುವುದರಿಂದ ಹರಿಜನ-ಗಿರಿಜನ ಕೆಲಸ ಕಾರ್ಯಗಳನ್ನು ನೋಡಿಕೊಂಡು ಹೋಗುವುದಕ್ಕೆ ಯಾರು ಇಲ್ಲದಾಗಿದೆ. ಈ ರೀತಿಯಲ್ಲಿ ಅವರ ಕೆಲಸಕಾರ್ಯಗಳು ವಿಳಂಬವಾಗುವುದರಿಂದ ಆ ಇಲಾಖೆಯಲ್ಲಿ ಕೆಲಸಮಾಡುವ ಸಿಬ್ಬಂದಿಗಳಿಗೆ ಸಾಧಾರಣವಾಗಿ ಸುಮಾರು 10-15 ವರ್ಷ ಸರ್ವಿಸ್ ಆಗಿದ್ದರೂ ಅವರಿಗೆ ಇದುವರೆಗೂ ಒಂದು ಇನ್‌ಕ್ರಿಮೆಂಟನ್ನೂ ಕೊಡುತ್ತಿಲ್ಲ. ಅದು ಅವರಿಗೆ ಸಿಗುತ್ತಾ ಇಲ್ಲವೆಂಬ ಬಗ್ಗೆ ಬೇಕಾದರೆ ನಿದರ್ಶನ ಕೊಡುತ್ತೇನೆ. ಇದೊಂದು ದೊಡ್ಡ ಕೊರತೆ ಇದೆ. ಇನ್ನಾವ ಇಲಾಖೆಯಲ್ಲೂ ಇಂಥ ಕೊರತೆ ಇದೆ.

ಇನ್ನು ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಸಮಾಜ ಕಲ್ಯಾಣ ಇಲಾಖೆಯಲ್ಲೇ ದಕ್ಷರಿದ್ದರೂ ಅವರಿಗೆ ಪ್ರಮೋಷನ್ ಕೊಡದೆ ಅಲ್ಲಿಗೆ ಸಾಮಾನ್ಯವಾಗಿ

ರೆವಿನ್ಯೂ ಇಲಾಖೆಯಿಂದ ಜನರನ್ನು ತಂದು ತುಂಬುತ್ತಿದ್ದಾರೆ. ಕೆಲವು ವೇಳೆ ರೆವಿನ್ಯೂ ಇಲಾಖೆಯಿಂದ ತಂದ ಜನರನ್ನು ಮತ್ತೆ ಅಲ್ಲಿಗೆ ವಾಪಸ್ ಕಳುಹಿಸುತ್ತಾರೆ. ಇದನ್ನು ತಪ್ಪಿಸಬೇಕು. ಸಮಾಜ ಕಲ್ಯಾಣ ಇಲಾಖೆಯವರು 'ದೆ ಆರ್ ಗೋಯಿಂಗ್ ಟು ದಿ ಪೀಪಲ್' ಆದರೆ ರೆವಿನ್ಯೂ ಇಲಾಖೆಯವರ ವಿಚಾರವಾದರೋ. 'ಪೀಪಲ್ ಆರ್ ಕಮಿಂಗ್ ಟು ದೆಂ' ಹೀಗೆ ಇರುವುದರಿಂದ ಇಲ್ಲಿ ಒಂದು ಇಲಾಖೆಯವರನ್ನು ಇನ್ನೊಂದು ಇಲಾಖೆಗೆ ಹಾಕುವುದು ಸರಿಯಲ್ಲ. ಆದುದರಿಂದ ಸಮಾಜ ಕಲ್ಯಾಣ ಇಲಾಖೆಯಲ್ಲಿ ಸೇರಿ ಕೆಲಸ ಮಾಡತಕ್ಕವರಿಗೆ ನಿಸ್ಠೆಯಿಂದ ನೀತಿಯಿಂದ ಕೆಲಸ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಸಮಾಜ ಕಲ್ಯಾಣ ಇಲಾಖೆಯ ಉನ್ನತಸ್ಥಾನಕ್ಕೆ ಅದೇ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದವರನ್ನು ನೇಮಕ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ನಮ್ಮ ತಾಲ್ಲೂಕಿನಲ್ಲಿ ಪೊಲ್ಲಿ ಬೆಟ್ಟ ಅಂತ ಇದೆ, ಅಲ್ಲಿ ಇರತಕ್ಕ ಮೈನಾರ್ಟಿ ಕಮ್ಯುನಿಟಿಯವರ ಮೇಲೆ ಒಂದು ದೊಡ್ಡ ಲೂಟಿ ನಡೆದಿದೆ. ಆ ಸ್ಥಳಕ್ಕೆ ನಾನೂ ಮತ್ತು ಶ್ರೀ ಬೆಳ್ಳಿಯಪ್ಪನವರು ಮತ್ತು ಗುಂಡೂರಾಯರೂ ಹೋಗಿ ನೋಡಿದಾಗ ನಮಗೆಲ್ಲಾ ಬಹಳ ದುಃಖವಾಯಿತು. ಆದರೆ ಸರ್ಕಾರದವರು ತಕ್ಷಣ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ತಕ್ಕ ಬಂದೋಬಸ್ತನ್ನು ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ಜನರು ಸಿಕ್ಕಿಕೊಂಡಿದ್ದಾರೆ. ಆದರೆ ಇನ್ನು ಮುಂದಕ್ಕೆ ಅಂಥ ಕೃತ್ಯಗಳಾಗದಂತೆ ತಡೆಗಟ್ಟಬೇಕು.

ಇನ್ನು ಗಿರಿಜನರ ಬಗ್ಗೆ ಒಂದು ಅವರ ಅಭಿವೃದ್ಧಿಗಾಗಿ ಒಂದು ವಿಶೇಷ ಕಾರ್ಪೊರೇಷನ್ನನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. 1971ರ ಸೆನ್ಸಸ್ ಪ್ರಕಾರ ಅಲ್ಲಿ ಗಿರಿಜನರು 2½ಲಕ್ಷ ಹೆಚ್ಚುಜನ ಇದ್ದಾರೆ. ಅವರೆಲ್ಲ ಬಹಳ ಹಿಂದುಳಿದವರಾಗಿದ್ದಾರೆ. ಅದಕ್ಕಾಗಿ ಸರ್ಕಾರ ಒಂದು ಟ್ರೈಬಲ್ ವೆಲ್‌ಫೇರ್ ಕಾರ್ಪೊರೇಷನ್ ಎಂದು ನೇಮಕ ಮಾಡಿ ಇವರ ಅಭಿವೃದ್ಧಿಗೆ ಕೆಲಸಮಾಡಬೇಕು. ಹಾಗಾದರೇನೇ ಅವರ ಅಭಿವೃದ್ಧಿ ಆಗುವುದು. ನಮ್ಮಲ್ಲಿ ಅನೇಕ ಕಡೆ ತಾಲ್ಲೂಕ್ ಬೋರ್ಡುಗಳಲ್ಲಿ ಮತ್ತು ಗ್ರಾಮಪಂಚಾಯಿತಿಗಳಲ್ಲಿ ಈ ಗಿರಿಜನರ ಸಂಖ್ಯೆ ಎಷ್ಟೇ ಇದ್ದರೂ ಇವರಿಗೆ ಯಾರಿಗೂ ಪ್ರಾತಿನಿಧ್ಯ ಸಿಕ್ಕುತ್ತಿಲ್ಲ. ಅದಕ್ಕಾಗಿ ಇದಕ್ಕೆ ಸಂಬಂಧಪಟ್ಟ ಕಾನೂನುಗಳನ್ನು ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ. ಹಾಲಿ ಇರತಕ್ಕ ಕಾನೂನಿನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್. ಮಿಾನ್ಸ್ ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್ ಎಂದು ಹೇಳುತ್ತಾರೆ. ಅಂದರೆ ಅದರಲ್ಲಿ ಹೆಂಗಸಾದರೂ ಆಗಬಹುದು ಇಲ್ಲವೆ ಗಂಡಸಾದರೂ ಆಗಬಹುದು. ಇದು ಸರಿಯಲ್ಲ. ಹೀಗೆ ಮಿಶ್ರಮಾಡುವುದು ಸರಿಯಾದ್ದಲ್ಲ. ಇಂಥ ಲೋಪದೋಷದಿಂದ ಹೆಗ್ಗಡದೇವನಕೋಟೆ ಮತ್ತು ಚಾಮರಾಜನಗರ ಈ ತಾಲ್ಲುಕುಗಳಲ್ಲಿ ಗಿರಿಜನರ ಸಂಖ್ಯೆ 16 ಸಾವಿರಕ್ಕೂ ಮಿಾರಿದ್ದರೂ ಅಲ್ಲಿರತಕ್ಕ ಸ್ಥಳೀಯ ಸಂಸ್ಥೆಗಳಿಗೆ ಒಬ್ಬ ಗಿರಿಜನ ಪ್ರತಿನಿಧಿಯೂ ಬರಲಿಕ್ಕಾಗಿಲ್ಲ. ಇಂಥ ಕಡೆ ರಿಜರ್ವೇಷನ್ನಿದ್ದರೂ ಪ್ರಯೋಜನವಿಲ್ಲದಂತಾಗಿದೆ. ದಿಸ್ ಈಸ್ ದಿ ಮಿಸ್ಟೇಕಾಫ್ ದಿ ಅಕ್ಟ್. ಆದ್ದರಿಂದ ಸರ್ಕಾರದವರು ಈ ಗಿರಿಜನರಿಗೆ ಅನುಕೂಲ ಮಾಡಬೇಕಾಗಿದ್ದರೆ ಕಾನೂನಿನಲ್ಲಿ ಇರತಕ್ಕ ದೋಷವನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಇನ್ನು ಉಳಿದ ವಿಷಯಗಳನ್ನು ಬಾಕಿ ಕಾಲದಲ್ಲಿ ತಿಳಿಸುತ್ತೇನೆ. ಆದರೆ ಮಾನ್ಯ ವಿದ್ಯಾ ಸಚಿವರು ನನ್ನ ತಾಲ್ಲೂಕಿನಲ್ಲಿ ಐದು ಜೂನಿಯರ್ ಕಾಲೇಜುಗಳನ್ನು ಸ್ಥಾಪಿಸುವುದಕ್ಕೆ ಆಜ್ಞೆ ಮಾಡಿರುವುದರಿಂದ ಅವರಿಗೆ ನನ್ನ ಅಭಿನಂದನೆಗಳನ್ನರ್ಪಿಸಿ ನನ್ನ ಪುಟ್ಟ ಭಾಷಣವನ್ನು ಮುಗಿಸುತ್ತೇನೆ.

Sri GUNDU RAO.—General discussion will go on up to 28th. The demands for grants will commence on 29th. The demand No. 39 is postponed to 15th July 1972 and the Appropriation Bill will be taken up on 17th July 1972.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳಿದ್ದು ಕಾರ್ಯಕ್ರಮದ ಪಟ್ಟಿಯಲ್ಲಿ ಅಳವಡಿಸಿದೆ. The House will now rise and meet tomorrow at 1 P.M.

The House adjourned at Six of the Clock and meet again at One of the Clock on 27th June 1972.